# ಕರ್ನಾಟಕ ವಿಕಾಸ

# Karnataka Vikas

ನವೆಂಬರ್ November 2016





ಸಮಸ್ತ ಓದುಗರಿಗೆ
ಕನ್ನಡ ರಾಜ್ಯೋತ್ಸವದ
ಶುಭಾಶಯಗಳು

ಹೊಳಪು 2016 – ಉಡುಪಿ, ದ.ಕ. ಜಿಲ್ಲೆಗಳ ಪಂಚಾಯತ್ ರಾಜ್ ಮತ್ತು
ಸ್ಥಳೀಯ ಆಡಳಿತ ಪ್ರತಿನಿಧಿಗಳ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು
ಉದ್ಘಾಟಿಸಿ ಮಾತನಾಡುತ್ತಿರುವ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು






# ಕರ್ನಾಟಕ ವಿಕಾಸ


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ


ನವೆಂಬರ್ 2016

November 2016

ಸಂಪುಟ : 57
Volume : 57

ಸಂಚಿಕೆ : 12
Issue : 12


## ಈ ಸಂಚಿಕೆಯೊಳಗೆ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಡಾ. ಎನ್. ನಾಗಾಂಬಿಕಾ ದೇವಿ |
| 7 | ವಿಶೇಷ ಲೇಖನ | – ವಿವೇಕ್ ಅಮೀನ್ |
| 10 | ಲೇಖನ | – ಎನ್. ಕೃಷ್ಣಪ್ಪ ಕೊಡಿಪಾಳ್ಯ<br>– ರಾಚಯ್ಯ ಚೌಕಿಮಠ<br>– ಡಿ. ಪ್ರಾಣೇಶ್ ರಾವ್<br>– ನಿಂಗೇಗೌಡ<br>– ಮಹಮ್ಮದ್ ಇಮ್ತಿಯಾಜ್ |
| 36 | ಸಾಧಕರ ಸಂದರ್ಶನ | – ಡಾ॥ ರೇವಯ್ಯ ಒಡೆಯರ್ |
| 41 | ಯಶೋಗಾಥೆ | – ಚನ್ನವೀರಸ್ವಾಮಿ ಎಸ್ ಹಿರೇಮಠ<br>– ಎನ್. ಕೃಷ್ಣಪ್ಪ ಕೊಡಿಪಾಳ್ಯ |
| 46 | ಕವಿಯ(ಕ್ಷ)ಪ್ರಶ್ನೆ | – ಎಂ.ಗೀತಾ |
| 47 | ಕಾವ್ಯ ವಿಕಾಸ | – ಜಿಯಾವುಲ್ಲಾ ಯಳನಾಡು |
| 48 | ಸುತ್ತೋಲೆ | |



ಪ್ರಕಾಶಕರು

**ಎಂ.ಕೆ.ಕೆಂಪೇಗೌಡ**

ನಿರ್ದೇಶಕರು(ಪಂ.ರಾಜ್) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಪ್ರಧಾನ ಸಂಪಾದಕರು

**ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ

**ಮುಬಾರಕ್ ಅಹ್ಮದ್**

ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು

**ನಾಗರಾಜ್. ಬಿ. ವಾಗಾ**


### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ವಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಛೇರಿ ವಿಳಾಸ


ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857
www.rdpr.kar.nic.in
Email : kvrdpr@gmail.com


### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಅಕ್ಟೋಬರ್ 2016ರ ಸಂಚಿಕೆಯಲ್ಲಿ ಪ್ರಕಟವಾದ ಗಾಂಧಿಜಯಂತಿಯ ಸಂಕಲ್ಪ 2018 ಕ್ಕೆ ಬಯಲು ಬಹಿರ್ದೆಸೆ ಮುಕ್ತ ರಾಜ್ಯ (ಡಾ॥ ರೇವಯ್ಯ ಒಡೆಯರ್) ಮುಖಪುಟದ ಲೇಖನವು 174 ಗ್ರಾಮ ಪಂಚಾಯತಿಗೆ ಗಾಂಧಿ ಗ್ರಾಮ ಪುರಸ್ಕಾರ ನೀಡಿದ್ದು ರಾಜ್ಯದ ಬಹು ಸಂಖ್ಯೆಯ ಗ್ರಾಮ ಪಂಚಾಯತಿ ಅಧ್ಯಕ್ಷ/ ಸದಸ್ಯ/ ಪಿ.ಡಿ.ಓ ಗಳಿಗೆ ಮಾರ್ಗದರ್ಶನವೇ ಸರಿ! ಸ್ವಚ್ಛ ಭಾರತದ ಪರಿಕಲ್ಪನೆಗಳಿಗೆ ಸರ್ವರೂ ಸ್ಪಂದಿಸಿದಲ್ಲಿ ಫಲಕಾರಿ, ಸ್ವಚ್ಛಭಾರತ ಅಭಿಯಾನದಲ್ಲಿ ಮಂತ್ರಿ ಮಹೋದರರು, ಎಂ.ಎಲ್.ಎ/ ಎಂ.ಎಲ್.ಸಿ ತಮ್ಮನ್ನು ಹೇಗೆ ತೊಡಗಿಸಿಕೊಂಡಿರುವ ಮಾಹಿತಿಯು ಬಂದಲ್ಲಿ ಒಳ್ಳೆಯದು. ಸ್ವಚ್ಛತೆಯ ಕಡೆಗೆ ನಮ್ಮೆಲ್ಲರ ಹೆಜ್ಜೆ ಸಾಗಲಿ. ಪತ್ರಿಕೆಯ ಎಲ್ಲಾ ಲೇಖನ, ಸುತ್ತೋಲೆ, ಸರ್ಕಾರಿ ಆದೇಶಗಳು ಪ್ರಯೋಜನಕಾರಿಗಳಾಗಿವೆ.

**ಶ್ರೀ ಕೊತ್ತಲ ಮಹದೇವಪ್ಪ,**
ಲೇಖಕ, ವಿನಾಯಕ ನಗರ, ಲಕ್ಷ್ಮೇಶ್ವರ, ಗದಗ 582116

2016ರ ಅಕ್ಟೋಬರ್ "ಕರ್ನಾಟಕ ವಿಕಾಸ" ಮಾಸ ಪತ್ರಿಕೆ ವರ್ಣ ಭಾವಚಿತ್ರ, ವಿಶಿಷ್ಟ ಲೇಖನ, ವಿವಿಧ ಕಾರ್ಯಕ್ರಮ ಸಭೆ, ಓದುಗರಿಗೆ ಆಕರ್ಷಣೆಯಾಗಿ ಪ್ರೇರಣೆ ನೀಡಿದೆ. ಸರ್ಕಾರದ ಮೂರು ವರ್ಷ ಸಾಧನೆಯ ಬಗ್ಗೆ ಪುಸ್ತಕ ಬಿಡುಗಡೆ ನಿರ್ಮಲ ಕರ್ನಾಟಕ ಬಯಲು ಬಹಿರ್ದೆಸೆ ಮುಕ್ತ ಯೋಜನೆಗಳ ಪರಿಚಯ, ಆದರ್ಶ ಗ್ರಾಮಗಳಾಗಲು ಗಾಂಧಿಯ ಕನಸು ನನಸು, ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರ ಸಾಮರ್ಥ್ಯಾಭಿವೃದ್ಧಿ ತರಬೇತಿಯಲ್ಲಿ ಗಾಂಧೀಜಿ ಕಂಡ ಗ್ರಮೀಣಾಭಿವೃದ್ಧಿ ಕನಸಿನ ಮಾರ್ಗದರ್ಶನ, ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಅಂತರ್‌ರಾಷ್ಟ್ರೀಯ ತರಬೇತಿಯಲ್ಲಿ ವಿದೇಶಿ ಅಧಿಕಾರಿಗಳ ಜೊತೆ ಗ್ರಾಮೀಣಾಭಿವೃದ್ಧಿಯ ಪ್ರಗತಿ ಬಗ್ಗೆ ವಿಚಾರ, ವಿನಿಮಯ, ಪರಿಸರ ರಕ್ಷಣೆ, ಸುತ್ತೋಲೆ, ಪಂಚತಂತ್ರ, ಸಕಾಲ ವರದಿ, ಓದುಗರಿಗೆ ಪ್ರೇರಣೆ, ಉತ್ಸಾಹ, ಆಸಕ್ತಿ, ಶ್ರದ್ಧ ಮೂಡಿಸಿರುವುದು ತುಂಬ ಸಂತೋಷ,

**ಶ್ರೀ ಮರಿದೇವರ ಸಿದ್ದಪ್ಪ,**
ಚೌಡಾಪುರ ಅಂಚೆ, ಕೂಡ್ಲಿಗಿ ತಾಲೂಕು, ಬಳ್ಳಾರಿ 583135

"ಕರ್ನಾಟಕ ವಿಕಾಸ" ಮಾಸ ಪತ್ರಿಕೆಯು ಉತ್ತಮ ಪಾರದರ್ಶಕತೆಯೊಂದಿಗೆ ಮೂಡಿಬಂದಿರುವುದು ಸಂತೋಷವಾಗಿದೆ. ಅಕ್ಟೋಬರ್ 2ರ ಗಾಂಧೀ ಜಯಂತಿಯ ವಿಶೇಷವಾಗಿ ರಾಜ್ಯದ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳಿಗೆ ಗಾಂಧಿ ಗ್ರಾಮ ಪುರಸ್ಕಾರವನ್ನು 2016 ನೇ ಸಾಲಿನಲ್ಲಿ ನೀಡಿರುವುದು ಸ್ವಾಗತಾರ್ಹ. ಪಿಡಿಓ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ನೇರ ನೇಮಕಾತಿ ಕುರಿತು ಪಂಚಾಯತ್ ರಾಜ್ ನಿರ್ದೇಶಕರು ಬರೆದಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇರ ನೇಮಕಾತಿ ಗ್ರಾಮ ಪಂಚಾಯತ್ ಆಡಳಿತ ಸರ್ಕಾರದ ಕ್ರಮ ಲೇಖನವು ಪರೀಕ್ಷಾರ್ಥಿಗಳಿಗೆ ಬಹುಳ ಉಪಯುಕ್ತವಾಗಿದೆ. ಅಲ್ಲದೇ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ತಿಳಿದುಕೊಳ್ಳುವಲ್ಲಿ ಸದರಿ ಪತ್ರಿಕೆಯು ಉತ್ತಮ ಕಾರ್ಯನಿರ್ವಹಿಸುತ್ತಿದೆ.

**ಶ್ರೀ ಗಂಗರಾಜು ಎಂ,**
ಎನ್‌ಜಿಓ ವಸತಿಗೃಹ, ರಾಜಾಜಿನಗರ, ಬೆಂಗಳೂರು 560010.

## ಸಚಿವಾಲಯದಿಂದ

# ಸಂದೇಶ



**ಡಾ॥ ಎನ್. ನಾಗಾಂಬಿಕಾ ದೇವಿ**
ಭಾ.ಆ.ಸೇ
**ಸರ್ಕಾರದ ಪ್ರಧಾನ ಕಾರ್ಯದರ್ಶಿ**

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
**ಬಹುಮಹಡಿ ಕಟ್ಟಡ, ಬೆಂಗಳೂರು.**

**ಪ್ರಿಯ ಬಂಧುಗಳೇ,**

ನವೆಂಬರ್ ತಿಂಗಳು ಬಂದಂತಹ ದಿನಮಾನಗಳಲ್ಲಿ ಕನ್ನಡ ಬಾಷೆ, ಸಂಸ್ಕೃತಿ ಮತ್ತು ಪರಂಪರೆಗಳ ಬಗ್ಗೆ ಭಾವನಾತ್ಮಕ ಹಾಗೂ ವಾಸ್ತವಿಕ ನೆಲೆಯಲ್ಲಿ ಸರ್ಕಾರ/ ಸರ್ಕಾರೇತರ ಸಂಸ್ಥೆಗಳ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿ ನಾಡು-ನುಡಿಯ ಅಭಿವೃದ್ಧಿಯ ಬಗ್ಗೆ ಹಮ್ಮಿಕೊಂಡಿರುವುದು / ಹಮ್ಮಿಕೊಳ್ಳುತ್ತಿರುವುದು ರೂಢಿಗತ ಸಂಪ್ರದಾಯ ಮತ್ತು ಸಂತಸದ ಸಂಗತಿಯೂ ಆಗಿದೆ.

ಆದರೆ ವಾಸ್ತವಿಕವಾಗಿ ನಾಡು-ನುಡಿಯ ಅಭಿವೃದ್ಧಿಯಾಗಬೇಕಾದರೆ ಕನ್ನಡ ಭಾಷೆಯನ್ನಾಡುವ ಈ ನೆಲದ ಜನರ ಅಭಿವೃದ್ಧಿಯಾಗಬೇಕು ಅವರ ಬದುಕು ಶ್ರೀಮಂತವಾಗಬೇಕು. ಭಾಷೆ, ಸಂಸ್ಕೃತಿ ಮತ್ತು ಪರಂಪರೆಗಳು ನಿರಂತರವಾಗಿ ಉಳಿಯಬೇಕೆಂದರೆ ಕನ್ನಡ ಭಾಷೆಯನ್ನಾಡುವ ಕನ್ನಡದ ಜನರ ಬದುಕು ಹಸನಾಗಬೇಕು, ಬಾಳು ಹದಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಸರ್ಕಾರವು ತಳಮಟ್ಟದ ಜನರ ಮತ್ತು ಬಡಮಟ್ಟದ / ಬರ ಪೀಡಿತ / ಹಿಂದುಳಿದ ಜನತಾಣಗಳ ಅಭಿವೃದ್ಧಿಗೆ ರೂಪಿಸಿರುವ ಯೋಜನೆಗಳು ಪಾರದರ್ಶಕವಾಗಿ ಜನ ತಾಂತ್ರಿಕ ಸಂಸ್ಥೆಗಳ ಮೂಲಕ ಅನುಷ್ಠಾನಗೊಳ್ಳಬೇಕು. ಇದು ಸರ್ಕಾರವು ಒಳಗೊಂಡಂತೆ ಎಲ್ಲರ ಆಶಯ.

ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಜನತೆಯ ಏಳಿಗೆಗಾಗಿ ಇಲಾಖೆಯಲ್ಲಿ ಅನುಷ್ಠಾನಗೊಂಡಿರುವ ಅನೇಕ ಕಾರ್ಯಕ್ರಮಗಳು ಗ್ರಾಮೀಣ ಮಟ್ಟದಲ್ಲಿ ಜನಪ್ರಿಯಗೊಂಡಿದ್ದು, ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡು ಪ್ರಶಸ್ತಿಗಳಿಗೆ ಭಾಜನವಾಗುತ್ತಿರುವುದು ಇದಕ್ಕೆ ಸಾಕ್ಷಿ. ಇಂತಹ ಹಲವಾರು ನಿದರ್ಶನಗಳನ್ನು ಕರ್ನಾಟಕ ಸೃಷ್ಟಿಸಿದೆ ಮತ್ತು ಹೆಚ್ಚಿಸುತ್ತಾ ಹೋಗುತ್ತಿದೆ. ಪಂಚಾಯತ್ ರಾಜ್ ಕಾಯಿದೆಗೆ ತಿದ್ದುಪಡಿಗಳನ್ನು ತಂದು ನೈಜ ಪ್ರಜಾಪ್ರಭುತ್ವದ ವಿಕೇಂದ್ರೀಕರಣಕ್ಕೆ ಹೊಸಭಾಷ್ಯ ಬರೆದು 3 ಸ್ತರದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸಬಲೀಕರಣಗೊಳಿಸಲಾಗಿದೆ. ಈ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮೂಲಕ ಗ್ರಾಮೀಣ ಪ್ರದೇಶದ ಜನರ ಹಾಗೂ ಜನತಾಣಗಳ ಅಭಿವೃದ್ಧಿಯ ಆಶಯವನ್ನು ಹೊಂದಲಾಗಿದೆ. ಈ ಸಂಸ್ಥೆಗಳು ಪರಿಣಾಮಕಾರಿಯಾಗಿ ಬದ್ಧತೆಯಿಂದ ಜನಮುಖಿಯಾಗಿ ಕೆಲಸ ನಿರ್ವಹಿಸಬೇಕೆಂಬುದು ಎಲ್ಲಾರ ಅಪೇಕ್ಷೆ ಮತ್ತು ನಿರೀಕ್ಷೆ ಕೂಡ.

ಈ ಅಪೇಕ್ಷೆ ಮತ್ತು ನಿರೀಕ್ಷೆಗಳು ಈಡೇರಬೇಕಾದರೆ ಅಭಿವೃದ್ಧಿ ಪರವಾದ ಯೋಜನೆಗಳ ಫಲಶೃತಿ ಈ ನಾಡಿನ ಅರ್ಹ ಫಲಾನುಭವಿಗೆ ದಕ್ಕಬೇಕು. ಈ

ನಿಟ್ಟಿನಲ್ಲಿ ನೈಜ ಪ್ರಜಾಪ್ರಭುತ್ವದ ಜನ ತಾಂತ್ರಿಕ ಸಂಸ್ಥೆಗಳಾದ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್ ಸಂಸ್ಥೆಗಳು, ಸಂಸ್ಥೆಗಳ ಅಧಿಕಾರದಲ್ಲಿ ಭಾಗಿದಾರರಾದ ಪ್ರತಿನಿಧಿಗಳು, ಅಧಿಕಾರಿ ನೌಕರರು ಸ್ಪಂಧನ ಹಾಗೂ ಕ್ರೀಯಾ ಶೀಲತೆಯಿಂದ ಕಾರ್ಯನಿರ್ವಹಿಸಿದರೆ ಮಾತ್ರ ಸಾಧ್ಯವಾಗಬಲ್ಲದು. ಸಾಂಸ್ಥೀಕರಣಗೊಂಡ ಸಂಸ್ಥೆಗಳ ಸಬಲೀಕರಣಕ್ಕೆ ಒತ್ತು ನೀಡಿರುವ ಜೊತೆಗೆ ಗ್ರಾಮೀಣ ಶ್ರೀಸಾಮಾನ್ಯನಿಗೆ ಅವಶ್ಯವಿರುವ 100 ಸೇವೆಗಳನ್ನು ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಒಂದೇ ಸೂರಿನಡಿ ನೀಡಲಾಗುತ್ತಿದೆ. ಅಲ್ಲದೆ, ಗ್ರಾಮೀಣ ಜನರಿಗೆ ಅವಶ್ಯವಿರುವ 21 ಅಂಶಗಳ ಕಾರ್ಯಕ್ರಮಗಳನ್ನು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಹಾಗೂ ಇತರೆ ಕಾರ್ಯಕ್ರಮಗಳ ಮೂಲಕ ಒದಗಿಸಲಾಗುತ್ತಿದೆ.

ಎಲ್ಲಾ ಜನ ಹಾಗೂ ಜನತಾಣಗಳ ಅಭಿವೃದ್ಧಿ ಪರವಾದ ಕಾರ್ಯಕ್ರಮಗಳ, ಯೋಜನೆಗಳ ಫಲಶೃತಿಯನ್ನು ಮುಕ್ಕಾಗದಂತೆ ಗುಣಾತ್ಮಕವಾಗಿ ಜನರಿಗೆ ತಲುಪಿಸುವ ಮತ್ತು ಅಭಿವೃದ್ದಿಯ ಕಾರ್ಯಗಳು ಅನುಭವಕ್ಕೆ ಬರುವ ರೀತಿಯಲ್ಲಿ ಸಮಾಜ ಮುಖಿಯಾಗಿ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಒತ್ತಾಯಿಸುತ್ತೇನೆ. ಈ ಚಲನ ಶೀಲ ಪ್ರಕ್ರಿಯೆಯಲ್ಲಿ ತಾವುಗಳೆಲ್ಲರು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಜವಬ್ದಾರಿಗಳನ್ನು ಬದ್ದತೆಯಿಂದ ನಿರ್ವಹಿಸುವುದು.

ಮಳೆಯ ಕೊರತೆಯಿಂದಾಗಿ ಮತ್ತೊಮ್ಮೆ ರಾಜ್ಯವು ಬರದ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ತಾವುಗಳು ಕೇಂದ್ರ ಸ್ಥಾನದಲ್ಲಿದ್ದುಕೊಂಡು ಜನರ ಕುಡಿಯುವ ನೀರು ಪೂರೈಕೆ ಹಾಗೂ ಉದ್ಯೋಗವಕಾಶಗಳನ್ನು ಸಮಯ ಪ್ರಜ್ಞೆಯಿಂದ ಸಕಾಲದಲ್ಲಿ ಒದಗಿಸುವ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು. ಅಲ್ಲದೇ ಜಾನುವಾರುಗಳ ನೀರು ಮತ್ತು ಮೇವಿನ ಪೂರೈಕೆಗೂ ಸಹ ಗಮನ ಹರಿಸುವುದು.

ಇಂತಹ ಸರ್ಕಾರದ ಜನಪರ ಹಾಗೂ ಜನರಿಗೆ ಅತ್ಯಗತ್ಯ ಕಾರ್ಯಗಳನ್ನು ನಿರ್ವಹಿಸಲು ವಿಫಲವಾದಲ್ಲಿ ಹಲವಾರು ಸಮಸ್ಯೆಗಳಿಗೆ ಕಾರಣವಾಗುವ ಸಂದರ್ಭಗಳು ಸೃಷ್ಠಿಯಾಗುತ್ತವೆ. ಇಂತಹ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಕಾರ್ಯೋನ್ಮುಕರಾಗುತ್ತೀರ ಎಂಬ ನಂಬಿಕೆ ನನ್ನದು. ತಪ್ಪಿದಲ್ಲಿ ಕಾನೂನಿನ ಪ್ರಕಾರ ಕ್ರಮಗಳನ್ನು ಜರುಗಿಸುವುದು ಅನಿವಾರ್ಯವಾಗುತ್ತದೆ. ಇಂತಹ ವಿಷಾದದ ಪರಿಸ್ಥಿತಿಯನ್ನು ಸೃಷ್ಠಿಮಾಡದೇ ಪಾರದರ್ಶಕವಾಗಿ ಕೆಲಸ ನಿರ್ವಹಿಸಲು ಮತ್ತೊಮ್ಮೆ ಸೂಚಿಸುತ್ತೇನೆ.

(ಡಾ॥ ಎನ್. ನಾಗಾಂಬಿಕಾ ದೇವಿ)

ವಿಶೇಷ ಲೇಖನ

# ಉಡುಪಿಯ ಕೋಟದಲ್ಲೊಂದು ಪಂಚಾಯತ್ ರಾಜ್ ಒಲಂಪಿಕ್ಸ್



ವಿವೇಕ್ ಅಮೀನ್

ಹೊಳಪು – 2106, ಪಂಚಾಯತ್ ರಾಜ್ ಮತ್ತು ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ವಿವರವುಳ್ಳ ಲೇಖನ.

ಜನಜೀವನದಲ್ಲಿ ಕ್ರೀಡೆ ತನ್ನದೇ ಆದ ಛಾಪು ಒತ್ತಿಬಿಟ್ಟಿದೆ. ಕ್ರೀಡಾಸಕ್ತರಿಲ್ಲದ ಕ್ಷೇತ್ರವಿಲ್ಲ. ಆದರೆ, ದಿನನಿತ್ಯ ಜನಸಾಮಾನ್ಯರ ಜಂಜಾಟದ ನಡುವೆ ಓಡಾಡುವ ತಳಸ್ತರದ ಜನಪ್ರತಿನಿಧಿಗಳು ಪಕ್ಷಬೇಧ ಮರೆತು ಒಂದಾಗಿ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿರುವುದು ಈ ರಾಜ್ಯದಲ್ಲಿ ಇದೇ ಮೊದಲೇನೋ. ಇಲ್ಲಿಯವರೆಗೆ ರಾಜಕಾರಣದ ಹಗ್ಗ ಹಿಡಿದು ಜಗ್ಗಾಟ ಮಾಡುತ್ತಿರುವ ಸ್ಥಳೀಯ ಆಡಳಿತ ಪ್ರತಿನಿಧಿಗಳು ಪ್ರಪ್ರಥಮವಾಗಿ ತಮ್ಮ ತಮ್ಮ ಗ್ರಾಮ ಪಂಚಾಯತ್‌ನ ಪರವಾಗಿ ಒಟ್ಟಾಗಿ, ಒಂದಾಗಿ ಹಗ್ಗಜಗ್ಗಾಟಕ್ಕೆ ನಿಂತಿದ್ದರು.

ಉಡುಪಿ ಜಿಲ್ಲೆಯ, ಉಡುಪಿ ತಾಲ್ಲೂಕಿನ ಹೆಮ್ಮೆಯ ಕಡಲ ತಡಿಯ ಭಾರ್ಗವ ಕೋಟ ಡಾ॥ ಶಿವರಾಮ ಕಾರಂತರ ತಾಯ್ನೆಲವಾದ ಕಾರಂತರ ಜನ್ಮ ದಿನಾಚರಣೆ ಮತ್ತು ಪಂಚಾಯತ್ ಹಬ್ಬದ ಅಂಗವಾಗಿ ಆಯೋಜಿಸಲಾದ ಪಂಚಾಯತ್ ಪ್ರತಿನಿಧಿಗಳ ಕ್ರೀಡಾಕೂಟದಲ್ಲಿ ಸುಮಾರು 5000ಕ್ಕೂ ಮಿಕ್ಕಿ ಜನಪ್ರತಿನಿಧಿಗಳು ಪಕ್ಷಭೇದ ಮರೆತು ಒಟ್ಟಾಗಿ ಬೆರೆಯಲು ಅವಕಾಶವಾಯಿತು.




ಸರಳ ಸಜ್ಜನಿಕೆಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರ ನೇತೃತ್ವದಲ್ಲಿ ಡಾ॥ ಶಿವರಾಮ ಕಾರಂತರ ಜನ್ಮ ದಿನಾಚರಣೆಯ ಅಂಗವಾಗಿ ಕೋಟತಟ್ಟು ಗ್ರಾಮ ಪಂಚಾಯತ್ ಮತ್ತು ಡಾ॥ ಶಿವರಾಮ ಕಾರಂತ ಪ್ರತಿಷ್ಠಾನದ ಸಹಯೋಗದೊಂದಿಗೆ ನಡೆದ ಪಂಚಾಯತ್ ಪ್ರತಿನಿಧಿಗಳ ಸಾಂಸ್ಕೃತಿಕ ಮತ್ತು ಕ್ರೀಡಾಕೂಟದ ಯಶಸ್ಸು ಸ್ಥಳೀಯ ಆಡಳಿತದ ಒಗ್ಗಟ್ಟಿನ ಸಂದೇಶವನ್ನು ರಾಜ್ಯಕ್ಕೆ ರವಾನಿಸಿದೆ.

## ಹೊಳಪು ಮೂಡಿಸಿದ ಪರಿಚಯದ ಪರಿಭಾಷೆ

ಹೊಳಪು–2016– "ಪರಿಚಯದ ಪರಿಭಾಷೆ" ಹೆಸರಿನಲ್ಲಿ ನಡೆದ ಪಂಚಾಯತ್ ರಾಜ್ ಮತ್ತು ಸ್ಥಳೀಯ ಆಡಳಿತ ಪ್ರತಿನಿಧಿಗಳ ಸಾಂಸ್ಕೃತಿಕ

ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೋಟ ತಟ್ಟು ಗ್ರಾಮ ಪಂಚಾಯತ್, ಉಡುಪಿ ಜಿಲ್ಲೆ

ಮತ್ತು ಕ್ರೀಡಾಕೂಟದಲ್ಲಿ ಉಭಯ ಜಿಲ್ಲೆಗಳ ಜನಪ್ರತಿನಿಧಿಗಳು ಪಕ್ಷಭೇದ ಮರೆತು ತಮ್ಮ ತಮ್ಮ ಪಂಚಾಯತ್‌ಗಳ ಗೆಲುವಿಗಾಗಿ ಸ್ಪರ್ಧಾ ಮನೋಭಾವದಿಂದ ಭಾಗವಹಿಸುತ್ತಿದ್ದುದನ್ನು ನೋಡುತ್ತಿದ್ದರೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಒಗ್ಗಟ್ಟು ಸ್ಥಳೀಯ ಆಡಳಿತ ಪ್ರತಿನಿಧಿಗಳ ಮನಸ್ಸಿನಲ್ಲಿ ಹೊಳಪು ಮೂಡಿಸಿರುವುದು ನಿಜವೆನಿಸಿದೆ.

ರಾಜ್ಯದ 6022 ಗ್ರಾಮ ಪಂಚಾಯತ್‌ಗಳ ಪೈಕಿ ಉಡುಪಿ ಜಿಲ್ಲೆ, ಉಡುಪಿ ತಾಲೂಕಿನ ಕೋಟತಟ್ಟು ಗ್ರಾಮ ಪಂಚಾಯತ್ ವಿಶೇಷ ಕಾರ್ಯಕ್ರಮ ಆಯೋಜನೆಯಿಂದ ಉಳಿದೆಲ್ಲಾ ಗ್ರಾಮ ಪಂಚಾಯತ್‌ಗಳಿಂದ ಭಿನ್ನವಾಗಿ ಗುರುತಿಸಿಕೊಂಡು ರಾಜ್ಯದಲ್ಲೇ ಮಾದರಿಯಾಗಿದೆ. ಒಂದು ಗ್ರಾಮ ಸರ್ಕಾರದಲ್ಲಿ ಇಚ್ಛಾಶಕ್ತಿಯಿದ್ದರೆ ಏನೆಲ್ಲಾ ಮಾಡಬಹುದು ಎಂದು ಮಾಡಿ ತೋರಿಸಿದ ಹೆಮ್ಮೆ ಕೋಟತಟ್ಟು ಗ್ರಾಮ ಪಂಚಾಯತಿಯದು.

ಉಡುಪಿ ಜಿಲ್ಲೆಯ ಕೋಟತಟ್ಟು ಗ್ರಾಮ ಪಂಚಾಯತ್ ಕೇವಲ 13 ಸದಸ್ಯರ ಸಣ್ಣ ಗ್ರಾಮ ಪಂಚಾಯತ್‌ಗಳಲ್ಲೊಂದು. ಕಡಲ ತಡಿಯ ಭಾರ್ಗವ, ಜ್ಞಾನಪೀಠ ಪುರಸ್ಕೃತ ಡಾ॥ ಶಿವರಾಮ ಕಾರಂತರ ಹಾಗೂ ವಿಧಾನ ಪರಿಷತ್ತಿನಲ್ಲಿ ಸ್ಥಳಿಯ ಆಡಳಿತವನ್ನು ಪ್ರತಿನಿಧಿಸುವ ಮಾಜಿ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರ ಹುಟ್ಟೂರಾದ ಕೋಟತಟ್ಟು ಗ್ರಾಮ ಪಂಚಾಯತ್ 'ಹೊಳಪು-2016' ಪರಿಚಯದ ಪರಿಭಾಷೆ ಎಂಬ ಹೆಸರಿನಲ್ಲಿ ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಯ ಪಂಚಾಯತ್ ರಾಜ್ ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಆಯೋಜಿಸಿದ ಕಾರ್ಯಕ್ರಮದಲ್ಲಿ ಅವಳಿ ಜಿಲ್ಲೆಯ 400ಕ್ಕೂ ಮಿಕ್ಕಿ ಸ್ಥಳೀಯ ಸಂಸ್ಥೆಗಳ ಪೈಕಿ 300ಕ್ಕೂ ಹೆಚ್ಚಿನ ಪಂಚಾಯತ್‌ಗಳ 3500ಕ್ಕೂ ಮಿಕ್ಕಿ ಜನಪ್ರತಿನಿಧಿಗಳು ಹಗ್ಗ ಜಗ್ಗಾಟ, ಗುಂಡೆಸೆತ, ರಿಂಗ್ ಇನ್ ದಿ ವಿಕೆಟ್, ಓಟ, ಛದ್ಮವೇಷ, ಪಂಚಾಯತ್ ರಾಜ್ ಕ್ವಿಜ್‌ಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಹಾಗೂ 1500ಕ್ಕೂ ಮಿಕ್ಕಿ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ವೀಕ್ಷಕರಾಗಿ ಭಾಗವಹಿಸಿದ್ದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಹೆಚ್. ಕೆ. ಪಾಟೀಲ್‌ರವರು ದೀಪ ಬೆಳಗಿಸಿ ಉದ್ಘಾಟಿಸುವ ಮೂಲಕ ಕ್ರೀಡೋತ್ಸವಕ್ಕೆ ಅಧಿಕೃತ ಚಾಲನೆ ನೀಡಿದರು. ಸನ್ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರಾದ ಶ್ರೀಯುತ ಡಿ. ಎಚ್. ಶಂಕರಮೂರ್ತಿಯವರು ಜನಪ್ರತಿನಿಧಿಗಳ ಪಥ ಸಂಚಲನದ ಗೌರವ ವಂದನೆಯನ್ನು ಸ್ವೀಕರಿಸಿದರು. ಉಡುಪಿ ಜಿಲ್ಲೆಯ ಉಸ್ತುವಾರಿ ಹಾಗೂ ಕ್ರೀಡಾ ಮತ್ತು ಯುವಜನ ಸೇವಾ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್, ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಸುನೀಲ್ ಕುಮಾರ್, ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಸೇರಿದಂತೆ ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿಲ್ಲೆ, ತಾಲ್ಲೂಕು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರ ಸಹಿತ ನೂರಾರು ಗಣ್ಯರು ಸಮಾರಂಭಕ್ಕೆ ಸಾಕ್ಷಿಯಾದರು.



ಇಷ್ಟೊಂದು ಶಿಸ್ತುಬದ್ಧವಾದ ಜನಪ್ರತಿನಿಧಿಗಳ ಪಥ ಸಂಚಲನ ಹಾಗೂ ಕಾರ್ಯಕ್ರಮವನ್ನು ನಾನೆಂದೂ ನೋಡಿರಲಿಲ್ಲ. ಈ ಕಾರ್ಯಕ್ರಮ ಸ್ಥಳೀಯ ಆಡಳಿತದಲ್ಲೊಂದು ಇತಿಹಾಸ.

**ಶ್ರೀ ಡಿ. ಎಚ್. ಶಂಕರ ಮೂರ್ತಿ**
ಸನ್ಮಾನ್ಯ ಸಭಾಪತಿಯವರು,
ಕರ್ನಾಟಕ ಸರಕಾರ



ಹಗ್ಗ-ಜಗ್ಗಾಟ ಕೇವಲ ರಾಜಕೀಯಕ್ಕೆ ಸೀಮಿತವಾಗಿರಬೇಕು. ಅಭಿವೃದ್ಧಿಯ ವಿಷಯದಲ್ಲಿ ಸ್ಥಳೀಯ ಪ್ರತಿನಿಧಿಗಳು ಹಗ್ಗ-ಜಗ್ಗಾಟ ಮಾಡದೇ ಒಗ್ಗಟ್ಟಾಗಿ ಶ್ರಮಿಸಬೇಕಿದೆ.

**ಶ್ರೀ ಹೆಚ್.ಕೆ. ಪಾಟೀಲ್**
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್‌ರಾಜ್ ಸಚಿವರು



ಈ ಪಂಚಾಯತ್ ರಾಜ್ ಕ್ರೀಡೋತ್ಸವದ ಮುಖ್ಯ ಉದ್ದೇಶವೇನೆಂದರೆ, ಸ್ಥಳೀಯ ಪ್ರತಿನಿಧಿಗಳ ಕೂಗಿಗೊಂದು ಏಕಕಂಠದ ಬಲ ಬರಲಿ ಎನ್ನುವುದಷ್ಟೇ ಆಗಿದೆ. ಗ್ರಾಮೀಣಾಭಿವೃದ್ಧಿಯಲ್ಲಿ ಕ್ರಾಂತಿ ಮಾಡಿದ ಧರ್ಮಸ್ಥಳದ ಧರ್ಮಾಧಿಕಾರಿಯವರಾದ ಶ್ರೀ ವೀರೇಂದ್ರ ಹೆಗ್ಗಡೆಯವರು ಕ್ರೀಡೋತ್ಸವದ ಲಾಂಛನವನ್ನು ಬಿಡುಗಡೆ ಮಾಡಿ, ಗ್ರಾಮ ಸರ್ಕಾರ ನಡೆಸುವ ಜನಪ್ರತಿನಿಧಿಗಳು ಕ್ರೀಡೆಯಲ್ಲಿ ಮುಕ್ತವಾಗಿ ಭಾಗವಹಿಸಲಿ ಎಂದು ಶುಭ ಹಾರೈಸಿದರು. ಅಧಿಕಾರ ವಿಕೇಂದ್ರೀಕರಣದ ಹೊಸ ಭಾಷೆ ಬರೆದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ತಂದ ಅಬ್ದುಲ್ ನಜೀರ್ ಸಾಬ್‌ರ ಹೆಸರನ್ನು ಕ್ರೀಡಾಂಗಣದ ಮುಖ್ಯ ವೇದಿಕೆಗೆ ಹೆಸರಿಡಲಾಗಿತ್ತು. ಸ್ಥಳೀಯ ಆಡಳಿತದ ಸುತ್ತಮುತ್ತ ಆವರಿಸಿರುವ ಬಡತನ, ಜಾತೀಯತೆ, ಅನಕ್ಷರತೆ, ಸಭ್ಯ ನಾಗರಿಕರು ರೋಸಿ ಹೋಗುವಷ್ಟು ಭ್ರಷ್ಟಾಚಾರ ಇವುಗಳ ಬಗ್ಗೆ ಖಡಾಖಂಡಿತ ನಿರ್ದಾಕ್ಷಿಣ್ಯ ನಿಲುವು ಹೊಂದಿದ ಕಡಲತಡಿಯ ಭಾರ್ಗವ ಡಾ॥ ಶಿವರಾಮ ಕಾರಂತರ ಹೆಸರನ್ನು ಕ್ರೀಡಾಂಗಣದ ಮಹಾದ್ವಾರಕ್ಕಿಡಲಾಗಿತ್ತು.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಾಣಬೇಕಿದೆ. ಪರಿಶುದ್ಧ ಆಡಳಿತ ನೀಡಲು ಸ್ಥಳೀಯ ಆಡಳಿತಕ್ಕೆ ಸಮರ್ಪಕವಾದ ವಾತಾವರಣ ನಿರ್ಮಾಣವಾಗಬೇಕಿದೆ. ಅಧಿಕಾರ ವಿಕೇಂದ್ರೀಕರಣ ನಿಜಾರ್ಥದಲ್ಲಿ ಕಾರ್ಯಕ್ರಮ, ಅನುದಾನ ಮತ್ತು ಕಾರ್ಯ ನಿರ್ವಾಹಕರ ವರ್ಗಾವಣೆಯಾಗಬೇಕಿದೆ. ಈ ನಿಟ್ಟಿನಲ್ಲಿ ಕೋಟದಲ್ಲಿ ನಡೆದ ಪಂಚಾಯತ್ ರಾಜ್ ಕ್ರೀಡಾಕೂಟ ನೂತನ ಮೈಲುಗಲ್ಲಾಗಿದೆ. ಪಂಚಾಯತ್ ರಾಜ್ ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳ ಪ್ರತಿನಿಧಿಗಳ ಕ್ರೀಡಾಕೂಟ 'ಹೊಳಪು–2016' ಪರಿಚಯದ ಪರಿಭಾಷೆಯು ಗ್ರಾಮೀಣಾಭಿವೃದ್ಧಿಯ ಹೊಸ ಕನಸುಗಳನ್ನು ಹೊಸೆದಿದೆ.



ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಸ್ಥಳೀಯ ಸರ್ಕಾರದ ಜನಪ್ರತಿನಿಧಿಗಳು ತಮ್ಮ ನೋವು ದುಮ್ಮಾನಗಳನ್ನು ಮರೆತು, ಪಂಚಾಯತ್ ರಾಜ್ ವ್ಯವಸ್ಥೆಗೊಂದು ಏಕಕಂಠದ ಬಲ ಬರಲಿ ಎಂದು, ಒಗ್ಗಟ್ಟಾಗಿ ಸೇರಿ ಸ್ಥಳೀಯ ಪ್ರತಿನಿಧಿಗಳ ಕ್ರೀಡೋತ್ಸವ ಯಶಸ್ವಿಗೊಳಿಸಿದ್ದು ಪಂಚಾಯತ್ ರಾಜ್ ವ್ಯವಸ್ಥೆಯ ಗೆಲುವು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**
ಮಾನ್ಯ ಶಾಸಕರು, ಕರ್ನಾಟಕ
ವಿಧಾನ ಪರಿಷತ್

ಲೇಖನ



ಎನ್. ಕೃಷ್ಣಪ್ಪ ಕೋಡಿಪಾಳ್ಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ರಾಜ್ಯದ ಗ್ರಾಮೀಣ ಭಾಗದಲ್ಲಿನ 'ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ' ಸಮೀಕ್ಷೆಯನ್ನು ಪೂರ್ಣಗೊಳಿಸಲಾಗಿದೆ.

# ರಾಜ್ಯದ ಗ್ರಾಮೀಣ ಭಾಗದಲ್ಲಿನ 'ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ' (Manual Scavengers) ಸಮೀಕ್ಷೆ-2016

ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ನವದೆಹಲಿ ರವರ ಸೂಚನೆ ಮೇರೆಗೆ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ - 2011 (ಎಸ್‌ಇಸಿಸಿ-2011) ರಡಿ ಕಂಡು ಬಂದ ಗ್ರಾಮೀಣ ಭಾಗದಲ್ಲಿನ "ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ" (Manual Scavengers) ಸಮೀಕ್ಷೆ ನಡೆಸುವಂತೆ ತಿಳಿಸಿರುತ್ತಾರೆ. ಅದರಂತೆ,



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ರಾಜ್ಯದ ಗ್ರಾಮೀಣ ಭಾಗದಲ್ಲಿನ "ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ" (Manual Scavengers) ಸಮೀಕ್ಷೆಯನ್ನು ಪೂರ್ಣಗೊಳಿಸಲಾಗಿದೆ.

ರಾಜ್ಯದ ಗ್ರಾಮೀಣ ಭಾಗದಲ್ಲಿನ "ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ" (Manual Scavengers) ಸಮೀಕ್ಷೆಯನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ವಹಿಸಲಾಗಿತ್ತು.

- ಕೇಂದ್ರ ಸರ್ಕಾರದ ವತಿಯಿಂದ ನಡೆಸಲಾದ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ - 2011 (ಎಸ್‌ಇಸಿಸಿ-2011) ಮತ್ತು ರಾಜ್ಯದಿಂದ ನಡೆಸಲಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಎಸ್‌ಇಎಸ್-2015)ರ ಪಟ್ಟಿಯಲ್ಲಿ ಕಂಡು ಬಂದ ಗ್ರಾಮೀಣ ಭಾಗದಲ್ಲಿನ "ಮ್ಯಾನ್ಯುಯಲ್ ಸ್ಕ್ಯಾವೆಂಜರ್" (Manual Scavengers) ಗಳ ಸಮೀಕ್ಷೆಗೆ ಒಳಪಡಿಸಲಾಗಿದೆ.
- ಇದಲ್ಲದೆ, ಸಮೀಕ್ಷೆಯ ಸಂದರ್ಭದಲ್ಲಿ ಹೊಸದಾಗಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಕಂಡು ಬಂದಲ್ಲಿ ಅವರನ್ನು ಸಹ ಸಮೀಕ್ಷೆಯಲ್ಲಿ ಒಳಪಡಿಸಲಾಗಿದೆ.

ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಲಭ್ಯಗಳು -2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



- ಸಮೀಕ್ಷೆಗೆ ಕೇಂದ್ರ ಸರ್ಕಾರ ಯಾವುದೇ ಅನುದಾನ ನೀಡಿರುವುದಿಲ್ಲ. ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ರೂ.25.00 ಲಕ್ಷಗಳ ಅನುದಾನವನ್ನು ಸಮೀಕ್ಷಾ ಕಾರ್ಯಕ್ಕೆ ಒದಗಿಸಿದೆ.
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಿರ್ದೇಶಕರು (ಗ್ರಾಮೂಸೌ–2) ಇವರನ್ನು ರಾಜ್ಯ ಮಟ್ಟದ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಸಮೀಕ್ಷೆಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿತ್ತು.
- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ 14 ಸಹ ಸದಸ್ಯರುಗಳನ್ನು ಒಳಗೊಂಡ ಗ್ರಾಮೀಣ ಭಾಗದಲ್ಲಿನ "ಮ್ಯಾನ್ಯುಯಲ್ ಸ್ಕಾವೆಂಜರ್" (Manual Scavengers) ಸಮೀಕ್ಷೆಯ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿತ್ತು.
- ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 9 ಸಹ ಸದಸ್ಯರುಗಳನ್ನು ಒಳಗೊಂಡ ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿತ್ತು.
- ಆಯಾ ತಾಲ್ಲೂಕಿನ ತಹಶೀಲ್ದಾರ್‌ರವರ ಅಧ್ಯಕ್ಷತೆಯಲ್ಲಿ 7 ಸಹ ಸದಸ್ಯರನ್ನು ಒಳಗೊಂಡ ತಾಲ್ಲೂಕು ಮಟ್ಟದ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿತ್ತು.
- ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಆಯಾ ಜಿಲ್ಲೆಯ ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಸಮೀಕ್ಷಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.
- ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಆಯಾ ತಾಲ್ಲೂಕಿನ ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಸಮೀಕ್ಷಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.
- ಸಮೀಕ್ಷಾ ತಂಡ :
  - ❖ ಪಂಚಾಯತ್ ಅಭಿವೃದ್ಧಿ ಅಧಿಕಾರಿ
  - ❖ ಗ್ರಾಮ ಪಂಚಾಯತ್ ಕಾರ್ಯದರ್ಶಿ ಅಥವಾ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಅಥವಾ ಕರ ವಸೂಲಿಗಾರ ಮತ್ತು
  - ❖ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯ ಒಬ್ಬ ಪ್ರತಿನಿಧಿ
- ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಸಮೀಕ್ಷೆಗೆ (ಗ್ರಾಮೀಣ) ಅಗತ್ಯವಿರುವ ವಿವಿಧ ಹಂತದ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು, ಕೈಪಿಡಿ, ಪ್ರಶ್ನಾವಳಿ ಮತ್ತು ಸಮೀಕ್ಷಾ ನಮೂನೆಗಳನ್ನು ಮುದ್ರಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಕಳುಹಿಸಲಾಗಿತ್ತು.
- ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಸಮೀಕ್ಷೆಗೆ (ಗ್ರಾಮೀಣ) ಸಂಬಂಧಿಸಿದಂತೆ ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಅಧಿಕಾರಿ, ಸಿಬ್ಬಂದಿಗಳಿಗೆ ಮತ್ತು ಸಮೀಕ್ಷಾ ತಂಡದವರಿಗೆ ವಿವಿಧ ಹಂತಗಳಲ್ಲಿ ತರಬೇತಿಯನ್ನು ಸಹ ನೀಡಲಾಗಿತ್ತು.
- ಸಮೀಕ್ಷಾ ತಂಡ ಪಟ್ಟಿಯಲ್ಲಿನ (ಎಸ್‌ಇಸಿಸಿ–2011 ಮತ್ತು ಎಸ್‌ಇಎಸ್–2015) ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಮನೆ ಮನೆಗೆ ಭೇಟಿ ನೀಡಿ, ಸಮೀಕ್ಷೆಯ ನಮೂನೆಯಂತೆ ಸಮೀಕ್ಷೆ ನಡೆಸಿದೆ.
- ಸಮೀಕ್ಷೆಯಲ್ಲಿ ಕಂಡು ಬಂದ ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಪಟ್ಟಿಯನ್ನು ಆಯಾ ಗ್ರಾಮ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಆಯಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಲಾಗಿದೆ.

- ಆಯಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಪಟ್ಟಿಯನ್ನು ಆಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿರುತ್ತಾರೆ.
- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲೆಯಲ್ಲಿ ಕಂಡುಬಂದ ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಪಟ್ಟಿಯನ್ನು ಪರಿಶೀಲಿಸಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಳುಹಿಸಿರುತ್ತಾರೆ.

**ರಾಜ್ಯ ಗ್ರಾಮೀಣ ಭಾಗದ ಸಫಾಯಿ ಕರ್ಮಚಾರಿಗಳ ಸಮೀಕ್ಷೆಯಡಿ ಕಂಡು ಬಂದ ಸಫಾಯಿ ಕರ್ಮಚಾರಿಗಳ ಮಾಹಿತಿಯ ತ:ಖ್ತೆ**

| ಕ್ರ.ಸಂ | ಜಿಲ್ಲಾ ಹೆಸರು | ಜಿಲ್ಲೆಯಲ್ಲಿ ಕಂಡುಬಂದ ಗ್ರಾಮೀಣ ಸಫಾಯಿ ಕರ್ಮಚಾರಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 0 |
| 2 | ಬೆಂಗಳೂರು ಗ್ರಾ | 24 |
| 3 | ಬೆಂಗಳೂರು ನಗರ | 101 |
| 4 | ಬೆಳಗಾವಿ | 0 |
| 5 | ಬಳ್ಳಾರಿ | 10 |
| 6 | ಬೀದರ್ | 12 |
| 7 | ವಿಜಯಪುರ | 0 |
| 8 | ಚಿಕ್ಕಬಳ್ಳಾಪುರ | 14 |
| 9 | ಚಾಮರಾಜನಗರ | 0 |
| 10 | ಚಿಕ್ಕಮಗಳೂರು | 0 |
| 11 | ಚಿತ್ರದುರ್ಗ | 0 |
| 12 | ದಕ್ಷಿಣ ಕನ್ನಡ | 0 |
| 13 | ದಾವಣಗೆರೆ | 0 |
| 14 | ಧಾರವಾಡ | 0 |
| 15 | ಗದಗ್ | 0 |
| 16 | ಹಾಸನ | 0 |
| 17 | ಹಾವೇರಿ | 9 |
| 18 | ಕಲಬುರುಗಿ | 0 |
| 19 | ಕೊಡಗು | 0 |
| 20 | ಕೋಲಾರ | 149 |
| 21 | ಕೊಪ್ಪಳ | 0 |
| 22 | ಮಂಡ್ಯ | 49 |
| 23 | ಮೈಸೂರು | 0 |

- ಜಿಲ್ಲಾಧಿಕಾರಿಗಳು ಪಟ್ಟಿಯನ್ನು ಪರಿಶೀಲಿಸಿ, ಅನುಮೋದಿಸಿದ ನಂತರ, ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳೆಂದು ಘೋಷಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.
- ಇದರಂತೆ, ರಾಜ್ಯದಲ್ಲಿ ಒಟ್ಟು 474 ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳಿರುತ್ತಾರೆ. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)
- ಸಮೀಕ್ಷೆಯಲ್ಲಿ ಕಂಡುಬಂದ 474 ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ವಿವರವನ್ನು National Safai Karmachari Development & Finance Corporation, New Delhi ಅಂತರ್ಜಾಲದ ತಂತ್ರಾಂಶದಲ್ಲಿ ಅಳವಡಿಸಲು ಕ್ರಮ ವಹಿಸಲಾಗುತ್ತಿದೆ.



- ಸಮೀಕ್ಷೆಯಲ್ಲಿ ಕಂಡು ಬಂದ ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳಿಗೆ National Safai Karmachari Development & Finance Corporation, New Delhi ವತಿಯಿಂದ ಪುನರ್ವಸತಿ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.
- ಪುನರ್ವಸತಿ ಕೈಗೊಳ್ಳಲು ಪ್ರತಿ ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳಿಗೆ ರೂ.40,000/– ಗಳನ್ನು ಒದಗಿಸುತ್ತಾರೆ.
- ರಾಜ್ಯದ ವಿವಿಧ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಗುರುತಿಸುವ ಸಂದರ್ಭದಲ್ಲಿ ಗ್ರಾಮೀಣ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳನ್ನು ಫಲಾನುಭವಿಯಾಗಿ ಗುರುತಿಸಿ ಆದ್ಯತೆ ಮೇರೆಗೆ ಯೋಜನೆಯ ಫಲವನ್ನು ನೀಡಬಹುದಾಗಿದೆ.

ಲೇಖನ

# ಗ್ರಾಮ ಸ್ವರಾಜ್ಯದ ಕನಸಿಗೆ ಪ್ರಶಸ್ತಿಗಳ ಗರಿಮೆ



ರಾಚಯ್ಯ ಚೌಕಿಮಠ

ಪಂಚಾಯತ್ ರಾಜ್ ಇಲಾಖೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನೀಡುತ್ತಿರುವ ಪ್ರಶಸ್ತಿಗಳ ಬಗ್ಗೆ ಮಾಹಿತಿ.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಕನಸ್ಸಿನ ಕೂಸಾದ 'ಗ್ರಾಮ ಸ್ವರಾಜ್ಯ'ವನ್ನು ನನಸು ಮಾಡಲು ಹಲವಾರು ಆಯಾಮಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಬಹುದಾಗಿದೆ. ಅದರಲ್ಲಿ ಪ್ರತಿ ವರ್ಷ ಪಂಚಾಯತ್ ರಾಜ್ ಮಂತ್ರಾಲಯದಿಂದ ಶಿಫಾರಸ್ಸುಗೊಳ್ಳುವ ಹಲವು ವಿಧದ ಪ್ರಶಸ್ತಿಗಳಾದ ಪಂಚಾಯತ್ ಸಶಕ್ತೀಕರಣ ಪುರಸ್ಕಾರ, ರಾಷ್ಟ್ರೀಯ ಗೌರವ ಗ್ರಾಮ ಪುರಸ್ಕಾರ, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಹಾಗೂ ವಯೋಶ್ರೇಷ್ಠ ಸನ್ಮಾನ್ ಪುರಸ್ಕಾರಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡುವ ಮೂಲಕ ಪ್ರೋತ್ಸಾಹಿಸುವ ಮಹತ್ವದ ಕಾರ್ಯವು ಕೂಡ ಒಂದು. ಯಾವುದೇ ಒಬ್ಬ ವ್ಯಕ್ತಿ ಹಾಗೂ ಸಂಸ್ಥೆಗೆ ಆತನು ಅಥವಾ ಆ




ಸಂಸ್ಥೆಯು ಮಾಡಿದ ಮಹತ್ವದ ಕಾರ್ಯಗಳನ್ನು ಗುರುತಿಸಿ ಪ್ರಶಸ್ತಿ ನೀಡುವುದರ ಮೂಲಕ ಗೌರವಿಸಿದರೆ ಆ ವ್ಯಕ್ತಿ ಅಥವಾ ಸಂಸ್ಥೆಗೆ ಹೆಚ್ಚಿನ ಮಹತ್ವ ದೊರೆಯುವುದರೊಂದಿಗೆ ಮಾಡಿದ ಕಾರ್ಯಕ್ಕೆ ಪ್ರತಿಫಲ ಸಿಕ್ಕಂತಾಗಿ ಉಳಿದ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಮಾದರಿ ಆಗುವ ಸದಾವಕಾಶ ದೊರೆತಂತಾಗುತ್ತದೆ. ಈ ರೀತಿಯಾಗಿ ಪ್ರಶಸ್ತಿ ಪಡೆದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಉಳಿದ ಪಂಚಾಯತ್ ರಾಜ್ ಸಂಸ್ಥೆಗಳು ಅನುಕರಿಸುವುದರಿಂದ ಗ್ರಾಮ ಸ್ವರಾಜ್‌ದತ್ತ ದಾಪುಗಾಲಿಡಲು ಮುನ್ನುಡಿ ಬರೆದಂತಾಗುವುದು.

## ಪಂಚಾಯತಿ ಸಶಕ್ತೀಕರಣ ಪುರಸ್ಕಾರ:

ಭಾರತ ಸರ್ಕಾರವು ಆಯಾ ರಾಜ್ಯಗಳಲ್ಲಿನ ಪಂಚಾಯತ್ ರಾಜ್ ಸಂಸ್ಥೆಗಳ ಸಂಖ್ಯೆಗಳಿಗನುಗುಣವಾಗಿ ಹಿಂದಿನ ಆರ್ಥಿಕ ವರ್ಷದ

ಜಿಲ್ಲಾ ಪಂಚಾಯತ್ ಶಾಖೆ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲಾ ಮಗ್ಗುಲುಗಳಲ್ಲಿನ ಕಾರ್ಯವೈಖರಿಗಳನ್ನು ಪರಿಶೀಲಿಸಿ, ಪಂಚಾಯತ್ ಸಶಕ್ತೀಕರಣ ಪುರಸ್ಕಾರವನ್ನು ನೀಡುತ್ತಾ ಬರುತ್ತಿದೆ. ಈ ಪ್ರಶಸ್ತಿಯನ್ನು 2012-13ನೇ ಸಾಲಿಗಿಂತ ಮೊದಲು 'ಪಂಚಾಯತಿಗಳ ಸಬಲೀಕರಣ ಹಾಗೂ ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆ (Panchayath Empowerment, Accountability & Incentive Scheame)' ಎಂಬ ಹೆಸರಿನಲ್ಲಿ ಕೊಡಮಾಡಲಾಗುತ್ತಿತ್ತು. ಯಾವಾಗ 'ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆ'ಯನ್ನು ಕೇಂದ್ರ ಸರ್ಕಾರವು ಜಾರಿಗೆ ತರುವುದರೊಂದಿಗೆ ಈ ಪ್ರಶಸ್ತಿಯನ್ನು ಸಹಿತ ಎನ್.ಪಿ.ಟಿ.ಎಯುಡಿಯಲ್ಲಿ ನೀಡುವುದನ್ನು



ಪ್ರಾರಂಭಿಸಿಕೊಂಡಿತು. ಈ ಪ್ರಶಸ್ತಿಯನ್ನು 2 ಮಾದರಿಯಲ್ಲಿ ಅಂದರೆ, ಸಾಮಾನ್ಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ ಹಾಗೂ ವಿಷಯಾಧಾರಿತ ಪಂಚಾಯತಿ ಸಶಕ್ತೀಕರಣ ಪುರಸ್ಕಾರ ಎಂಬ ಹೆಸರಿನಲ್ಲಿ ನೀಡಲಾಗುತ್ತಿದೆ. ಸದ್ಯಕ್ಕೆ ಕರ್ನಾಟಕ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳ ಸಂಖ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಪಂಚಾಯತ್ ರಾಜ್ ಮಂತ್ರಾಲಯವು 1 ಜಿಲ್ಲಾ ಪಂಚಾಯತಿ, 2 ತಾಲ್ಲೂಕು ಪಂಚಾಯತಿಗಳು ಹಾಗೂ 4 ಗ್ರಾಮ ಪಂಚಾಯತಿಗಳಿಗೆ ಪ್ರಶಸ್ತಿಗಳನ್ನು ನೀಡುತ್ತಾ ಬರುತ್ತಿದೆ. ಸದರಿ ಪ್ರಶಸ್ತಿಯು ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಅಂದರೆ, ಪ್ರಶಸ್ತಿ ಪಡೆಯುವ ಜಿಲ್ಲಾ ಪಂಚಾಯತಿಗಳಿಗೆ ಆಯಾ ವರ್ಷದಲ್ಲಿ ಕೇಂದ್ರ ಸರ್ಕಾರದ ನಿರ್ಧಾರದಂತೆ ತಲಾ ರೂ.50ಲಕ್ಷಗಳು, ಪ್ರತಿ ತಾಲ್ಲೂಕು ಪಂಚಾಯತಿಗಳಿಗೆ ರೂ.25ಲಕ್ಷ




ಹಾಗೂ ಗ್ರಾಮ ಪಂಚಾಯತಿಗಳಿಗೆ ತಲಾ ರೂ.15 ಲಕ್ಷಗಳನ್ನು ನೀಡಿ ಪ್ರೋತ್ಸಾಹಿಸುತ್ತಿದೆ.

**ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರ:**

ದೇಶದಾದ್ಯಂತ ಗ್ರಾಮ ಸಭೆಗಳನ್ನು ಅತ್ಯುತ್ತಮವಾಗಿ ಬಳಸಿಕೊಂಡ ಒಟ್ಟು 20 ಗ್ರಾಮ ಪಂಚಾಯತಿಗಳಿಗೆ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರಗಳನ್ನು ನೀಡಲಾಗುತ್ತಿದೆ. ಈ ಮೂಲಕ ಗ್ರಾಮ ಸಭೆಗಳ ಮಹತ್ವವನ್ನು ಸಾಮಾನ್ಯ ನಾಗರೀಕರಿಗೆ ತಿಳಿಸುವುದರೊಂದಿಗೆ ಗ್ರಾಮ ಸಭೆಗಳಿಂದಾಗುವ ಅನುದಾನ, ಕಾರ್ಯಗಳು ಅಧಿಕಾರಿಗಳ ಪಾತ್ರವನ್ನು ಅರಿಯುವುದರೊಂದಿಗೆ ಕಾರ್ಯವೈಖರಿಯನ್ನು ಗುರುತಿಸಬಹುದಾಗಿದೆ. ಸದರಿ ಪ್ರಶಸ್ತಿಯು ರೂ.10ಲಕ್ಷಗಳ ನಗದು ಮೊತ್ತ ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ.

**ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಪ್ರಶಸ್ತಿ:**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ರಾಜ್ಯದಲ್ಲಿ ಅತ್ಯುತ್ತಮವಾಗಿ ಕಾರ್ಯರೂಪಕ್ಕೆ ತರುವಲ್ಲಿ ಶ್ರಮಿಸಿದ ಗ್ರಾಮ ಪಂಚಾಯತಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪಂಚಾಯತ್ ರಾಜ್ ಮಂತ್ರಾಲಯದ ಶಿಫಾರಸ್ಸಿನೊಂದಿಗೆ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಷ್ಟ್ರದಾದ್ಯಂತ 10 ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

ಪಂಚಾಯತಿ ಪುರಸ್ಕಾರಗಳು-2017ಕ್ಕೆ ಸಂಬಂಧಿಸಿದಂತೆ 2015-16ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳ ಪ್ರಗತಿಗಳನ್ನು



ಆಧರಿಸಿ ಪಂಚಾಯತ್ ರಾಜ್ ಮಂತ್ರಾಲಯವು ಅಂತರ್‌ಜಾಲದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಆನ್‌ಲೈನ್‌ನಲ್ಲಿ ಪ್ರಶ್ನಾವಳಿಗಳಿಗೆ ಮಾಹಿತಿಯನ್ನು ತುಂಬಿಸುವಂತೆ ಸೂಚಿಸಲಾಗಿತ್ತು. ಪಂಚಾಯತ್ ರಾಜ್ ಮಂತ್ರಾಲಯದ ಹಾಗೂ ರಾಜ್ಯ ಸರ್ಕಾರವು ಈ ಪ್ರಶಸ್ತಿಗಳಿಗೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಭಾಗವಹಿಸುವುದರ ಮೂಲಕ ಪ್ರಚುರ ಪಡಿಸಿ ಈ ನಿಟ್ಟಿನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಉತ್ತಮ ಕಾರ್ಯ ಮಾಡುವಲ್ಲಿ ಪ್ರೋತ್ಸಾಹಿಸಿದಂತಾಗುತ್ತದೆಂಬುದೇ ಪ್ರಮುಖ ಉದ್ದೇಶವಾಗಿದೆ. ಅದರಂತೆ, ಈ ವರ್ಷ ರಾಜ್ಯದಲ್ಲಿ 24ಜಿಲ್ಲಾ ಪಂಚಾಯತಿಗಳು, 46 ತಾಲ್ಲೂಕು ಪಂಚಾಯತಿಗಳು ಹಾಗೂ 573 ಗ್ರಾಮ ಪಂಚಾಯತಿಗಳು ಆನ್‌ಲೈನ್‌ನಲ್ಲಿ ಪ್ರಶ್ನಾವಳಿಗಳಿಗೆ ಮಾಹಿತಿಯನ್ನು ನೀಡಿರುತ್ತವೆ. ಈ ಪ್ರಶ್ನಾವಳಿಗಳಿಗೆ ಮುಂದಿನ ಹಂತವಾಗಿ 17 ಜಿಲ್ಲಾ ಪಂಚಾಯತಿಗಳು, 34 ತಾಲ್ಲೂಕು ಪಂಚಾಯತಿಗಳು ಹಾಗೂ 313 ಗ್ರಾಮ ಪಂಚಾಯತಿಗಳು ನೀಡಿರುವ ಮಾಹಿತಿಗಳು ಸರಿಯಾಗಿವೆಯೆಂದು Freez ಮಾಡಿರುತ್ತವೆ.

ಮುಂದುವರೆದು ಅಕ್ಟೋಬರ್ 19ನೇ ತಾರೀಖಿನಿಂದ 24ನೇ ತಾರೀಖಿನವರೆವಿಗೂ 3 ತಂಡಗಳಲ್ಲಿ ರಾಜ್ಯ ಮಟ್ಟದ ಕ್ಷೇತ್ರ ತಪಾಸಣೆಯನ್ನು ಮಾಡಲಾಯಿತು. ಈ ತಪಾಸಣೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಭರ್ತಿಗೊಳಿಸಿರುವ ಮಾಹಿತಿಯನ್ನು ಅಲ್ಲಿರುವ ದಾಖಲೆಗಳನ್ನು ಆಧರಿಸಿ ತಪಾಸಣೆಯ ಮೂಲಕ ಪರಿಶೀಲಿಸಲಾಯಿತು. ತದನಂತರ ದಿನಾಂಕ:07-11-2016 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಪಂಚಾಯತ್ ಕಾರ್ಯನಿರ್ವಹಣಾ ಪರಿಶೀಲನಾ ಸಮಿತಿ (ಎಸ್.ಪಿ.ಪಿ.ಎ.ಸಿ) ಸಭೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಪಂಚಾಯತ್ ರಾಜ್ ಮಂತ್ರಾಲಯಕ್ಕೆ ಚರ್ಚಿಸಿ ಅಂತಿಮವಾಗಿ ನಾಮನಿರ್ದೇಶನ ಮಾಡಲು ಸಭೆಯನ್ನು ನಡೆಸಲಾಯಿತು. ಸದರಿ ಸಭೆಯಲ್ಲಿ ಕೆಲವು ಮಹತ್ವವಾದ ತೀರ್ಮಾನಗಳನ್ನು ಕೈಗೊಳ್ಳ ಲಾಯಿತು.

ಮುಂದಿನ ಆರ್ಥಿಕ ವರ್ಷದಿಂದ ಪಂಚಾಯತ್ ಪುರಸ್ಕಾರ ಪ್ರಶಸ್ತಿಗಳಿಗೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಭಾಗವಹಿಸುವಂತೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಪ್ರೋತ್ಸಾಹಿಸುವುದು. ಯಾವ ಪಂಚಾಯತ್ ರಾಜ್ ಸಂಸ್ಥೆಗಳು ಈ ಪ್ರಶಸ್ತಿಗಳಲ್ಲಿ ಭಾಗವಹಿಸುವುದಿಲ್ಲವೊ ಅಂತಹ ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿಗಳ ಕಾರ್ಯನಿರ್ವಹಣಾ ವರದಿ ಮಾಡುವುದು ಅಲ್ಲದೆ ಈ ನೌಕರರ ನಿಯಮಿತವಾಗಿ ದೊರೆಯುವ ಭಡ್ತಿಗಳನ್ನು ತಡೆಹಿಡಿಯಲಾಗುವುದೆಂದು ನಿರ್ಧರಿಸಲಾಯಿತು.



ಪಂಚಾಯತಿ ಪುರಸ್ಕಾರಗಳು-2017ಕ್ಕೆ ಸಂಬಂಧಿಸಿದಂತೆ, PSP & Thematic Category, RGGSP & MGNREGA ಪ್ರಶಸ್ತಿಗಳಿಗೆ ಪಂಚಾಯತ್ ರಾಜ್ ಸಂಸ್ಥೆಗಳನ್ನು ನಾಮ ನಿರ್ದೇಶನ ಮಾಡಲು ಈ ಹಿಂದಿನ ಹಂತಗಳಲ್ಲಿ ಪಡೆದಿರುವ ಅಂಕಗಳು ಮತ್ತು ರಾಜ್ಯ ಮಟ್ಟದ ಕ್ಷೇತ್ರ ತಪಾಸಣೆ ಸಂದರ್ಭದಲ್ಲಿ ಒದಗಿಸಿದ ದಾಖಲೆಗಳ ಆಧಾರದ ಮೇಲೆ ರಾಜ್ಯ ಮಟ್ಟದ SLC ಲಾಗಿನ್‌ನಲ್ಲಿ ಬಂದಿರುವ ಪಂ.ರಾಜ್ ಸಂಸ್ಥೆಗಳನ್ನು Subjective Assessment ಮಾಡಿದ ಮೇಲೆ ಪಡೆದಿರುವ ಅಂಕಗಳನ್ನು ಕೋಷ್ಟಕದಲ್ಲಿ ತೋರಿಸಿದೆ.

## ಪಂಚಾಯತ್ ಸಶಕ್ತೀಕರಣ ಪುರಸ್ಕಾರ್–ಸಾಮಾನ್ಯ (General) ಪ್ರಶಸ್ತಿ:

| ಕ್ರ. ಸಂ | ಪಂಚಾಯತ್ ರಾಜ್ ಸಂಸ್ಥೆಗಳ ಹೆಸರು | ಪಂಚಾಯತಿಯ ಮೌಲ್ಯ ಮಾಪನ | ತಾಲ್ಲೂಕು ಮಟ್ಟದ ಮೌಲ್ಯ ಮಾಪನ | ಜಿಲ್ಲಾ ಮಟ್ಟದ ಮೌಲ್ಯ ಮಾಪನ | ರಾಜ್ಯ ಮಟ್ಟದ ಮೌಲ್ಯ ಮಾಪನ |
|---|---|---|---|---|---|
| 1. | ರಾಯಚೂರು ಜಿ.ಪಂ. | 70 | – | – | 71 |
| 2. | ಶಿವಮೊಗ್ಗ ಜಿ.ಪಂ. | 67 | – | – | 78 |
| 3. | ವಿಜಯಪುರ ಜಿ.ಪಂ. | 68 | – | – | 80 |
| 4. | ಕೊಡಗು ಜಿ.ಪಂ. | 68 | – | – | 83 |
| ಮೇಲಿನ 4 ಜಿ.ಪಂ.ಗಳನ್ನು ಪಂಚಾಯತ್ ರಾಜ್ ಮಂತ್ರಾಲಯಕ್ಕೆ ನಾಮ ನಿರ್ದೇಶವನ್ನು ಮಾಡಲಾಗಿದೆ. | | | | | |
| 5. | ಮುಧೋಳ ತಾಲ್ಲೂಕು ಪಂ., ಬಾಗಲಕೋಟೆ ಜಿಲ್ಲೆ. | 69 | – | 70 | 75.5 |
| 6. | ಬೆಂಗಳೂರು ಪೂರ್ವತಾಲ್ಲೂಕು ಪಂ., ಬೆಂಗಳೂರು ನಗರ ಜಿಲ್ಲೆ. | 72 | – | 86 | 77 |
| 7. | ಲಿಂಗಸುಗೂರು ತಾಲ್ಲೂಕು ಪಂ., ರಾಯಚೂರು ಜಿಲ್ಲೆ | 72 | – | 72 | 78 |
| 8. | ಶಿಕಾರಿಪುರ ತಾಲ್ಲೂಕು ಪಂ., ಶಿವಮೊಗ್ಗ ಜಿಲ್ಲೆ. | 66 | – | 78 | 79 |
| 9. | ಸಾಗರ ತಾಲ್ಲೂಕು ಪಂ., ಶಿವಮೊಗ್ಗ ಜಿಲ್ಲೆ. | 66 | – | 78 | 83 |
| 10. | ಪುತ್ತೂರು ತಾಲ್ಲೂಕು ಪಂ., ದಕ್ಷಿಣ ಕನ್ನಡ ಜಿಲ್ಲೆ | 68 | – | 88 | 86 |
| ಮೇಲಿನ 6 ತಾ.ಪಂ.ಗಳನ್ನು ಪಂಚಾಯತ್ ರಾಜ್ ಮಂತ್ರಾಲಯಕ್ಕೆ ನಾಮ ನಿರ್ದೇಶವನ್ನು ಮಾಡಲಾಗಿದೆ. | | | | | |
| 11. | ಬೇಗೂರು ಗ್ರಾ.ಪಂ., ಕುಣಿಗಲ್ ತಾ., ತುಮಕೂರು ಜಿಲ್ಲೆ. | 75 | 75 | 75 | 79.5 |
| 12 | ಹಾನಬಾಳು ಗ್ರಾ.ಪಂ., ಸಕಲೇಶಪುರ ತಾ., ಹಾಸನ ಜಿಲ್ಲೆ. | 58 | 81 | 85 | 81 |
| 13. | ಹಿರೇಜಂಬೂರು ಗ್ರಾ.ಪಂ., ಶಿಕಾರಿಪುರ ತಾ., ಶಿವಮೊಗ್ಗ ಜಿಲ್ಲೆ. | 75 | 89 | 89 | 82 |
| 14. | ಗಾಳಿಬೀಡು ಗ್ರಾ.ಪಂ., ಮಡಿಕೇರಿ ತಾ., ಕೊಡಗು ಜಿಲ್ಲೆ. | 70 | 81 | 81 | 82 |
| 15. | ಕಲ್ಮಡ್ಕ ಗ್ರಾ.ಪಂ., ಸೂಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ | 75 | 80 | 80 | 82.5 |

| | | | | | |
|---|---|---|---|---|---|
| 16. | ಅಂಬ್ಲಿಕಾಳ ಗ್ರಾ.ಪಂ., ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ | 73 | 85 | 85 | 84 |
| 17. | ಸಂಪಾಜೆ ಗ್ರಾ.ಪಂ., ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ. | 71 | 86 | 86 | 84 |
| 18. | ಶಿರಗುಪ್ಪಿ ಗ್ರಾ.ಪಂ., ಅಥಣಿ ತಾಲ್ಲೂಕು, ಬೆಳಗಾವಿ | 74 | 92 | 90 | 85 |
| 19. | ಪಾಲಿಬೆಟ್ಟ ಗ್ರಾ.ಪಂ., ವಿರಾಜಪೇಟೆ ತಾ., ಕೊಡಗು ಜಿಲ್ಲೆ. | 78 | 91 | 91 | 87.5 |
| 20. | ಕೆಸರಮಡು ಗ್ರಾ.ಪಂ., ತುಮಕೂರು ತಾ. & ಜಿಲ್ಲೆ. | 78 | 96 | 96 | 91 |
| ಮೇಲಿನ 10 ಗ್ರಾ.ಪಂ.ಗಳನ್ನು ಪಂಚಾಯತ್ ರಾಜ್ ಮಂತ್ರಾಲಯಕ್ಕೆ ನಾಮ ನಿರ್ದೇಶವನ್ನು ಮಾಡಲಾಗಿದೆ. | | | | | |

**ಪಂಚಾಯತ್ ಸಶಕ್ತೀಕರಣ ಪುರಸ್ಕಾರ್–ವಿಷಯಾಧಾರಿತ(Thematic) ಪ್ರಶಸ್ತಿ:**

| ಕ್ರ.ಸಂ | ಪಂಚಾಯತ್ ರಾಜ್ ಸಂಸ್ಥೆಗಳ ಹೆಸರು | ಪಂಚಾಯತಿಯ ಮೌಲ್ಯ ಮಾಪನ | ತಾಲ್ಲೂಕು ಮಟ್ಟದ ಮೌಲ್ಯ ಮಾಪನ | ಜಿಲ್ಲಾ ಮಟ್ಟದ ಮೌಲ್ಯ ಮಾಪನ | ರಾಜ್ಯ ಮಟ್ಟದ ಮೌಲ್ಯ ಮಾಪನ |
|---|---|---|---|---|---|
| 1. | ಹಾನಬಾಳು ಗ್ರಾ.ಪಂ., ಸಕಲೇಶಪುರ ತಾ., ಹಾಸನ ಜಿಲ್ಲೆ (ನೈರ್ಮಲ್ಯ ವಿಷಯ) | 18 | 20 | 20 | 20 |
| 2. | ಶಿರಗುಪ್ಪಿ ಗ್ರಾ.ಪಂ., ಅಥಣಿ ತಾಲ್ಲೂಕು, ಬೆಳಗಾವಿ (ನಾಗರೀಕ ಸೌಲಭ್ಯಗಳು) | 17 | 20 | 20 | 20 |
| 3. | ಕೆಸರಮಡು ಗ್ರಾ.ಪಂ., ತುಮಕೂರು ತಾ. & ಜಿಲ್ಲೆ. (ನಾಗರೀಕ ಸೌಲಭ್ಯಗಳು) | 17 | 20 | 20 | 20 |
| ಮೇಲಿನ ಕೊಷ್ಠಕದಲ್ಲಿರುವ 10 ಗ್ರಾಮ ಪಂಚಾಯತಿಗಳಲ್ಲಿ ಮೇಲಿನ ಮೂರು ಗ್ರಾಮ ಪಂಚಾಯತಿಗಳ ವಿಷಯಾಧಾರಿತ ಅಂಕಗಳನ್ನು ಸೇರಿಸಿ, ಪಂಚಾಯತ್ ರಾಜ್ ಮಂತ್ರಾಲಯಕ್ಕೆ ನಾಮ ನಿರ್ದೇಶವನ್ನು ಮಾಡಲಾಗಿದೆ. | | | | | |

### ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರ:

| ಕ್ರ.ಸಂ | ಪಂಚಾಯತ್ ರಾಜ್ ಸಂಸ್ಥೆಗಳ ಹೆಸರು | ಪಂಚಾಯತಿಯ ಮೌಲ್ಯ ಮಾಪನ | ತಾಲ್ಲೂಕು ಮಟ್ಟದ ಮೌಲ್ಯ ಮಾಪನ | ಜಿಲ್ಲಾ ಮಟ್ಟದ ಮೌಲ್ಯ ಮಾಪನ | ರಾಜ್ಯ ಮಟ್ಟದ ಮೌಲ್ಯ ಮಾಪನ |
|---|---|---|---|---|---|
| 1. | ಹಾರೋಹಳ್ಳಿ ಗ್ರಾ.ಪಂ., ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | 54 | 100 | 100 | 88 |
| 2. | ಮೇಳಿಗೆ ಗ್ರಾ.ಪಂ., ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | 66 | 93 | 93 | 94 |
| 3. | ಇಂಗಳೆ ಗ್ರಾ.ಪಂ., ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ. | 68 | 100 | 100 | 94 |
| ಮೇಲಿನ 3 ಗ್ರಾ.ಪಂ.ಗಳನ್ನು ಪಂಚಾಯತ್ ರಾಜ್ ಮಂತ್ರಾಲಯಕ್ಕೆ ನಾಮ ನಿರ್ದೇಶವನ್ನು ಮಾಡಲಾಗಿದೆ. | | | | | |

### ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಪುರಸ್ಕಾರ:

| ಕ್ರ.ಸಂ | ಪಂಚಾಯತ್ ರಾಜ್ ಸಂಸ್ಥೆಗಳ ಹೆಸರು | ಪಂಚಾಯತಿಯ ಮೌಲ್ಯ ಮಾಪನ | ತಾಲ್ಲೂಕು ಮಟ್ಟದ ಮೌಲ್ಯ ಮಾಪನ | ಜಿಲ್ಲಾ ಮಟ್ಟದ ಮೌಲ್ಯ ಮಾಪನ | ರಾಜ್ಯ ಮಟ್ಟದ ಮೌಲ್ಯ ಮಾಪನ |
|---|---|---|---|---|---|
| 1. | ದುಮ್ಮೇನಹಳ್ಳಿ ಗ್ರಾ.ಪಂ., ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ. | 19 | 19.5 | 20 | 18 |
| 2. | ಹೊಸೂರು ಸಿದ್ದಾಪುರ ಗ್ರಾ.ಪಂ., ದೇವದುರ್ಗ ತಾ., ರಾಯಚೂರು ಜಿ. | 19 | 19 | 19 | 19.5 |
| 3. | ಹಿರೇಕಟ್ಟಿಗೇನಹಳ್ಳಿ ಗ್ರಾ.ಪಂ., ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. | 18 | 19 | 19 | 20 |
| ಮೇಲಿನ 3 ಗ್ರಾ.ಪಂ.ಗಳನ್ನು ಪಂಚಾಯತ್ ರಾಜ್ ಮಂತ್ರಾಲಯಕ್ಕೆ ನಾಮ ನಿರ್ದೇಶವನ್ನು ಮಾಡಲಾಗಿದೆ. | | | | | |

ಈ ರೀತಿಯಾಗಿ ಮೇಲಿನ ಪಂಚಾಯತ್ ರಾಜ್ ಸಂಸ್ಥೆಗಳು ಪಂಚಾಯತ್ ರಾಜ್ ಮಂತ್ರಾಲಯಕ್ಕೆ ನಾಮನಿರ್ದೇಶನಗೊಂಡಿರುವುದು ಆಯಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ತಾಲ್ಲೂಕುಗಳಿಗೆ ಹಾಗೂ ಜಿಲ್ಲೆಗಳಿಗೆ ಹೆಮ್ಮೆಯ ವಿಚಾರವಾಗಿದೆ. ಈ ಪ್ರಕಾರವಾಗಿ ಉಳಿದ ಪಂಚಾಯತ್ ರಾಜ್ ಸಂಸ್ಥೆಗಳು ಈ ಪ್ರಶಸ್ತಿಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಂಡು ಮುಂದಿನ ಆರ್ಥಿಕ ವರ್ಷದಲ್ಲಿ ಪ್ರಶಸ್ತಿಗೆ ಅರ್ಜಿಗಳನ್ನು ಸಲ್ಲಿಸುವುದರ ಮೂಲಕ ಮಹಾತ್ಮಾ ಗಾಂಧೀಜಿ ಕಂಡ ಕನಸು ಗ್ರಾಮ್ ಸ್ವರಾಜ್‌ನ್ನು ನನಸಾಗಿಸುವ 'ಸರ್ಜಿಕಲ್ ಸ್ಟ್ರೈಕ್' ನಂತಹ ಕಾರ್ಯಾಚರಣೆಯ ರೂಪದಲ್ಲಿ ಮಾರ್ಪಡಲಿ ಹಾಗೂ ದೇಶದಲ್ಲಿ ಈಗ ಜರುಗುತ್ತಿರುವ ಆರ್ಥಿಕ ಕ್ರಾಂತಿಯೊಂದಿಗೆ ಗ್ರಾಮ ಸ್ವರಾಜ್ ಕ್ರಾಂತಿಯು ನಡೆಯಲಿ ಎಂಬುದೇ ಆಶಯವಾಗಿದೆ.

ಲೇಖನ

# ಸ್ವಾಯತ್ತ ಸಂಸ್ಥೆಯಾಗಿ ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ

– ಡಿ. ಪ್ರಾಣೇಶ್ ರಾವ್

ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು ಸ್ವಾಯತ್ತ ಸಂಸ್ಥೆಯಾಗಿರುವ ಕುರಿತ ಮಾಹಿತಿಯುಳ್ಳ ಲೇಖನ.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರದ ತರಬೇತಿಯ ಅಂಗ ಸಂಸ್ಥೆಯಾಗಿ 1989ರಿಂದ ಪ್ರಾರಂಭಗೊಂಡು, ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರದ ಅನುದಾನದಿಂದ ತರಬೇತಿ ಕಾರ್ಯಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಸಂಸ್ಥೆಯಲ್ಲಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್‌ಗಳ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿ/ ನೌಕರರುಗಳಿಗೆ ಸರ್ಕಾರದ ವಿವಿಧ ಯೋಜನೆಗಳ ಪರಿಣಾಮಕಾರಿ



ಅನುಷ್ಠಾನ ಹಾಗೂ ಸಾಮರ್ಥ್ಯಾಭಿವೃದ್ಧಿಗೆ ಸಂಬಧಿಸಿದಂತೆ ತರಬೇತಿ ನೀಡುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ.

ಈ ಸಂಸ್ಥೆಯ ಪ್ರಾರಂಭದಿಂದಲು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸಂಸ್ಥೆಯನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡುವ ಬಗ್ಗೆ ತುರ್ತು ಕ್ರಮವಹಿಸಲು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡುತ್ತಾ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು “ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ”ಯನ್ನು ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/22/ತಾಪಸ 2013, ಬೆಂಗಳೂರು ದಿನಾಂಕ: 10.06.2015ರಂತೆ ಸ್ವಾಯತ್ತ ಸಂಸ್ಥೆಯನ್ನಾಗಿ ಮಾರ್ಪಡಿಸಿ ಆದೇಶಿಸಿದೆ. ಸದರಿ ಆದೇಶದಂತೆ, ಸಂಸ್ಥೆಯನ್ನು ದಿನಾಂಕ: 04.07.2016ರಂದು ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960 ರನ್ವಯ (1960ನೇ ಇಸ್ವಿ 17ನೇ

ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಂಸ್ಥೆ, ಮೈಸೂರು.



ಕ್ರಮಾಂಕದ ಕರ್ನಾಟಕ ಅಧಿನಿಯಮ) ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಾಣಾಧಿಕಾರಿಗಳ ಕಛೇರಿ, ಮೈಸೂರು ಇಲ್ಲಿ ಸಂಘವನ್ನು ನೋಂದಾಯಿಸಲಾಗಿರುತ್ತದೆ.

ಪ್ರಸ್ತುತ ಸಂಸ್ಥೆಯ ಆಡಳಿತ ಮಂಡಳಿಯನ್ನು ಕರ್ನಾಟಕ ಸರ್ಕಾರದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳ ನ್ನೊಳಗೊಂಡಂತೆ ಆಯ್ದ ಇತರೆ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಎನ್.ಐ.ಆರ್.ಡಿ. ಪ್ರತಿನಿಧಿ, ಸಂಶೋಧನಾ ಸಂಸ್ಥೆಯ ಪ್ರತಿನಿಧಿ, ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಪರಿಣಿತರು ಇದರ ಸದಸ್ಯರಾಗಿರುತ್ತಾರೆ. ಸಂಸ್ಥೆಯ ದೈನಂದಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಲು ಕಾರ್ಯಕಾರಿ ಸಮಿತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ.

### ಸ್ವಾಯತ್ತ ಸಂಸ್ಥೆಯ ಧ್ಯೇಯೋದ್ದೇಶಗಳು

ಸಂಸ್ಥೆಯು ಸ್ವಾಯತ್ತ ಸಂಸ್ಥೆಯಾಗಿ ನೋಂದಾಯಿಸಿದ ನಂತರ ಕೆಲವು ಪ್ರಮುಖ ಧ್ಯೇಯೋದ್ದೇಶಗಳನ್ನು ಹೊಂದಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳಿಗೆ ಸಂಬಂಧಪಟ್ಟಂತೆ ತರಬೇತಿಯನ್ನು ನೀಡುವ "ರಾಜ್ಯದ ಅತ್ಯುನ್ನತ ಗುಣಮಟ್ಟದ ಸಂಸ್ಥೆಯನ್ನಾಗಿಸುವುದು"
- ಗ್ರಾಮೀಣ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡುವುದು ಹಾಗೂ
  - ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಂಶೋಧನಾ ಮತ್ತು ಕ್ರಿಯಾ ಸಂಶೋಧನಾ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದು, ಕಾರ್ಯಾಗಾರ, ವಿಚಾರ ಸಮ್ಮೇಳನ, ವಿಷಯ ಮಂಡನೆಗಳನ್ನು ಆಯೋಜಿಸುವುದು, ರಾಜ್ಯದ ಇತರೆ ವಿಶ್ವ ವಿದ್ಯಾನಿಲಯಗಳು, ತರಬೇತಿ ಕೇಂದ್ರಗಳು ಹಾಗೂ ಐ.ಸಿ.ಎಸ್ಎಸ್ಆರ್ ಸಂಶೋಧನಾ ಸಂಸ್ಥೆಗಳೊಂದಿಗೆ ತರಬೇತಿ ಮತ್ತು ಸಂಶೋಧನಾ ಚಟುವಟಿಕೆಗಳನ್ನು ಆಯೋಜಿಸುವುದು

- ಸಂಸ್ಥೆಯಲ್ಲಿ ವಿಕೇಂದ್ರೀಕೃತ ಯೋಜನೆ, ಸ್ಥಳೀಯ ಆಡಳಿತ, ಜೀವನೋಪಾಯ ಮತ್ತು ತಾಂತ್ರಿಕ ಅನುಕ್ರಮಗಳು, ಸಂಶೋಧನೆ, ಮೌಲ್ಯಮಾಪನ ಮತ್ತು ದಾಖಲೀಕರಣ, ಸಮುದಾಯ ಸಬಲೀಕರಣ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಯನ ಹಾಗೂ ತರಬೇತಿ ಕೋಶಗಳನ್ನು ಸ್ಥಾಪಿಸುವುದು
- ಗ್ರಾಮೀಣ ಪ್ರದೇಶದ ಜನರ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಅಭಿವೃದ್ಧಿ ಹಾಗೂ ಸಬಲೀಕರಣಕ್ಕಾಗಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದು



- ರಾಜ್ಯ ಸರ್ಕಾರದೊಂದಿಗೆ ಕೈ ಜೋಡಿಸಿ ನೀತಿ ನಿಯಮಗಳನ್ನು ರೂಪಿಸುವಲ್ಲಿ ಕ್ರಮವಹಿಸುವುದು

ಹೊಸದಾಗಿ ಸ್ಥಾಪನೆಯಾದ ಸಂಸ್ಥೆಯ ಮೊದಲನೇ ಆಡಳಿತ ಮಂಡಳಿಯ ಸಭೆಯನ್ನು ದಿನಾಂಕ 11.08.2016ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾದ ಶ್ರೀ. ಎಚ್.ಕೆ. ಪಾಟೀಲ್ ರವರ ಅಧ್ಯಕ್ಷತೆಯಲ್ಲಿ ಸಂಸ್ಥೆಯಲ್ಲಿ ನಡೆಸಲಾಯಿತು. ಸಭೆಯಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ. ಡಾ॥ ಎನ್. ನಾಗಾಂಬಿಕಾದೇವಿರವರು ಉಪಸ್ಥಿತರಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸದಸ್ಯರು ತಮ್ಮ ಕಾರ್ಯಕ್ಷೇತ್ರ ಹಾಗೂ ತಾವು ನಿರ್ವಹಿಸಿರುವ ಚಟುವಟಿಕೆಗಳ ಬಗ್ಗೆ ಪರಿಚಯ ಮಾಡಿಕೊಂಡರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮಾನ್ಯ ಸಚಿವರು ಸಂಸ್ಥೆಯು ಸ್ವಾಯತ್ತತೆ ಹೊಂದಿರುವುದರ ಮಹತ್ವದ ಬಗ್ಗೆ ತಿಳಿಸಿದರು. ಮುಂದಿನ 25 ರಿಂದ 30 ವರ್ಷಗಳವರೆಗಿನ ಒಂದು ದೂರದೃಷ್ಟಿ ಯೋಜನೆಯನ್ನು ಸಂಸ್ಥೆಯು ಸಿದ್ಧಪಡಿಸಬೇಕೆಂದು ಸೂಚಿಸಿದರು. ಸಂಸ್ಥೆಯು ಸಂಶೋಧನಾ ಚಟುವಟಿಕೆಗಳನ್ನು ಮತ್ತು ಸರ್ಕಾರದ ನೀತಿಗಳನ್ನು



ರೂಪಿಸುವ ನಿಟ್ಟಿನಲ್ಲಿ ಕ್ರಮ ವಹಿಸುವಂತೆ ಸಲಹೆ ನೀಡಿದರು. ಸದಸ್ಯರನ್ನುದ್ದೇಶಿಸಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ. ಡಾ॥ ಎನ್. ನಾಗಾಂಬಿಕಾದೇವಿರವರು ಸಂಸ್ಥೆಯ ಆಡಳಿತ ಮಂಡಳಿಯು ಈ ಸಂಸ್ಥೆಯನ್ನು ಒಂದು ಪ್ರತಿಷ್ಠಿತ ತರಬೇತಿ ಮತ್ತು ಸಂಶೋಧನಾ ಸಂಸ್ಥೆಯನ್ನಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಎಲ್ಲಾ ಸದಸ್ಯರ ಸಲಹೆ ಕೋರಿದರು.

ಆಡಳಿತ ಮಂಡಳಿಯ ಸಭೆಯ ನಂತರ ಎಲ್ಲಾ ಸದಸ್ಯರು ಸಂಸ್ಥೆಯ ಆವರಣದಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದರು. ಸಂಸ್ಥೆಯ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿ ಲಭ್ಯವಿರುವ ಸ್ಥಳವಾಕಾಶದ ಬಗ್ಗೆ ವೀಕ್ಷಣೆ ನಡೆಸಲಾಯಿತು.

ಆಡಳಿತ ಮಂಡಳಿಯ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳು ಮುಂದಿನ ದಿನಗಳಲ್ಲಿ ಸಂಸ್ಥೆಯು ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಲು ಹಾಗೂ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಯಶಸ್ವಿಯಾಗಿ ಆಯೋಜಿಸಲು ಸಹಕಾರಿಯಾಗುವುದೆಂದು ಆಶಿಸಿದೆ.

ಲೇಖನ

# ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಮುಖ ಪ್ರಕರಣಗಳಿಗೆ ಸಂಬಂದಿಸಿದಂತೆ ಪೂರಕ ಟಿಪ್ಪಣಿ (ಭಾಗ-1)

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಮುಖ ಪ್ರಕರಣಗಳಿಗೆ ಸಂಬಂದಿಸಿದ ಮಾಹಿತಿ.

– ನಿಂಗೇಗೌಡ

1. ರಾಷ್ಟ್ರದಲ್ಲಿ ಸ್ಥಳೀಯ ಸರ್ಕಾರವೆನಿಸಿರುವ ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರಾಡಳಿತ ಸಂಸ್ಥೆಗಳನ್ನು ಆರ್ಥಿಕ, ಆಡಳಿತಾತ್ಮಕ ಹಾಗೂ ಅಧಿಕಾರಯುಕ್ತವಾಗಿ ಸ್ವಶಕ್ತಗೊಳಿಸಲು ಸಂವಿಧಾನದ 73 ಹಾಗೂ 74 ನೇ ತಿದ್ದುಪಡಿಯನ್ನು ತರಲಾಗಿದೆ.

    1) 73 ನೇ ತಿದ್ದುಪಡಿಯ ಅನುಸಾರ ಸಂವಿಧಾನದ ಪರಿಚ್ಛೇದದ 243 ನೇ ಪ್ರಕರಣಗಳಿಗೆ ತಿದ್ದುಪಡಿ ತರಲಾಗಿದೆ(243(ಎ)– 243(ಒ) ಮತ್ತು ಪರಿಚ್ಛೇದದ 280) ಹಾಗೂ 9ನೇ ಪರಿಶಿಷ್ಟವನ್ನು ಅಳವಡಿಸಲಾಗಿದೆ.

    2) ಸಂವಿಧಾನದ 11ನೇ ಪರಿಶಿಷ್ಟದಲ್ಲಿ (ಪರಿಚ್ಛೇದದ 243(ಜಿ)) ವಿವಿಧ ಅಭಿವೃದ್ಧಿ ಇಲಾಖೆಗಳ 29 ವಿಷಯಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತ ನಿರ್ವಹಣೆ ಮತ್ತು ಅನುಷ್ಠಾನಕ್ಕಾಗಿ ವರ್ಗಾಹಿಸಲಾಗಿದೆ.

2. ಸಂವಿಧಾನದ 73ನೇ ತಿದ್ದುಪಡಿಗೆ ಅನುಸಾರ ಕರ್ನಾಟಕದಲ್ಲಿ **ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ನ್ನು ದಿನಾಂಕ: 10–05–1993 ರಿಂದ** (ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕ) ಜಾರಿಗೆ ಬಂದಿರುತ್ತದೆ.

3. ಈ ಅಧಿನಿಯಮದ ಹೆಸರನ್ನು **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಎಂದು ತಿದ್ದುಪಡಿ ಮಾಡಲಾಗಿದೆ.**

4. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ 3 ಹಂತದ ಸಂಸ್ಥೆಗಳಿರುತ್ತವೆ. ಅವುಗಳೆಂದರೆ,

    i) ಗ್ರಾಮ ಪಂಚಾಯತ್

    ii) ತಾಲ್ಲೂಕು ಪಂಚಾಯತ್

    iii) ಜಿಲ್ಲಾ ಪಂಚಾಯತ್

ಗ್ರಾಮ ಪಂಚಾಯತಿಯಡಿ ಮೂರು ಗ್ರಾಮ ಸ್ವರಾಜ್ ಘಟಕಗಳಾಗಿರುತ್ತವೆ. ಅವುಗಳೆಂದರೆ,

    i) ಜನ ವಸತಿ ಸಭಾ

    ii) ವಾರ್ಡ್ ಸಭಾ

    iii) ಗ್ರಾಮ ಸಭಾ

ವೃತ್ತ ಪೀಠಾಧಿಕಾರಿ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಜನ ವಸತಿ ಸಭಾ** ಎಂದರೆ ಜಿಲ್ಲೆಯ ಜಿಲ್ಲಾಧಿಕಾರಿಯು ಜನವಸತಿಯ ಪ್ರದೇಶಗಳೆಂದು ನಿರ್ದಿಷ್ಟಪಡಿಸುವ ಪ್ರದೇಶಗಳಲ್ಲಿ ನಡೆಯುವ ಸಭೆ. ಗ್ರಾಮದ ಪರಿಮಿತಿಯೊಳಗೆ ಇರುವ ಒಂದು ನೂರರಿಂದ ಮುನ್ನೂರವೈತ್ತು ಜನಸಂಖ್ಯೆಯುಳ್ಳ ಸಣ್ಣ ವಸತಿ ಪ್ರದೇಶ ಅಥವಾ ಯಾವುದೇ ಹೆಸರಿನಲ್ಲಿ ಕರೆಯಲಾಗುವ ಸಣ್ಣ ವಸತಿ ಸಮೂಹ. ಈ ಜನವಸತಿಯು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿರುವ ವ್ಯಕ್ತಿಗಳನ್ನು ಹೊಂದಿರುವ ಸಭೆ.

**ವಾರ್ಡ್ ಸಭಾ** ಎಂದರೆ ಗ್ರಾಮ ಪಂಚಾಯತಿ ಪ್ರದೇಶದ ಪರಿಮಿತಿಯೊಳಗೆ ಎಷ್ಟು ವಾರ್ಡ್‌ಗಳು ಬರುತ್ತವೋ ಅಷ್ಟು ವಾರ್ಡ್‌ಗಳ ಸಭೆ. ಗ್ರಾಮ ಪಂಚಾಯತಿಗೆ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಚುನಾವಣಾ ಕ್ಷೇತ್ರವನ್ನು ಗುರುತಿಸಿ ಆ ಚುನಾವಣಾ ಕ್ಷೇತ್ರದ ಪಟ್ಟಿಗಳಲ್ಲಿ ಮತದಾರರಾಗಿ ನೋಂದಾಯಿತರಾದ ಎಲ್ಲಾ ವ್ಯಕ್ತಿಗಳನ್ನು ಒಳಗೊಂಡ ಸಭೆ.

**ಗ್ರಾಮ ಸಭಾಗಳು** ಎಂದರೆ ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಮತದಾರರ ಪಟ್ಟಿಗೆ ನೋಂದಾಯಿಸಲ್ಪಟ್ಟಿರುವ ಎಲ್ಲಾ ಸದಸ್ಯರನ್ನೊಳಗೊಂಡ ಸಭೆ.

**6. ಗ್ರಾಮ ಪಂಚಾಯತಿಗಳ ರಚನೆ:** ಐದು ಸಾವಿರಕ್ಕೆ ಕಡಿಮೆ ಇಲ್ಲದೆ ಮತ್ತು ಏಳು ಸಾವಿರಕ್ಕೆ ಹೆಚ್ಚಿಲ್ಲದ ಒಂದು ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಗ್ರಾಮ ಪಂಚಾಯತಿ ಪ್ರದೇಶವೆಂದು ಸರ್ಕಾರದ ಆದೇಶದ ಮೂಲಕ ಘೋಷಿಸಲು ಜಿಲ್ಲಾಧಿಕಾರಿಗಳಿಗೆ ಪ್ರಾಧಿಕಾರವಾಗಿರುತ್ತಾರೆ. (ಅಧಿಕಾರವಿದೆ).

7. ಪ್ರತಿ 5,000 ಜನ ಸಂಖ್ಯೆಗಿಂತ ಕಡಿಮೆ ಇಲ್ಲದ ಮತ್ತು 7,000 ಕ್ಕೆ ಹೆಚ್ಚಿನ ಜನಸಂಖ್ಯೆ ಇಲ್ಲದ ಗ್ರಾಮಗಳಿಗೆ ಅಥವಾ ಗ್ರಾಮಗಳ ಗುಂಪಿಗೆ ಒಂದು ಗ್ರಾಮ ಪಂಚಾಯತಿಯನ್ನು ರಚಿಸಬಹುದಾಗಿದೆ. ಆದರೆ ಮಲೆನಾಡು ಜಿಲ್ಲೆಗಳಾದ ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ, ಉಡುಪಿ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕನಿಷ್ಠ ಎರಡು ಸಾವಿರದ ಐದುನೂರು(2500) ಗ್ರಾಮಗಳ ಗುಂಪಿಗೆ ಅಥವಾ 10 ಕಿಲೋ ಮೀಟರ್ ವ್ಯಾಸದ ಒಳಗಿರುವ ಪ್ರದೇಶಗಳನ್ನು ಗ್ರಾಮ ಪಂಚಾಯತಿಯೆಂದು ಘೋಷಿಸಬಹುದಾಗಿದೆ. ಈ ಪ್ರದೇಶಗಳಲ್ಲಿ 5,000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಅಥವಾ 7,000 ಕ್ಕಿಂತ ಹೆಚ್ಚಿರುವ ಗ್ರಾಮಗಳ ಅಥವಾ ಗ್ರಾಮಗಳ ಗುಂಪನ್ನು ಗ್ರಾಮ ಪಂಚಾಯತಿ ಪ್ರದೇಶಗಳೆಂದು ಘೋಷಿಸಬಹುದು.

8. ಗ್ರಾಮ ಪಂಚಾಯತಿಗಳಿಗೆ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಬೇಕು. ರಾಜ್ಯ ಚುನಾವಣೆ ಆಯೋಗವು ಗ್ರಾಮ ಪಂಚಾಯತಿ ಚುನಾವಣೆಯನ್ನು ನಡೆಸುವ ಅಧಿಕಾರವನ್ನು ಹೊಂದಿರುತ್ತದೆ. ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಸೀಲ್ದಾರರು ಚುನಾವಣೆ ಆಯೋಗದ ಪರವಾಗಿ ಚುನಾವಣೆ ಕಾರ್ಯವನ್ನು ನಿರ್ವಹಿಸುವರು.

9. ಪ್ರತಿ 400 ಅಥವಾ ಅದರ ಒಂದು ಭಾಗಕ್ಕೆ ಒಬ್ಬ ಗ್ರಾಮ ಪಂಚಾಯತಿ ಸದಸ್ಯರನ್ನು ಆಯ್ಕೆ ಮಾಡಬಹುದು. ಗ್ರಾಮ ಪಂಚಾಯತಿಯ ಸದಸ್ಯರ ಸಂಖ್ಯೆಯನ್ನು ಜಿಲ್ಲಾಧಿಕಾರಿಗಳು ಚುನಾವಣಾ ಆಯೋಗದ ಆದೇಶಕ್ಕನುಗುಣವಾಗಿ ನಿರ್ಧರಿಸುವರು.

10. ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರದೇಶದಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ, **ಅವರುಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ಆ ವರ್ಗಗಳಿಗೆ ಸ್ಥಾನಗಳ ಸಂಖ್ಯೆಯನ್ನು ಮೀಸಲಿಡಲಾಗಿದೆ, ಪ್ರತಿ ಗ್ರಾಮ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಕನಿಷ್ಠ ಒಂದೊಂದು ಸ್ಥಾನವನ್ನು ಮೀಸಲಿಡಲಾಗಿದೆ.**

11. ಗ್ರಾಮ ಪಂಚಾಯತಿಯ ಒಟ್ಟು ಸ್ಥಾನಗಳಲ್ಲಿ ಮೂರನೇ ಒಂದು ಭಾಗವನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡಬೇಕು. ಈ ಮೀಸಲಾತಿಯಲ್ಲಿ **ಶೇಕಡ 80 ರಷ್ಟು ಸ್ಥಾನವನ್ನು ಹಿಂದುಳಿದ ವರ್ಗ–ಎ ಪ್ರವರ್ಗ ಹಾಗೂ ಇನ್ನುಳಿದ ಶೇಕಡಾ 20 ರಷ್ಟು ಸ್ಥಾನವನ್ನು ಹಿಂದುಳಿದ ವರ್ಗ– ಬಿ** ಪ್ರವರ್ಗಕ್ಕೂ ಮೀಸಲಿಡಲಾಗಿದೆ.

12. ಗ್ರಾಮ ಪಂಚಾಯತಿ ಸದಸ್ಯರುಗಳ ಒಟ್ಟು ಸಂಖ್ಯೆಯ 50 ರಷ್ಟು ಸ್ಥಾನಗಳಿಗಿಂತ ಹೆಚ್ಚಿನ ಮೀಸಲಾತಿಗೆ ಅವಕಾಶವಿಲ್ಲ.

13. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ

ವರ್ಗ-ಅ, ಹಿಂದುಳಿದ ವರ್ಗ-ಬ, ಹಾಗೂ ಸಾಮಾನ್ಯ ವರ್ಗದ ಎಲ್ಲಾ ಸ್ಥಾನಗಳಲ್ಲಿ **ಶೇಕಡಾ 50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ.**

14. ಗ್ರಾಮ ಪಂಚಾಯತಿಯ ಒಟ್ಟು ಸದಸ್ಯರಲ್ಲಿ 2/3 ಭಾಗ ಸದಸ್ಯರು ಚುನಾಯಿತರಾದರೆ ಆ ಗ್ರಾಮ ಪಂಚಾಯತಿಯು **ಕ್ರಮಬದ್ಧವಾಗಿ ರಚಿತವಾಗಿದೆ** ಎಂದು ಪರಿಗಣಿಸಬಹುದು. ಗ್ರಾಮ ಪಂಚಾಯತಿಯು ಕ್ರಮ ಬದ್ಧವಾಗಿ ರಚಿತವಾಗದಿದ್ದರೆ ಮತ್ತೆ ಒಂದು ತಿಂಗಳೊಳಗಾಗಿ ಅವಶ್ಯವಿರುವ ಸಂಖ್ಯೆಯನ್ನು ಪೂರ್ಣಗೊಳಿಸಲು ಸದಸ್ಯರ ಚುನಾವಣೆಗೆ ವ್ಯವಸ್ಥೆ ಮಾಡಲಾಗುವುದು. ಒಂದು ವೇಳೆ ಗ್ರಾಮ ಪಂಚಾಯತಿ ರಚನೆಗೆ ಚುನಾವಣೆ ನಡೆಸಲು ಸಾಧ್ಯವಾಗದಿದ್ದರೆ ಅಥವಾ ಅಗತ್ಯ ಸಂಖ್ಯೆಯಷ್ಟು ಸದಸ್ಯರು ಆಯ್ಕೆಯಾಗದಿದ್ದರೆ ಜಿಲ್ಲಾಧಿಕಾರಿಯು ಅಂತಹ ಗ್ರಾಮ ಪಂಚಾಯತಿಗಳಿಗೆ **ಆಡಳಿತ ಅಧಿಕಾರಿಗಳನ್ನು** ನೇಮಿಸುವುದು.

15. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳ ಚುನಾವಣೆಯನ್ನು ರಾಜ್ಯ ಚುನಾವಣಾ ಆಯೋಗ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ ವ್ಯವಸ್ಥೆ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

16. ಗ್ರಾಮ ಪಂಚಾಯತಿಯ ಸದಸ್ಯನಾಗಲು ಕನಿಷ್ಠ 21 ವಯಸ್ಸಿನ ಮತದಾರನು ಅರ್ಹನಿರುತ್ತಾನೆ, ಆದರೆ ಯಾವುದೇ ಅಪರಾದದ ಸಂಬಧದಲ್ಲಿ ಅವನಿಗೆ ಶಿಕ್ಷೆಯನ್ನು ವಿಧಿಸಿದ್ದರೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಸೇವೆಯಿಂದ ವಜಾ ಮಾಡಿದ್ದರೆ ಅಥವಾ ಸದಸ್ಯತ್ವದಿಂದ ತೆಗೆದು ಹಾಕಿದ್ದರೆ, ಗ್ರಾಮ ಪಂಚಾಯತಿಯಲ್ಲಿ ಗುತ್ತಿಗೆದಾರನಾಗಿ ಅಥವಾ ನೌಕರನಾಗಿ ಕೆಲಸ ನಿರ್ವಹಿಸುತ್ತಿದ್ದರೆ ಅಂಥಹಾ ವ್ಯಕ್ತಿಯು ಸದಸ್ಯನಾಗಲು ಅರ್ಹನಿರುವುದಿಲ್ಲ.

17. ಒಬ್ಬ ವ್ಯಕ್ತಿಯು ಒಂದೇ ಸಮಯದಲ್ಲಿ 2 ಕ್ಷೇತ್ರದಿಂದ ಚುನಾಯಿತನಾಗಿದ್ದರೆ ಅವನು ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಒಂದು ಚುನಾವಣಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು. ಇಲ್ಲವಾದರೆ ಜಿಲ್ಲಾಧಿಕಾರಿಗಳು ಲಾಟರಿ ಎತ್ತುವ ಮೂಲಕ ಅವನ ಕ್ಷೇತ್ರವನ್ನು ನಿರ್ಧರಿಸುವರು. ಅವರ ತೀರ್ಮಾನವು ಅಂತಿಮವಾಗಿರುವುದು.

18. ಗ್ರಾಮ ಪಂಚಾಯತಿ ಸದಸ್ಯನು ಅನುಕ್ರಮವಾಗಿ 4 ಸಭೆಗಳಿಗೆ ಗೈರು ಹಾಜರಾದರೆ ಅಥವಾ 4 ತಿಂಗಳಿಗಿಂತ ಹೆಚ್ಚು ಕಾಲ ಪಂಚಾಯತಿಯ ಪ್ರದೇಶದಲ್ಲಿ ಇಲ್ಲದಿದ್ದರೆ ಅವನ ಸ್ಥಾನವನ್ನು ನಿಯಮಾನುಸಾರ ಪರಿಶೀಲಿಸಿ ರದ್ದುಪಡಿಸ ಬಹುದಾಗಿದೆ. ಈ ಬಗ್ಗೆ ಚುನಾಚಣಾ ಆಯೋಗವು ವಿಚಾರಣೆ ನಡೆಸಿ ತೀರ್ಮಾನಿಸಬಹುದಾಗಿದೆ. (ಪ್ರಕರಣ-43ಎ)

19. ಚುನಾವಣೆಯ ನಂತರ ಚುನಾಯಿತ ಅಭ್ಯರ್ಥಿಯು ಸಲ್ಲಿಸಿದ್ದ ದಾಖಲೆಗಳ ಬಗ್ಗೆ ಅಥವಾ ಚುನಾವಣೆಯ ವಿಧಾನಗಳ ಬಗ್ಗೆ ಯಾವುದೇ ವ್ಯಕ್ತಿ ತಕರಾರು ಅರ್ಜಿಯನ್ನು ಗೊತ್ತುಪಡಿಸಿದ ನ್ಯಾಯಾಲಯದಲ್ಲಿ ದಾಖಲಿಸಬೇಕು. ಈ ಬಗ್ಗೆ ಚುನಾವಣೆಯನ್ನು ಊರ್ಜಿತ ಅಥವಾ ಅನೂರ್ಜಿತ ಎಂದು ಘೋಷಿಸಲು ನ್ಯಾಯಾಲಯ ಸಕ್ಷಮ ಪ್ರಾಧಿಕಾರವಾಗಿರುತ್ತದೆ.

20. ಚುನಾವಣೆಯಲ್ಲಿ ಹಣದ ಆಮಿಶ ಒಡ್ಡುವುದು, ಧರ್ಮ, ಜನಾಂಗ, ಜಾತಿ, ಸಮುದಾಯ, ಭಾಷೆ ಅಥವಾ ಧಾರ್ಮಿಕ ಸಂಕೇತಗಳ ಮೂಲಕ ಮನವಿ ಮಾಡಿಕೊಳ್ಳುವುದು ದ್ವೇಷದ ಭಾವನೆಯನ್ನು ಉಂಟು ಮಾಡುವುದು, ಮತದಾರರಿಗೆ ಸಾರಿಗೆ ವ್ಯವಸ್ಥೆ ಮಾಡುವುದು, ಮುಂತಾದ ನಿರ್ದಿಷ್ಟ ಕ್ರಿಯೆಗಳನ್ನು ಭ್ರಷ್ಟಾಚಾರ ಎಂದು ಪರಿಗಣಿಸಲಾಗುವುದು.

21. ಚುನಾಯಿತ ಸದಸ್ಯನ ಸ್ಥಾನವು ಮರಣದಿಂದ ಅಥವಾ ಇನ್ನಿತರೆ ಕಾರಣಗಳಿಂದ ಖಾಲಿಯಾದರೆ ಆ ಸ್ಥಾನಕ್ಕೆ ಚುನಾವಣೆಯನ್ನು ನಡೆಸಲಾಗುವುದು. ಈ ರೀತಿ ಚುನಾಯಿತ ಸದಸ್ಯನು ಚುನಾಯಿತನಾದ ಸ್ಥಾನದ ಉಳಿದ ಅವಧಿಗೆ ಮಾತ್ರ ಸದಸ್ಯನಾಗಿ ಮುಂದುವರೆಯುವನು.

22. ಗ್ರಾಮ ಪಂಚಾಯತಿ ಸದಸ್ಯರು ತನ್ನ ಸಹಿ ಸಹಿತ ಪತ್ರದ ಮೂಲಕ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡುವ ಮನವಿಯನ್ನು ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಸಲ್ಲಿಸಬಹುದು. 15 ದಿನದೊಳಗೆ ರಾಜೀನಾಮೆಯನ್ನು ಹಿಂತೆಗೆದುಕೊಳ್ಳದಿದ್ದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು ರಾಜೀನಾಮೆ ಪತ್ರವನ್ನು ಗ್ರಾಮ ಪಂಚಾಯತಿ ಸಭೆಗೆ ಮಂಡಿಸಿ ಅಂಗೀಕರಿಸ ಬಹುದಾಗಿದೆ.

23. ಗ್ರಾಮ ಪಂಚಾಯತಿ ಸದಸ್ಯರನ್ನು ದುರ್ನಡತೆ, ತಲೆ ತಗ್ಗಿಸುವಂತ ನಡತೆ, ವೈದ್ಯಕೀಯವಾಗಿ ಅಸಮರ್ಥತೆ, ಕರ್ತವ್ಯ ನಿರ್ವಹಣೆಯ ಅಸಮರ್ಥತೆ, ಕಾರಣಕ್ಕಾಗಿ ಸದಸ್ಯತ್ವದಿಂದ ಸರ್ಕಾರ ತೆಗೆದು ಹಾಕಬಹುದು. ಈ ಬಗ್ಗೆ ಕ್ರಮ ವಹಿಸುವ ಮುನ್ನ ವಿಚಾರಣೆ ನಡೆಸಿ ಸೂಕ್ತ ಕ್ರಮ ವಹಿಸಬಹುದಾಗಿದೆ. (ಪ್ರಕರಣ 43–ಎ)

24. ಗ್ರಾಮ ಪಂಚಾಯತಿ ಸದಸ್ಯರಿಂದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಚುನಾಯಿತ ಸದಸ್ಯರು ರೂ. 2 ಲಕ್ಷಕ್ಕಿಂತ ಹೆಚ್ಚಿರುವ ತಮ್ಮ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮುಖಾಂತರ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ತಪ್ಪು ಮಾಹಿತಿ ನೀಡಿದ್ದರೆ ಅಥವಾ ಮಾಹಿತಿಯನ್ನು ನೀಡದಿದ್ದರೆ ಅಂಥಹಾ ಸದಸ್ಯನ ಸ್ಥಾನವನ್ನು ರಾಜ್ಯ ಚುನವಣಾ ಆಯೋಗ ನಿಯಮಾನುಸಾರ ಪರಿಶೀಲಿಸಿ ರದ್ದು ಮಾಡ ಬಹುದಾಗಿದೆ. (ಪ್ರಕರಣ 43–ಬಿ)

25. ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ರಾಜ್ಯ ಚುನಾವಣಾ ಆಯೋಗವು ಮೀಸಲಾತಿಯನ್ನು ನಿಗಧಿಗೊಳಿಸುವ ಅಧಿಕಾರವನ್ನು ಹೊಂದಿದೆ. ಗ್ರಾಮ ಪಂಚಾಯತಿ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ 1/3 ಸ್ಥಾನಗಳನ್ನು ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ ಮೀಸಲಿಡಬೇಕು. ಗ್ರಾಮ ಪಂಚಾಯತಿಗಳ ಒಟ್ಟು ಸ್ಥಾನಗಳಲ್ಲಿ ಶೇ.50 ರಷ್ಟಕ್ಕೆ ಕಡಿಮೆ ಇಲ್ಲದ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು. (ಪ್ರಕರಣ 44). ಒಂದು ವೇಳೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳು ಪ.ಜಾ. ಅಥವಾ ಪ.ವ.ಕ್ಕೆ ಮೀಸಲಾಗಿದ್ದು, ಆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಪ.ಜಾ. ಸ್ಥಾನಕ್ಕೆ ಪ.ವರ್ಗದ ಅಭ್ಯರ್ಥಿಯನ್ನು, ಪ.ವರ್ಗದ ಸ್ಥಾನಕ್ಕೆ ಪ.ಜಾ. ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ವಿರುತ್ತದೆ.

26. ಗ್ರಾಮ ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿ 5 ವರ್ಷ. ಅಥವಾ ಅವರ ಸ್ಥಾನ ಖಾಲಿಯಾಗುವವರೆಗೆ. ಗ್ರಾಮ ಪಂಚಾಯತಿಯ ಅಧ್ಯಕ್ಷ ಹುದ್ದೆ ಖಾಲಿ ಇರುವ ಅವಧಿಯಲ್ಲಿ ಉಪಾಧ್ಯಕ್ಷನು ಅಧ್ಯಕ್ಷ ಹುದ್ದೆಯ ಅಧಿಕಾರಗಳನ್ನು ಚಲಾಯಿಸಬಹುದಾಗಿದೆ. ಅಧ್ಯಕ್ಷರು, ಉಪಾಧ್ಯಕ್ಷರು ಇಲ್ಲದಿದ್ದಾಗ ಸಂಬಂಧಿಸಿದ ಗ್ರಾಮ ಪಂಚಾಯತಿಯ ಸಾಮಾಜಿಕ ನ್ಯಾಯ ಸಮಿತಿಯ ಅಧ್ಯಕ್ಷನು ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸಬಹುದಾಗಿದೆ. (ಪ್ರಕರಣ 47)

27. ಗ್ರಾಮ ಪಂಚಾಯತಿ ಅಧ್ಯಕ್ಷನು ತನ್ನ ಸಹಿ ಸಹಿತ ಬರಹದಲ್ಲಿ "ಸ್ವಂತ ಇಚ್ಛೆಯ ಮೇರೆಗೆ" ಬರೆದ ರಾಜೀನಾಮೆ ಪತ್ರವನ್ನು ಅಸಿಸ್ಟೆಂಟ್ ಕಮಿಷನರ್ ರವರಿಗೆ ನೀಡಬಹುದಾಗಿದೆ. ಅಸಿಸ್ಟೆಂಟ್ ಕಮಿಷನರ್ ಅಥವಾ ಅಧ್ಯಕ್ಷರು ರಾಜೀನಾಮೆ ಸ್ವೀಕರಿಸಿದ 10 ದಿನಗಳ ಅವಧಿಯೊಳಗೆ ಸಂದರ್ಭಾನುಸಾರ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಬರಹದಲ್ಲಿ ಹಿಂತೆಗೆದು ಕೊಳ್ಳದಿದ್ದರೆ ಜಾರಿಗೆ ಬಂದಿರುತ್ತದೆ. ಒತ್ತಡಕ್ಕೆ, ಬೆದರಿಕೆಗೆ, ಪ್ರಲೋಭನೆಗೆ ರಾಜೀನಾಮೆ ಸಲ್ಲಿಸಿರಬಹುದಾದ ಸನ್ನಿವೇಶವನ್ನು ಅಸಿಸ್ಟೆಂಟ್ ಕಮಿಷನರ್ ವಿಚಾರಣೆ ಮಾಡಿ, ಸ್ವ–ಇಚ್ಛೆ ಮೇರೆಗೆ ರಾಜೀನಾಮೆ ಸಲ್ಲಿಸಿದ್ದಾರೆ ಎಂಬ ಬಗ್ಗೆ ದೃಢೀಕರಿಸಿಕೊಳ್ಳಬೇಕಾಗಿದೆ. ಈ ಬಗ್ಗೆ ಯಾವು ದಾದರೂ ದೂರುಗಳಿದ್ದರೆ ಜಿಲ್ಲಾಧಿಕಾರಿಗಳು ಪರಿಶೀಲಿಸಬೇಕು. (ಪ್ರಕರಣ–48)

28. ಕರ್ತವ್ಯ ನಿರ್ವಹಣೆಯಲ್ಲಿ ನಿರಂತರ ಅಲಕ್ಷತೆ, ದುರ್ನಡತೆಗಾಗಿ ಗ್ರಾಮ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರನ್ನು ಸರ್ಕಾರವು ಸೂಕ್ತ ವಿಚಾರಣೆ ನಡೆಸಿದ ನಂತರ ತೆಗೆದು ಹಾಕುವ ಅಧಿಕಾರ ಹೊಂದಿರುತ್ತದೆ.(ಪ್ರಕರಣ–48)

29. ಗ್ರಾಮ ಪಂಚಾಯತ್ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ವಿರುದ್ಧವಾಗಿ ಅವಿಶ್ವಾಸ ನಿರ್ಣಯ ತರಲು ಗ್ರಾ.ಪಂ.ನ ಒಟ್ಟು ಸದಸ್ಯರ 1/2 ಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರ ನಿರ್ಣಯದ ನೋಟೀಸ್‌ಗೆ ಸಹಿ ಮಾಡಿರಬೇಕು. ನೋಟೀಸನ್ನು ಅಸಿಸ್ಟಂಟ್ ಕಮಿಷನರ್ ಅವರಿಗೆ ನೀಡಬೇಕು. ಅವಿಶ್ವಾಸ ನಿರ್ಣಯಕ್ಕಾಗಿ ಕರೆದ ವಿಶೇಷ ಸಭೆಯಲ್ಲಿ ಗ್ರಾಮ ಪಂಚಾಯತ್‌ನ ಒಟ್ಟು ಸದಸ್ಯರ 2/3 ಕ್ಕಿಂತ ಕಡಿಮೆಯಿಲ್ಲದಷ್ಟು ಸಂಖ್ಯೆ ಬಹುಮತದಿಂದ ಅಂಗೀಕರಿಸಿದರೆ ತಕ್ಷಣವೇ ತನ್ನ ಸ್ಥಾನವನ್ನು ತೆರವು ಮಾಡಿರುವುದಾಗಿ ಭಾವಿಸಬೇಕು ಗ್ರಾಮ ಪಂಚಾಯತ್ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ವಿರುದ್ಧವಾಗಿ ಅವಿಶ್ವಾಸವನ್ನು ಸೂಚಿಸುವ ಯಾವುದೇ ನಿರ್ಣಯವನ್ನು ಆತನು ಚುನಾಯಿತನಾದ

ದಿನಾಂಕದಿಂದ ಮೊದಲ 30 ತಿಂಗಳುಗಳ ಒಳಗೆ ಮಂಡಿಸಬಾರದು. (ಪ್ರಕರಣ–49)

30. ಗ್ರಾಮ ಪಂಚಾಯತ್‌ನ ಕಾರ್ಯ ಕಲಾಪವನ್ನು ನಡೆಸುವುದಕ್ಕಾಗಿ ಗ್ರಾಮ ಪಂಚಾಯತ್ ಕಛೇರಿಯಲ್ಲಿ ಕನಿಷ್ಠ ಪಕ್ಷ ಒಂದು ತಿಂಗಳಿಗೊಮ್ಮೆ ಸಭೆ ಸೇರಬೇಕು. ಗ್ರಾ.ಪಂ. ಸಾಮಾನ್ಯ ಸಭೆ ಬಗ್ಗೆ 7 ಪೂರ್ಣ ದಿವಸಗಳ ನೋಟೀಸ್ ನೀಡಬೇಕು. ಗ್ರಾ.ಪಂ. ವಿಶೇಷ ಸಭೆ ಬಗ್ಗೆ 3 ಪೂರ್ಣ ದಿವಸಗಳ ನೋಟೀಸ್ ನೀಡಬೇಕು. (ಪ್ರಕರಣ 52)

31. ಗ್ರಾ,ಪಂ ಸಭೆಗಾಗಿ ಕೋರಂ ಸದಸ್ಯರ ಒಟ್ಟು ಸಂಖ್ಯೆಯ 1/2 ದಷ್ಟು ಆಗಿದೆ. ಗ್ರಾ.ಪಂ.ಯು ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಪ್ರತಿಯನ್ನು ಸಭೆಯ ದಿನಾಂಕದಿಂದ 10 ದಿವಸ ದೊಳಗೆ ಪಿ.ಡಿ.ಓರವರು ಕಾರ್ಯ ನಿರ್ವಾಹಣ ಅಧಿಕಾರಿಗೆ (ಇ.ಓ) ಹಾಗೂ ಗ್ರಾ,ಪಂ. ಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿಕೊಡಬೇಕು (ಪ್ರಕರಣ 53)

32. ಗ್ರಾಮ ಪಂಚಾಯತಿಯು ಪ್ರತಿಯೊಂದು ಸಭೆಯಲ್ಲಿ ಹಾಜರಿರುವ ಸದಸ್ಯರ ಹಾಗೂ ಅಧಿಕಾರಿಗಳ ಹೆಸರುಗಳನ್ನು ನಮೂಧಿಸುವ, ಚರ್ಚಿಸಲಾದ ವಿಷಯಗಳ ಬಗ್ಗೆ ನಿರ್ಣಯಿಸಿರುವ ನಿರ್ಣಯಗಳ ವಿವರಗಳನ್ನು ನಮೂದಿಸಿರುವ "ನಡವಳಿ ಪುಸ್ತಕ" ವನ್ನು ಇಡಬೇಕು. ಇದರಲ್ಲಿ ನಿರ್ಣಯದ ಪರ ಮತ್ತು ವಿರುದ್ಧವಾಗಿ ಮತ ಕೊಡುವ ಸದಸ್ಯರುಗಳ ಹೆಸರನ್ನು ನಮೂದಿಸುವಂತೆ ಸಭೆಯಲ್ಲಿ ಸದಸ್ಯನು ಒತ್ತಾಯಿಸಿದರೆ ಅದರಂತೆ ವಿವರಗಳನ್ನು ದಾಖಲಿಸಬೇಕು. ಯಾವುದೇ ನಿರ್ಣಯವು ಅಧಿನಿಯುಮದ ಪ್ರಕರಣಗಳನ್ನು ಮತ್ತು ನಿಯಮಗಳನ್ನು ಹಾಗೂ ರಾಜ್ಯದ ಹಿತಾಸಕ್ತಿಯನ್ನು ಉಲ್ಲಂಘಿಸಿದೆ ಎಂದು ಕಾರ್ಯನಿರ್ವಹಣಾಧಿಕಾರಿಗೆ ಮನದಟ್ಟಾದರೆ ಅಂತಹ ನಿರ್ಣಯದ ಪ್ರತಿಯನ್ನು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರಿಗೆ ಪ್ರಕರಣ 237ರಡಿ ಕ್ರಮ ಕೈಗೊಳ್ಳಲು ಕಳುಹಿಸಿಕೊಡಬೇಕು. ನಿರ್ಣಯವನ್ನು ಅಂಗೀಕರಿಸಿದ ನಂತರ 6 ತಿಂಗಳ ಒಳಗೆ ಮಾರ್ಪಡಿಸಲು ಯಾವುದೇ ಸದಸ್ಯ ಒತ್ತಾಯಿಸಿದರೆ, ಅದಕ್ಕಾಗಿ ಕರೆದ ವಿಶೇಷ ಸಭೆಯಲ್ಲಿ ಸದಸ್ಯರ ಒಟ್ಟು ಸಂಖ್ಯೆಯ ಅರ್ಧಕ್ಕಿಂತ ಕಡಿಮೆ ಇಲ್ಲದ ಸದಸ್ಯರು ಅಂಗೀಕರಿಸದ ಹೊರತು ಮಾರ್ಪಡು ಅಥವಾ ರದ್ದುಮಾಡತಕ್ಕದ್ದಲ್ಲ. (ಪ್ರಕರಣ– 54,55,56,57)

33. ಗ್ರಾಮ ಪಂಚಾಯತಿಯ ಪ್ರಕಾರ್ಯಗಳನ್ನು ಪ್ರಕರಣ 58ರಡಿ ಹಾಗೂ ಅನುಸೂಚಿ–1 ರಲ್ಲಿ ನಿರ್ಧಿಷ್ಟ ಪಡಿಸಲಾಗಿದೆ. ಪ್ರತಿ ವರ್ಷ ಶೇ.10 ಮನೆಗಳಿಗೆ ಕಡಿಮೆ ಇಲ್ಲದಂತೆ ಶೌಚಗೃಹಗಳನ್ನು ಒದಗಿಸುವುದು ನೈರ್ಮಲ್ಯ ವ್ಯವಸ್ಥೆ ಮತ್ತು ಚರಂಡಿ ವ್ಯವಸ್ಥೆ ಒದಗಿಸುವುದು, ಜೈವಿಕ ವೈವಿಧ್ಯತೆಯುನ್ನು ಸಂರಕ್ಷಿಸುವುದು ಕಡ್ಡಾಯವಾಗಿರುತ್ತದೆ. ಪ್ರಕರಣ 58–ಎ ರಂತೆ ಜೀತಗಾರಿಕೆ ಪದ್ಧತಿ ಸಂಬಂಧದಲ್ಲಿ ವರದಿ ಸಲ್ಲಿಸುವುದು. ಪ್ರಕರಣ 58–ಬಿ ರಂತೆ ಮಾನವ ಘನತೆಗೆ ಧಕ್ಕೆ ತರುವ ಧಾರ್ಮಿಕ ಪದ್ಧತಿಗಳನ್ನು ಪ್ರತಿಬಂಧಿಸುವುದು. ಪ್ರಕರಣ 58–ಸಿ ರಂತೆ ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟುವುದು. ಪ್ರಕರಣ 58–ಇ ರಂತೆ ಪ್ರತಿಯೊಂದು ಗ್ರಾಮ ಪಂಚಾಯತಿಯು ಸ್ವಚ್ಛ ಪರಿಸರವನ್ನು ಕಾಪಾಡುವುದು. ಪ್ರಕರಣ 58–ಎಫ್ ರಡಿ ಅಪಾಯಕಾರಿ ಕಲ್ಲು ಗಣಿಗಾರಿಕೆ ತಡೆಗಟ್ಟುವುದು, ನಿರುಪಯುಕ್ತ ತೆರೆದ ಕೊಳವೆ ಬಾವಿ ಮತ್ತು ತೆರೆದ ಬಾವಿಗಳನ್ನು ಮುಚ್ಚುವುದು ಮತ್ತು ಹೊಂಡಗಳನ್ನು ನಿರ್ಮಿಸುವುದನ್ನು ತಡೆಗಟ್ಟುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ.

34. ಗ್ರಾಮ ಪಂಚಾಯತಿಯ ಕಾಮಗಾರಿಗಳ ನಿರ್ವಹಣೆ ಸರಕುಗಳು ಮತ್ತು ಸೇವೆಗಳ ಗುತ್ತಿಗೆ ಒಪ್ಪಂದವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಪ್ರಕಾರ ವ್ಯವಹರಿಸುವುದು. ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಗ್ರಾಮ ಪಂಚಾಯತ್ ಪರವಾಗಿ ಸರ್ಕಾರ ನಿರ್ದಿಷ್ಟಪಡಿಸಿದ ಮೌಲ್ಯದ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳುವುದು. ಪಂಚಾಯತ್ ಪ್ರದೇಶದ ಒಳಗೆ ಫಲಾನುಭವಿಗಳ ಸ್ವ–ಸಹಾಯ ಸಮೂಹಕ್ಕೂ ಕಾಮಗಾರಿಗಳ ಗುತ್ತಿಗೆಯನ್ನು ನೀಡಬಹುದು. (ಪ್ರಕರಣ60–ಎ, 60–ಬಿ)

35. ಪ್ರತಿ ಗ್ರಾಮ ಪಂಚಾಯತಿಯ ಕಾರ್ಯ ನಿರ್ವಹಣೆಯ ವ್ಯವಸ್ಥೆಗೆ 3 ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಬಹುದು ಗ್ರಾ.ಪಂ.ನ ಸ್ಥಾಯಿ ಸಮಿತಿಗಳೆಂದರೆ, (1) ಸಾಮಾನ್ಯ ಸ್ಥಾಯಿ ಸಮಿತಿ (2) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು

(3) ಯೋಜನಾ ಸ್ಥಾಯಿ ಸಮಿತಿ.

36. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ. ಗ್ರಾಮ ಪಂಚಾಯತಿಯ ಅಧ್ಯಕ್ಷರು ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಗ್ರಾ.ಪಂ.ಯ ಉಪಾಧ್ಯಕ್ಷನು ಸಾಮಾನ್ಯ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿರುತ್ತಾನೆ. ಸಾಮಾಜಿಕ ಸ್ಥಾಯಿ ಸಮಿತಿಯು ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ ಚುನಾಯಿತ ಸದಸ್ಯರ ಪೈಕಿ ಒಬ್ಬರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕು. ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರು ಇರಬೇಕು. ಗ್ರಾಮ ಪಂಚಾಯತಿಯು ತನ್ನ ಆಡಳಿತ ನಿರ್ವಹಣೆಗಾಗಿ ಇತರೆ ಸಮಿತಿಗಳನ್ನು ರಚಿಸಿ ಕೊಳ್ಳಬಹುದು.

37. **ಗ್ರಾ.ಪಂ. ಅಧ್ಯಕ್ಷರು "ಮುಖ್ಯ ಕಾರ್ಯ ನಿರ್ವಾಹಕರಾಗಿರುತ್ತಾರೆ".** ಗ್ರಾಮ ಪಂಚಾಯತಿಯ ಸಭೆಗಳನ್ನು ಕರೆಯುವುದು, ಗ್ರಾಮ ಪಂಚಾಯತ್ ದಾಖಲೆಗಳನ್ನು ನೋಡುವುದು, ಮೇಲ್ವಿಚಾರಣೆ ನಡೆಸುವುದು ನಿಯಂತ್ರಣವನ್ನು ಹೊಂದಿರುವುದು ಗ್ರಾಮ ಪಂಚಾಯತಿ ಅಧ್ಯಕ್ಷರ ಕರ್ತವ್ಯವಾಗಿದೆ. **ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಯಾವೊಬ್ಬ ಅಧಿಕಾರಿಯನ್ನು ಅಥವಾ ನೌಕರನನ್ನು** ಅವರ ವಿರುದ್ಧದ ಮೊಕದ್ದಮೆಯ ಸಂಬಂಧದಲ್ಲಿ **ಅಮಾನತ್ತಿನಲ್ಲಿಡಲು ಗ್ರಾಮ ಪಂಚಾಯತ್ ಅಧ್ಯಕ್ಷನು ಅಧಿಕಾರ ಹೊಂದಿರುತ್ತಾನೆ.** ಯಾವುದೇ ಕಾರ್ಯವನ್ನು ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆಂದು ಕಂಡು ಬಂದರೆ ಆ ಉದ್ದೇಶಕ್ಕಾಗಿ 24 ಗಂಟೆಗಳ ನೋಟೀಸನ್ನು ಕೊಟ್ಟು ಸಭೆ ಕರೆಯಬಹುದು. **ಗ್ರಾಮ ಪಂಚಾಯತ್ ಅಧ್ಯಕ್ಷರು ರಜೆಯ ಮೇಲೆ ಹೋದ ಕಾರಣ / ಗೈರುಹಾಜರಾದಾಗ ಅಥವಾ ಕೆಲಸ ಮಾಡಲು ಅಸಮರ್ಥರಾದಾಗ ಅಧ್ಯಕ್ಷರ ಅಧಿಕಾರಗಳನ್ನು ಉಪಾಧ್ಯಕ್ಷರು ಚಲಾಯಿಸಬಹುದು ಮತ್ತು ಕರ್ತವ್ಯಗಳನ್ನು ನೆರವೇರಿಸಬಹುದು.**

38. ಯಾವನೇ ವ್ಯಕ್ತಿಯು ಗ್ರಾಮ ಪಂಚಾಯತಿ ಯಿಂದ ಬರಹದ ಅನುಮತಿಯಿಲ್ಲದೆ ಯಾವುದೇ ಕಟ್ಟಡವನ್ನು ನಿರ್ಮಿಸಲು ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡ ಬದಲಾಯಿಸಲು ಅಥವಾ ಯಾವುದೇ ಕಟ್ಟಡವನ್ನು ಪುನರ್ ನಿರ್ಮಿಸಲು ಅವಕಾಶವಿರುವುದಿಲ್ಲ. ಇದಕ್ಕಾಗಿ ಗ್ರಾಮ ಪಂಚಾಯತಿಯಿಂದ ಪರವಾನಿಗೆ ಪಡೆಯಬೇಕು. ಈ ಸಂಬಂಧ ಉಂಟಾಗುವ **ವಿವಾದಗಳನ್ನು ಪರಿಹರಿಸಲು ಕಾರ್ಯನಿರ್ವಾಹಣಾಧಿಕಾರಿಯು ಅಧಿಕಾರ ಹೊಂದಿರುತ್ತಾರೆ. ಅವರ ತೀರ್ಮಾನವೇ ಅಂತಿಮವಾಗಿರುವುದು. (ಪ್ರಕರಣ–64)**

39. ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಕಾರ್ಖಾನೆಗಳನ್ನು ನಿರ್ಮಿಸಲು ಹೋಟೆಲ್‌ಗಳನ್ನು ನಿಯಂತ್ರಿಸುವುದು ಹಾಗೂ ಅಂಗಡಿಗಳಿಗೆ ಲೈಸೆನ್ಸ್ ನೀಡುವುದು ಗ್ರಾಮ ಪಂಚಾಯತಿಯ ಅಧಿಕಾರವಾಗಿರುತ್ತದೆ. ಈ ಸಂಬಂಧ ಅಗತ್ಯವಾಗಿರುವ ಲೈಸೆನ್ಸ್ ಫೀಜುಗಳನ್ನು ಗ್ರಾಮ ಪಂಚಾಯತಿಗೆ ಪಾವತಿಸಬೇಕು. (ಪ್ರಕರಣ–70) ಯಾತ್ರಾ ಸ್ಥಳ ಮತ್ತು ಜಾತ್ರಾ ಸ್ಥಳಗಳ ಮೇಲೆ ನಿಯಂತ್ರಣ ಹೊಂದಿರುವ ವ್ಯಕ್ತಿಗಳಿಂದ ಅಥವಾ ಸಂಸ್ಥೆಯಿಂದ ವಂತಿಗೆಯನ್ನು ಪಡೆಯಬಹುದು. (ಪ್ರಕರಣ–76)

40. ಗ್ರಾಮ ಪಂಚಾಯತ್ ವ್ಯಾಪ್ತಿಯ ಬೀದಿಗಳ ಮೇಲಿನ ಅಡೆತಡೆ ಮತ್ತು ಒತ್ತುವರಿಗಳನ್ನು ತೆರವು ಮಾಡುವುದು, ಮುರಿದ ಮರಗಳನ್ನು ತೆರವುಗೊಳಿಸುವುದು, ಚರಂಡಿ ವ್ಯವಸ್ಥೆ ಮತ್ತು ನೈರ್ಮಲ್ಯ ನಿರ್ವಹಿಸುವುದು, ಸಾಕಷ್ಟು ನೀರು ಸರಬರಾಜು ವ್ಯವಸ್ಥೆ ಮಾಡುವುದು, ಹೊಲಸು ಕಟ್ಟಡಗಳನ್ನು ತೆರವುಗೊಳಿಸುವುದು. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು. ಗುಡಿಸಲುಗಳನ್ನು ಕ್ರಮಬದ್ಧಗೊಳಿಸುವುದು, ಅನಧಿಕೃತ ಸ್ಥಳಗಳಲ್ಲಿ ಹೂಳುವ ಮತ್ತು ಸುಡುವ ಕ್ರಿಯೆಗಳನ್ನು ತಡೆಗಟ್ಟುವುದು. ಮನೆಗಳಿಗೆ ಒಳಚರಂಡಿ ವ್ಯವಸ್ಥೆ, ಶೌಚ ಗೃಹ ನಿರ್ಮಾಣ, ಅಪಾಯಕಾರಿ ವಸ್ತುಗಳ ಮಾರಾಟ ಉಪಯೋಗದ ನಿಷೇಧ. ಮುಂತಾದ ಪ್ರಮುಖ ಕಾರ್ಯಗಳನ್ನು ಗ್ರಾಮ ಪಂಚಾಯತಿಯು ನಿರ್ವಹಿಸಬೇಕು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜೀತಗಾರಿಕೆ ಪದ್ಧತಿಯನ್ನು ಗುರುತಿಸುವ ಮತ್ತು ನಿಷೇಧಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿ ಹೊಂದಿರುತ್ತದೆ. (ಪ್ರಕರಣ–58)

41. ಬೀದಿಗಳ ಹೆಸರುಗಳನ್ನು ಇಡಲು ಮತ್ತು ಕಟ್ಟಡಗಳಿಗೆ ಸಂಖ್ಯೆಯನ್ನು ನೀಡುವ ಅಧಿಕಾರವನ್ನು ಗ್ರಾಮ ಪಂಚಾಯತಿ ಹೊಂದಿರುತ್ತದೆ.(ಪ್ರಕರಣ–73). ನೀರು ಸರಬರಾಜು ವ್ಯವಸ್ಥೆಗಳ ಬಗ್ಗೆ ಗ್ರಾಮ

ಪಂಚಾಯತಿಯು ಉಪವಿಧಿಗಳನ್ನು ರಚಿಸಿ ಕೊಳ್ಳಬಹುದು.(ಪ್ರಕರಣ-78)

42. ಪಂಚಾಯತ್ ಸದಸ್ಯರುಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗಧಿ ಗೊಳಿಸಲಾಗಿದೆ. ಪಂಚಾಯತಿ ಪ್ರದೇಶದ ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸಬೇಕು. ನಡತೆ ಮತ್ತು ನೈತಿಕತೆಯನ್ನು ನಿರ್ವಹಿಸಿಕೊಳ್ಳಬೇಕು. ಆಧ್ಯತೆ ಮತ್ತು ಗುರಿಗಳನ್ನು ಸಾಧಿಸುವಲ್ಲಿ ಪಂಚಾಯತ್ ಕಾರ್ಯನಿರ್ವಹಣೆಯನ್ನು ಪರಿಶೀಲಿಸಬೇಕು. ಯಾವುದೇ ವ್ಯಕ್ತಿಯ ವಿರುದ್ದ ಭೇದ-ಬಾವ ತೋರದೆ ಸಮಾನತೆಯನ್ನು ಕಾಪಾಡಬೇಕು, ಹಾಗೂ ಗೌರವದಿಂದ ವರ್ತಿಸಬೇಕು. ಪಂಚಾಯತ್ ಆಡಳಿತದಲ್ಲಿ ಭಾಗವಹಿಸುವುದು ಹಾಗೂ ಪಂಚಾಯತಿ ನಿವಾಸಿಗಳನ್ನು ಸಕ್ರಿಯವಾಗಿ ಭಾಗವಹಿಸಲು ಬೆಂಬಲ ನೀಡುವುದು. (ಪ್ರಕರಣ-110-ಎ)

43. ಪ್ರತಿಯೊಂದು ಗ್ರಾಮ ಪಂಚಾಯತಿಗೂ ಸರ್ಕಾರಿ ಸೇವೆಯ ಅಧಿಕಾರಿಗಳಾಗಿರುವ ಕೆಳಕಂಡ ಅಧಿಕಾರಿ/ನೌಕರರನ್ನು ಸರ್ಕಾರ ನೇಮಿಸಿದೆ (ಪ್ರಕರಣ-111).

1) ಪಂಚಾಯತಿ ಅಭಿವೃದ್ಧಿ ಅಧಿಕಾರಿ, 2) ಕಾರ್ಯದರ್ಶಿ ಮತ್ತು 3) ದ್ವಿತೀಯ ದರ್ಜೆ ಲೆಕ್ಕ ಸಹಾಯಕ

44. ಗ್ರಾಮ ಪಂಚಾಯತಿಯು ತನ್ನದೇ ಆದ ಕೆಳಕಂಡ ಸಿಬ್ಬಂದಿ ವರ್ಗದವರನ್ನು ಜಿಲ್ಲಾ ಪಂಚಾಯತಿ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳ ಅನುಮೋದನೆ ಪಡೆದು ಕೆಳಕಂಡ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಹುದು. (ಪ್ರಕರಣ-112)

1) ಕರ ವಸೂಲಿಗಾರ 2) ಗುಮಾಸ್ತ ಕಂ ಕಂಪ್ಯೂಟರ್ ಆಪರೇಟರ್ 3) ವಾಟರ್‌ಮೆನ್ 4) ಜವಾನ/ಅಟೆಂಡರ್. 5) ಸ್ವಚ್ಛತಗಾರ

45. ಗ್ರಾಮ ಪಂಚಾಯತಿ ಸಿಬ್ಬಂದಿಯ ಮೇಲೆ ಗ್ರಾಮ ಪಂಚಾಯತಿಯು ನಿಯಂತ್ರಣ ಕೆಳ ಕಂಡಂತಿರುತ್ತದೆ.

1) ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಯಾವನೇ ನೌಕರನಿಗೆ ದಂಡ ವಿಧಿಸಬಹುದು ಮತ್ತು ಬಡ್ತಿಯನ್ನು ತಡೆಹಿಡಿಯಬಹುದು

2) ಗ್ರಾಮ ಪಂಚಾಯತಿಯು ತಾನು ನೇಮಕ ಮಾಡಿದ ಯಾರೇ ನೌಕರರನ್ನು ದರ್ಜೆಯಲ್ಲಿ ಇಳಿಸಬಹುದು, ಕೆಲಸದಿಂದ ತೆಗೆದು ಹಾಕಬಹುದು ಮತ್ತು ವಜಾ ಮಾಡಬಹುದು.

3) ಪಂಚಾಯತ್ ಅಭಿವೃದ್ಧಿ ಅಧಿಕಾರಿ ನೀಡಿದ ಶಿಕ್ಷೆಯ ಆದೇಶದ ವಿರುದ್ದ ನೌಕರನು ಕಾರ್ಯನಿರ್ವಾಹಕಾಧಿಕಾರಿಗೆ ಹಾಗೂ ಗ್ರಾಮ ಪಂಚಾಯತಿಯು ಮಾಡಿದ ಆದೇಶದ ವಿರುದ್ದ ಸಂಬಂಧ ಪಟ್ಟ ನೌಕರ ಅಪೀಲು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ ಮಾಡಿ ಕೊಳ್ಳಬಹುದು.

4) ಗ್ರಾಮ ಪಂಚಾಯತಿಯು ಹೆಚ್ಚುವರಿಯಾಗಿ ಅಗತ್ಯವಿದ್ದಲ್ಲಿ ಗ್ರಾಮ ಪಂಚಾಯತಿಯ ಸೇವೆಗೆ ತಾಂತ್ರಿಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಿದೆ (ಪ್ರಕರಣ-113.ಎ)

46. ಗ್ರಾಮ ಪಂಚಾಯತಿ ಪ್ರದೇಶದ ಪರಿಮಿತಿ ಯೊಳಗಿರುವ ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳ ಮತ್ತು ಭೂಮಿಗಳ ಮೇಲೆ ಅನುಸೂಚಿ-IV ರಂತೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ತೆರಿಗೆಯನ್ನು ಗ್ರಾಮ ಪಂಚಾಯತಿಯು ವಿಧಿಸಬಹುದಾಗಿದೆ. (ಪ್ರಕರಣ-199). ಗ್ರಾಮ ಪಂಚಾಯತಿಯು ವಿಧಿಸಬಹುದಾದ ತೆರಿಗೆಗಳು ಮತ್ತು ದರಗಳನ್ನು ಕಟ್ಟಡಗಳು ಮತ್ತು ಭೂಮಿಯ ಸಂಬಂಧದಲ್ಲಿ ಕನಿಷ್ಠ 2 ವರ್ಷಗಳಿಗೊಮ್ಮೆ ಮತ್ತು ಇತರ ಬಾಬ್ತುಗಳ ಮೇಲೆ ವರ್ಷದಲ್ಲಿ ಕನಿಷ್ಠ ಒಮ್ಮೆ ಪರಿಷ್ಕರಿಸಬಹುದಾಗಿದೆ. (ಪ್ರಕರಣ 199-ಎ)

47. ತೆರಿಗೆ ಮತ್ತು ಇತರೆ ಬಾಕಿಗಳನ್ನು ವಸೂಲಿ ಮಾಡಲು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅಥವಾ ಅವನಿಂದ ನಿಯೋಜಿಸಲ್ಪಟ್ಟ ನೌಕರರು ಅಧಿಕಾರ ಹೊಂದಿರುತ್ತಾರೆ. ತೆರಿಗೆ, ದರ ಮತ್ತು ಫೀಜುಗಳನ್ನು ಪಾವತಿಸದಿದ್ದರೆ ತಗಾದೆ ಆದೇಶ ಹೊರಡಿಸಬಹುದು ಮತ್ತು ಚರ ಸ್ವತ್ತುಗಳನ್ನು ಜಪ್ತಿ ಮಾಡಲು ಅಧಿಕಾರ ಹೊಂದಿರುತ್ತಾರೆ. (ಪ್ರಕರಣ-

200). ತೆರಿಗೆ ನಿರ್ಧರಣೆ ಮುಂತಾದವುಗಳ ವಿರುದ್ಧ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿಗಳಿಗೆ ಅಪೀಲು ಸಲ್ಲಿಸಬಹುದು. (ಪ್ರಕರಣ-201).

48. ಕಾರ್ಖಾನೆ ಪ್ರದೇಶಗಳಲ್ಲಿ ತೆರಿಗೆಗಳನ್ನು ನಿರ್ಧರಿಸುವ ಬಗ್ಗೆ ಗ್ರಾಮ ಪಂಚಾಯತಿಯು ಕಾರ್ಖಾನೆಯ ಮಾಲೀಕರೊಡನೆ ಪರಸ್ಪರ ಒಪ್ಪಬಹುದಾದ ತೆರಿಗೆಗಳನ್ನು ನಿರ್ಧರಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಪರಸ್ಪರ ಒಪ್ಪಂದ ಏರ್ಪಡದಿದ್ದರೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ವಿವಾದವನ್ನು ಇತ್ಯರ್ಥಪಡಿಸಬಹುದು. ಆದರೆ ವಿವಾದಗ್ರಸ್ಥ ತೆರಿಗೆಯ ಮೊತ್ತದ ಶೇಕಡ 50ರಷ್ಟು ಭಾಗವನ್ನು ಗ್ರಾಮ ಪಂಚಾಯತಿಗೆ ಪಾವತಿಸಬೇಕು. (ಪ್ರಕರಣ-202)

49. ಗ್ರಾಮ ಪಂಚಾಯತಿಗೆ ಸಂದಾಯವಾಗಬೇಕಾದ ತೆರಿಗೆ, ದರ, ಫೀಜು ಅಥವಾ ಇತರ ಮೊಬಲಗನ್ನು ಏಜೆನ್ಸಿ ಮೂಲಕ ಸಂಗ್ರಹಿಸಬಹುದಾಗಿದೆ. (ಪ್ರಕರಣ-203)

50. ಸರ್ಕಾರವು ಪ್ರತಿಯೊಂದು ಗ್ರಾಮ ಪಂಚಾಯತಿಗೂ ವಾರ್ಷಿಕವಾಗಿ ಕಾಲ ಕಾಲಕ್ಕೆ ಅನುಸೂಚಿಸಬಹುದಾದಂತೆ ಅನುದಾನ ನೀಡ ಬಹುದಾಗಿದೆ. ಜನಸಂಖ್ಯೆ ಆಧಾರದ ಮೇಲೆ ಪ್ರಸ್ತುತ ರೂ.8.00ಲಕ್ಷ, ರೂ.10.00ಲಕ್ಷ ಹಾಗೂ ರೂ.12.00 ಲಕ್ಷಗಳ ಅನುದಾನವನ್ನು ನೀಡಲಾಗುತ್ತಿದೆ, ಈ ಅನುದಾನದ ಶೇ.40 ರಷ್ಟು ಮೊತ್ತವನ್ನು ಗ್ರಾಮ ಪಂಚಾಯತಿ ಸಿಬ್ಬಂದಿ ವೆಚ್ಚಕ್ಕೂ ಹಾಗೂ ಶೇ.60 ರಷ್ಟು ಮೊತ್ತವನ್ನು ವಿದ್ಯುತ್ ಬಿಲ್ಲು ಪಾವತಿಗೆ ಬಳಸಬಹುದಾಗಿದೆ. (ಪ್ರಕರಣ-206)

51. ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಪ್ರಸ್ತುತ ನೀಡುತ್ತಿರುವ ಗೌರವ ಧನ ರೂ.1000/- ಗ್ರಾ.ಪಂ. ಉಪಾಧ್ಯಕ್ಷರಿಗೆ ಪ್ರಸ್ತುತ ನೀಡುತ್ತಿರುವ ಗೌರವ ಧನ ರೂ.600/-, ಸದಸ್ಯರಿಗೆ ಗೌರವ ಧನ ರೂ. 500/- ಉಪವೇಶನ ಶುಲ್ಕ ರೂ. 100/-.

52. ಗ್ರಾಮ ಪಂಚಾಯತಿಯು ಚರ ಮತ್ತು ಸ್ತಿರ ಆಸ್ತಿಗಳನ್ನು ಗಳಿಸಬಹುದು, ಧಾರಣ ಮಾಡಬಹುದು ಮತ್ತು ವಿಲೇ ಹಾಗೂ ವರ್ಗಾವಣೆ ಮಾಡಬಹುದು. ಆದರೆ ಈ ಕ್ರಮಕ್ಕೆ ತಾಲ್ಲೂಕು ಪಂಚಾಯತಿಯ ಅನುಮೋದನೆಯನ್ನು ಪಡೆಯಬೇಕು. ಗುತ್ತಿಗೆ ಅಥವಾ ಬಾಡಿಗೆ ಮೂಲಕ ವರ್ಗಾವಣೆ ಮಾಡಿದರೆ ಶೇ.25ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಡಬೇಕು. (ಪ್ರಕರಣ-209)

53. ಗ್ರಾಮ ಪಂಚಾಯತಿಯ ಆಡಳಿತ ವ್ಯಾಪ್ತಿಗೆ ಸರ್ಕಾರ ಸ್ವತ್ತನ್ನು ಷರತ್ತುಗಳೊಂದಿಗೆ ವರ್ಗಾಯಿಸಬಹುದು.(ಪ್ರಕರಣ-210)

54. ಗ್ರಾಮ ಪಂಚಾಯತಿಯು ಸರ್ಕಾರದಿಂದ ಅಥವಾ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳಿಂದ ಸ್ವೀಕರಿಸುವ ಅನುದಾನ, ತೆರಿಗೆಗಳಿಂದ ಬರುವ ಮೊತ್ತ ಹಾಗೂ ಸ್ತಿರ ಹಾಗೂ ಚರ ಸ್ವತ್ತಿನಿಂದ ಬರುವ ಎಲ್ಲಾ ಆದಾಯಗಳನ್ನು **"ಗ್ರಾಮ ಪಂಚಾಯತಿ ನಿಧಿ"ಗೆ** ಜಮೆ ಮಾಡಬೇಕು. ಈ ನಿಧಿಯಿಂದ ಅಧ್ಯಕ್ಷ ಉಪಾಧ್ಯಕ್ಷ ಮತ್ತು ಸಿಬ್ಬಂದಿಗಳ ವೇತನ, ದಿನಭತ್ಯೆ ಪ್ರಯಾಣ ಭತ್ಯೆಗಳನ್ನು ಸಂದಾಯ ಮಾಡಬಹುದು. ಯಾವುದೇ ಸಾಲದ ಮೇಲೆ ಬಾಕಿ ಇರುವ ಮೊಬಲಗನ್ನು ಪಾವತಿ ಮಾಡಬಹುದು. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಯ ಅನುಮತಿ ಪಡೆದು ಅಗತ್ಯವೆನಿಸಿದ್ದಲ್ಲಿ ಬೇರೆ ವೆಚ್ಚಗಳನ್ನು ಮಾಡಬಹುದು. (ಪ್ರಕರಣ-212)

55. ಗ್ರಾಮ ಪಂಚಾಯತಿಗಳು ಸಾಲವನ್ನು ಪಡೆಯಬಹುದು ಆದರೆ ಇದಕ್ಕಾಗಿ ಸರ್ಕಾರದ ಮಂಜೂರಾತಿ ಪಡೆಯಬೇಕು.(ಪ್ರಕರಣ-214)

56. ಗ್ರಾಮ ಪಂಚಾಯತಿಯ ಕಾರ್ಯನಿರ್ವಹಣೆಯ ಬಗ್ಗೆ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕಾಧಿಕಾರಿ ಪರಿವೀಕ್ಷಣೆ ಮಾಡಬಹುದು. ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣೆಯ ಬಗ್ಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ ಪರಿವೀಕ್ಷಣೆ ಮಾಡಬಹುದು. ಜಿಲ್ಲಾ ಪಂಚಾಯತಿಯ ಕಾರ್ಯನಿರ್ವಹಣೆಯ ಬಗ್ಗೆ ಸರ್ಕಾರ ಅಥವಾ ಅದರಿಂದ ಅಧಿಕಾರ ಪಡೆದ ಯಾವುದೇ ಅಧಿಕಾರಿ ಪರಿವೀಕ್ಷಣೆ ಮಾಡ ಬಹುದು.(ಪ್ರಕರಣ-232)

57. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ತಪ್ಪು ಮಾಡಿದಾಗ ಸರ್ಕಾರ ವಿಧಿಬದ್ಧವಾಗಿ ವಿಚಾರಣೆ ನಡೆಸಿ, ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲು ತಿಳುವಳಿಕೆ

ನೀಡಬಹುದು ಮತ್ತು ವಿಚಾರಣೆ ಮಾಡಬಹುದು. (ಪ್ರಕರಣ–235, 236)

58. ಗ್ರಾಮ ಪಂಚಾಯತಿಯು ವಾರ್ಷಿಕವಾಗಿ ಆದಾಯ ಮತ್ತು ವೆಚ್ಚದ ಬಜೆಟ್ಟನ್ನು ಪ್ರತಿ ವರ್ಷದ ಫೆಬ್ರವರಿ 1ನೇ ದಿನದ ಮತ್ತು ಮಾರ್ಚ್ 10ನೇ ದಿನದ ನಡುವೆ ಸಭೆಯಲ್ಲಿ ಮಂಡಿಸಬೇಕು. ಒಂದು ವೇಳೆ ಗ್ರಾಮ ಪಂಚಾಯತಿಯು ಈ ದಿನಾಂಕದ ಒಳಗೆ ಬಜೆಟ್ಟನ್ನು ಅಂಗೀಕರಿಸಲು ತಪ್ಪಿದರೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಈ ಅಂದಾಜು ಪಟ್ಟಿಯನ್ನು ತಾಲ್ಲೂಕು ಪಂಚಾಯತಿಗೆ ಸಲ್ಲಿಸತಕ್ಕದ್ದು. ತಾಲ್ಲೂಕು ಪಂಚಾಯತಿಯು ಅನುಮೋದಿಸಿದ ನಂತರ ಬಜೆಟ್ಟನ್ನು ಕಾರ್ಯನಿರ್ವಾಹಕಾದಿಕಾರಿಯು ಪ್ರಮಾಣೀಕರಿಸತಕ್ಕದ್ದು. ಅದರಂತೆ ಗ್ರಾಮ ಪಂಚಾಯತಿಯು ಯಥಾವಿಧಿಯಾಗಿ ಅನುಮೋದಿಸಿದೆ ಎಂದು ಪರಿಗಣಿಸಬಹುದು. (ಪ್ರಕರಣ–241)

59. ಗ್ರಾಮ ಪಂಚಾಯತಿಗಳು ವಸೂಲಾಗದ ಮೊತ್ತ ಒಂದು ಸಾವಿರಕ್ಕಿಂತ ಕಡಿಮೆ ಇದ್ದರೆ ಅದನ್ನು ವಸೂಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟರೆ ಆ ಮೊತ್ತವನ್ನು ವಜಾಗೊಳಿಸಬಹುದು. ಒಂದು ಸಾವಿರಕ್ಕಿಂತ ಹೆಚ್ಚಾಗಿರುವ ವಸೂಲಾಗದ ಮೊತ್ತವನ್ನು ತಾಲ್ಲೂಕು ಪಂಚಾಯತಿಯ ಅನುಮೋದನೆ ಪಡೆದು ವಜಾಗೊಳಿಸಬಹುದು.(ಪ್ರಕರಣ–245)

60. ಪ್ರತಿಯೊಂದು ಗ್ರಾಮ ಪಂಚಾಯತಿಯ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕ ಪತ್ರ ನಿಯಂತ್ರಕರು ಅಧಿಕಾರ ನೀಡಿರುವಂತ ಲೆಕ್ಕ ಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಬೇಕು. ಲೆಕ್ಕ ಪರಿಶೋಧನೆಯು ಮುಕ್ತಾಯವಾದ ಒಂದು ತಿಂಗಳಲ್ಲಿ ವರದಿಯ ಒಂದು ಪ್ರತಿಯನ್ನು ಗ್ರಾಮ ಪಂಚಾಯತಿಗೆ ಮತ್ತು ಒಂದು ಪ್ರತಿಯನ್ನು ಕಾರ್ಯನಿರ್ವಾಹಕಾಧಿಕಾರಿಗೆ ಕಳುಹಿಸಬೇಕು. ವರದಿಯಲ್ಲಿ ಕಂಡು ಬಂದ ದೋಷಗಳನ್ನು ಅಥವಾ ಅಕ್ರಮಗಳಿಗೆ ಸಂಬಂಧಪಟ್ಟಂತೆ ವಿಚಾರಣೆಯನ್ನು ಕಾರ್ಯನಿರ್ವಾಹಕಾಧಿಕಾರಿ ನಡೆಸಬಹುದು. ಯಾವುದಾದರೂ ಅಕ್ರಮಗಳಿದ್ದರೆ ಅದು ಬಾಕಿಯಾದ ದಿನಾಂಕದಿಂದ ಬಾಕಿ ಮೊಬಲಗಿನ ಮೇಲೆ ಶೇ.15ರಷ್ಟು ಬಡ್ಡಿ ಸಹಿತ ಗ್ರಾಮ ಪಂಚಾಯತಿಗೆ ಸಂದಾಯ ಮಾಡಲು ಆದೇಶಿಸಬಹುದು. ಈ ಮೊತ್ತವನ್ನು ಪಾವತಿಸದಿದ್ದರೆ ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡಲು ಕ್ರಮ ಕೈಗೊಳ್ಳಬಹುದು. (ಪ್ರಕರಣ–246)

61. ಪ್ರತಿ 5 ವರ್ಷಕ್ಕೊಮ್ಮೆ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತಿಗಳ ಹಣಕಾಸು ಪರಿಸ್ಥಿತಿಗಳನ್ನು ಪರಾಮರ್ಶಿಸಲು ರಾಜ್ಯ ಸರ್ಕಾರವು ಹಣಕಾಸು ಆಯೋಗವನ್ನು ರಚಿಸುವುದು. ಆಯೋಗದ ಶಿಫಾರಸ್ಸಿನಂತೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನಗಳನ್ನು ಸರ್ಕಾರ ಬಿಡುಗಡೆ ಮಾಡುವುದು.

62. ತಾಲ್ಲೂಕು ಪಂಚಾಯತಿಯ ಶಿಪಾರಸ್ಸಿನ ಮೇಲೆ ಅಥವಾ ಜಿಲ್ಲಾ ಪಂಚಾಯತಿನ ಅಭಿಪ್ರಾಯದಲ್ಲಿ ಗ್ರಾಮ ಪಂಚಾಯತಿಯು ಅಧಿಕಾರವನ್ನು ಮೀರಿದರೆ ಅಥವಾ ಅದನ್ನು ದುರುಪಯೋಗಪಡಿಸಿದರೆ ಅಥವಾ ಕರ್ತವ್ಯಗಳನ್ನು ನೆರವೇರಿಸಲು ಸತತವಾಗಿ ತಪ್ಪಿದ್ದಲ್ಲಿ ಜಿಲ್ಲಾ ಪಂಚಾಯತಿಯು ಅಂಥಹ ಗ್ರಾಮ ಪಂಚಾಯತಿಗಳನ್ನು ವಿಸರ್ಜಿಸಬಹುದು. (ಪ್ರಕರಣ–268)

63. ಪಂಚಾಯತಿಗಳ ಸದಸ್ಯರು, ಅವುಗಳ ಅಧಿಕಾರಿಗಳು ಮತ್ತು ಲೋಕ ನೌಕರರನ್ನು ತತ್ಕಾಲದಲ್ಲಿ ಜಾರಿ ಇರುವ ಭಾರತ ದಂಡ ಸಂಹಿತೆಯ 21ನೇ ಪ್ರಕರಣ ಮತ್ತು ಭ್ರಷ್ಟಾಚಾರ ನಿವಾರಣಾ ಅಧಿನಿಯಮ 1988ರ ಅರ್ಥ ವ್ಯಾಪ್ತಿಯಲ್ಲಿ **"ಲೋಕ ನೌಕರ"** ಎಂದು ಪರಿಗಣಿಸಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬಹುದಾಗಿದೆ.(ಪ್ರಕರಣ–286)

64. ಪ್ರತಿ ಜಿಲ್ಲೆಯಲ್ಲಿ ನಿವೃತ್ತ ನ್ಯಾಯಾಧೀಶ ಅಥವಾ ವಿಶೇಷ ಡೆಪ್ಯುಟಿ ಕಮಿಷನರ್ ದರ್ಜೆಗೆ ಸಮನಾದ ಅಧಿಕಾರಿಯನ್ನು **"ಕುಂದುಕೊರತೆ ನಿವಾರಣಾ ಪ್ರಾಧಿಕಾರ"** ವೆಂದು ನೇಮಿಸಲಾಗಿದೆ ಇವರು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಆಡಳಿತದ ಲೋಪದೋಷಗಳ ಬಗ್ಗೆ ದೂರನ್ನು ಸ್ವೀಕರಿಸಿ ವಿಚಾರಣೆಯನ್ನು ನಡೆಸಲು ಮತ್ತು ದೂರಿನ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡುವ ಹಾಗೂ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಲು ಶಾಸನಬದ್ಧ ಅಧಿಕಾರವನ್ನು ಹೊಂದಿರುತ್ತಾರೆ.

ಲೇಖನ

# ಪಂಚಾಯತ್ 100 – ಬಾಪೂಜಿ ಸೇವಾ ಕೇಂದ್ರ

– ಮಹಮ್ಮದ್ ಇಮ್ತಿಯಾಜ್

ಸಾರ್ವಜನಿಕರಿಗೆ ಜಾತಿ, ಆದಾಯ ಪ್ರಮಾಣ ಪತ್ರಗಳನ್ನು ಈ ಹಿಂದೆ ತಾಲೂಕು ಮಟ್ಟದಲ್ಲಿ ನೀಡಲಾಗುತ್ತಿತ್ತು. ಇದಕ್ಕಾಗಿ ಸಾರ್ವಜನಿಕರು ಲಿಖಿತ ಅರ್ಜಿ ಮತ್ತು ಸಂಬಂಧಿತ ದಾಖಲೆಗಳನ್ನು ತಾಲೂಕು ಕಛೇರಿಗೆ ನೀಡಬೇಕಾಗುತ್ತಿತ್ತು. ಇದನ್ನು ಭೌತಿಕವಾಗಿ ಸಂಸ್ಕರಿಸಿ ಅದನ್ನು ಕ್ಷೇತ್ರ ಅಧಿಕಾರಿಗೆ ಪರಿಶೀಲನೆಗಾಗಿ ಕಳುಹಿಸಲಾಗುತ್ತಿತ್ತು. ನಂತರ ಅವರ ವರದಿಯನ್ನು ಆಧರಿಸಿ ತಹಸೀಲ್ದಾರ್ ಪ್ರಮಾಣ ಪತ್ರವನ್ನು ನೀಡುತ್ತಿದ್ದರು. ಇದೊಂದು ಗೊಂದಲಮಯ ಮತ್ತು ದುಬಾರಿಯ ಜೊತೆಗೆ ಬಹಳ ಸಮಯ ತೆಗೆದುಕೊಳ್ಳುವ ಪ್ರಕ್ರಿಯೆಯಾಗಿತ್ತು.

2006ರಲ್ಲಿ ಇ–ಆಡಳಿತ ಇಲಾಖೆಯು ಆರ್‌ಡಿಎಸ್ (ರೂರಲ್ ಡಿಜಿಟಲ್ ಸರ್ವೀಸ್) ಮೂಲಕ ಈ ಸೇವೆಗಳನ್ನು ಒದಗಿಸುವವರೆಗೂ ಈ ಪ್ರಕ್ರಿಯೆಯು ಮುಂದುವರೆಯಿತು. ಸರ್ಕಾರ ರಾಜ್ಯ, ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ಒದಗಿಸುವ ಸೇವೆಗಳನ್ನು ಹೋಬಳಿ ಮಟ್ಟದಲ್ಲಿ ಒದಗಿಸುವ ಪ್ರಪ್ರಥಮ ಗಣಕೀಕೃತ ಸೇವೆ ಆರ್‌ಡಿಎಸ್. ಕಾರ್ಯಾಡಳಿತವನ್ನು ಸಾರ್ವಜನಿಕರ ನಿಕಟಕ್ಕೆ ತರುವ ಮತ್ತು ಸರ್ಕಾರ ಮತ್ತು ಸಾರ್ವಜನಿಕರ ಮಧ್ಯೆ ದಕ್ಷ ಮತ್ತು ತ್ವರಿತವಾಗಿ ಸಂಪರ್ಕ ಕಲ್ಪಿಸುವ ಉದ್ದೇಶವನ್ನು ಆರ್‌ಡಿಎಸ್ ಹೊಂದಿತ್ತು.

ಪ್ರತಿಯೊಂದು ಹೋಬಳಿಯೂ ಆರರಿಂದ ಏಳು ಗ್ರಾಮ ಪಂಚಾಯತಿಗಳನ್ನು ಹೊಂದಿರುತ್ತದೆ. ಈ ಎಲ್ಲಾ ಗ್ರಾಮ ಪಂಚಾಯತಿಗಳ ಸುಮಾರು 20 ಸಾವಿರ ಜನರು ಸರ್ಕಾರಿ ಸೇವೆಯನ್ನು ಹೋಬಳಿ ಮಟ್ಟದಲ್ಲೇ ಪಡೆಯಬೇಕಾದುದರಿಂದ ಜನಸಂದಣಿ ಹೆಚ್ಚುವುದರ ಜೊತೆಗೆ ಕೇಂದ್ರದಲ್ಲಿ ತ್ವರಿತ ಗತಿಯಲ್ಲಿ ಸೇವೆಯನ್ನು ಒದಗಿಸುವುದಕ್ಕೆ ತೊಡಕಾಗುತ್ತಿತ್ತು. ಜೊತೆಗೆ ಸಾರ್ವಜನಿಕರು ಸೇವೆಗಳನ್ನು ಪಡೆಯಲು ಸಾಕಷ್ಟು ದೂರ ಕ್ರಮಿಸ ಬೇಕಾದುದರಿಂದ ಸಾಕಷ್ಟು ಹಣ ವ್ಯಯಿಸಬೇಕಾಗುತ್ತಿತ್ತು.

ಗ್ರಾಮೀಣಾಭಿವೃದ್ಧಿ ಇಲಾಖೆಯ 43 ಸೇವೆಗಳನ್ನು ಈ ಹಿಂದೆ ಲಿಖಿತ ರೂಪದಲ್ಲಿ ಅರ್ಜಿ ಸ್ವೀಕರಿಸಿ ಕೈಯಾರೆ ಒದಗಿಸಲಾಗುತ್ತಿತ್ತು. ಈ ಪ್ರಕ್ರಿಯೆ ವಿಳಂಬ ಮತ್ತು ಪಾರದರ್ಶಕತೆಯಿಂದ ಕೂಡಿರಲಿಲ್ಲ. ಇವೆಲ್ಲ ತೊಂದರೆಗಳನ್ನು ಸರಿಪಡಿಸಿ ಸೇವೆಗಳನ್ನು ಉನ್ನತ ಮಟ್ಟದಲ್ಲಿ ಗಣಕೀಕೃತವಾಗಿ ನೀಡಲು ಸರ್ಕಾರವು ದಿಟ್ಟ ಹೆಜ್ಜೆಯನ್ನಿಟ್ಟಿದೆ.

ಈ ಸಮಸ್ಯೆಗೆ ಪರಿಹಾರವಾಗಿ, ಗ್ರಾಮೀಣ ಜನತೆ ತಮಗೆ ಅವಶ್ಯವಿರುವ ವಿವಿಧ ಇಲಾಖೆಗಳ ದಾಖಲೆ ಅಥವಾ ಸೇವೆಗಳನ್ನು ಮತ್ತಷ್ಟು ದಕ್ಷ ಹಾಗೂ ತ್ವರಿತ ರೀತಿಯಲ್ಲಿ ತಮ್ಮ ಗ್ರಾಮ ಪಂಚಾಯತಿಯಲ್ಲೇ ಪಡೆದುಕೊಳ್ಳುವ ಯೋಜನೆಯೊಂದನ್ನು ಕಲ್ಪಿಸಲಾಯಿತು.

ಗ್ರಾಮೀಣ ಶ್ರೀಸಾಮಾನ್ಯನಿಗೆ ಅವಶ್ಯವಿರುವ 100 ಸೇವೆಗಳನ್ನು ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಒಂದೇ ಸೂರಿನಡಿ ನೀಡಲಾಗುತ್ತಿದೆ.

## ಪರಿಚಯ:

ಗ್ರಾಮೀಣ ಜನತೆಯು ತಮ್ಮ ಸಾಮಾಜಿಕ, ಶೈಕ್ಷಣಿಕ, ವಾಣಿಜ್ಯ ಹಾಗೂ ಕೃಷಿ ಚಟುವಟಿಕೆಗಳಿಗಾಗಿ ವಿವಿಧ ಇಲಾಖೆಗಳಿಂದ ಹಲವಾರು ದಾಖಲೆಗಳನ್ನು ತ್ವರಿತವಾಗಿ ಮತ್ತು ಸಮೀಪವಾಗಿ ಒಂದೇ ಸೂರಿನಡಿ ಪಡೆದುಕೊಳ್ಳಲು ಗ್ರಾಮ

ರಾಜ್ಯ ಯೋಜನಾ ವ್ಯವಸ್ಥಾಪಕರು (ಇ–ಪಂಚಾಯತ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪಂಚಾಯತಿ ಮಟ್ಟದಲ್ಲಿ ಸ್ಥಾಪಿಸಿರುವ ಕೇಂದ್ರವೇ ಬಾಪೂಜಿ ಸೇವಾ ಕೇಂದ್ರ.

ಪಂಚತಂತ್ರ, ನಾಡಕಛೇರಿ ತಂತ್ರಾಂಶ ಹಾಗೂ ಭೂಮಿ ತಂತ್ರಾಂಶಗಳನ್ನು ಸಮ್ಮಿಲನಗೊಳಿಸಿ, ಪ್ರಸ್ತುತ ನಾಡ ಕಛೇರಿಗಳು / ಅಟಲ್‌ಜಿ ಸೇವಾ ಕೇಂದ್ರಗಳು ಸಾರ್ವಜನಿಕರಿಗೆ ನೀಡುತ್ತಿರುವ ಸೇವೆಯ ಮಾದರಿಯಲ್ಲಿಯೇ ಗ್ರಾಮ ಪಂಚಾಯತಿಗಳು ಈಗ ನೀಡುತ್ತಿರುವ 43 ಸೇವೆಗಳ ಜೊತೆಗೆ ಪಹಣಿ ಪತ್ರ ಒಳಗೊಂಡಂತೆ 40 ಸೇವೆಗಳನ್ನು ಒಂದೇ ಸೂರಿನಡಿ ಒದಗಿಸಲಾಗುತ್ತದೆ. ಸಾರ್ವಜನಿಕರು ತಮ್ಮ ದಾಖಲೆಗಳಿಗಾಗಿ ಕಛೇರಿಯಿಂದ ಕಛೇರಿಗೆ ಅಲೆಯುವುದನ್ನು ತಪ್ಪಿಸಲು ಹಾಗೂ ನಿಗದಿತ ಅವಧಿಯಲ್ಲಿ ನಿರಾಳವಾಗಿ ದಾಖಲೆಯನ್ನು ಪಡೆಯುವ ವ್ಯವಸ್ಥೆಯನ್ನು ರೂಪಿಸಲು ಬಾಪೂಜಿ ಸೇವಾ ಕೇಂದ್ರ ಒಂದು ಉತ್ತಮ ಮಾದರಿಯಾಗಿದೆ.

## ಯೋಜನೆಯ ಮಹತ್ವ:

ಬಾಪೂಜಿ ಸೇವಾ ಕೇಂದ್ರಗಳಿಗೆ ಹೆಚ್ಚಿನ ಔಚಿತ್ಯ ಮತ್ತು ಮಹತ್ವವಿರುವುದಕ್ಕೆ ಬಹು ಮುಖ್ಯವಾದ ಕಾರಣವೆಂದರೆ ನಾಗರೀಕರಿಗೆ ಅಗತ್ಯವಿರುವ 100 ಸೇವೆಗಳನ್ನು ಒಂದೇ ಸೂರಿನಡಿ ಪಡೆಯುವ ವ್ಯವಸ್ಥೆಯನ್ನು ಕಲ್ಪಿಸಿರುವುದು. ಅಂದರೆ ಗ್ರಾಮ ಪಂಚಾಯತಿಗಳು ಈಗ ನೀಡುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 43 ಸೇವೆಗಳ ಜೊತೆಗೆ ಪಹಣಿ ಪತ್ರ ಒಳಗೊಂಡಂತೆ ಕಂದಾಯ ಇಲಾಖೆಯ 40 ಸೇವೆಗಳನ್ನು ಒಂದೇ ಸೂರಿನಡಿ ಒದಗಿಸಲಾಗುತ್ತದೆ. ಇದರಿಂದ ಸಾರ್ವಜನಿಕರು ತಮ್ಮ ದಾಖಲೆಗಳಿಗಾಗಿ ಕಛೇರಿಯಿಂದ ಕಛೇರಿಗೆ (ಗ್ರಾಮ ಪಂಚಾಯತಿ, ನಾಡಕಛೇರಿ, ತಾಲ್ಲೂಕು ಕಛೇರಿಗಳಿಗೆ) ಅಲೆಯುವುದನ್ನು ತಪ್ಪಿಸಿರುವುದು ಈ ಕೇಂದ್ರದ ಮಹತ್ವ ಹೆಚ್ಚಿಸಿದೆ.

## ಯೋಜನೆಯ ಪ್ರಯೋಜನಗಳು:

· ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೇವೆಗಳು, ಕಂದಾಯ ಇಲಾಖೆಯ ಸೇವೆಗಳನ್ನೊಳಗೊಂಡ ಒಟ್ಟು 100 ಸೇವೆಗಳು ಒಂದೇ ಸೂರಿನಡಿ ಪಡೆಯುವುದು

- ತಂತ್ರಾಂಶ ಬಳಕೆಯಿಂದ ತ್ವರಿತಗತಿಯ ಸೇವೆ.
- ಮೊಬೈಲ್ ಸಂದೇಶಗಳ ಮೂಲಕ ಅರ್ಜಿಗಳ ಸ್ಥಿತಿಗತಿಯ ವಿವರ ನೀಡುವುದು.

## ಕೇಂದ್ರಗಳು ಎಲ್ಲಿವೆ?

ಕರ್ನಾಟಕದಲ್ಲಿ 6022 ಗ್ರಾಮ ಪಂಚಾಯತಿ ಗಳಿವೆ. ಇವುಗಳಲ್ಲಿ 4037 ಗ್ರಾಮ ಪಂಚಾಯತಿಗಳು ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಹೊಂದಿವೆ. ಬಾಪೂಜಿ ಸೇವಾ ಕೇಂದ್ರಗಳ ಮೊದಲ ಹಂತದ ಅನುಷ್ಠಾನಕ್ಕಾಗಿ 2000 ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲಾಯಿತು. ಗ್ರಾಮ ಪಂಚಾಯತಿಗಳ ಆಯ್ಕೆಗಾಗಿ ಅನುಸರಿಸಲಾದ ಮಾನದಂಡಗಳು

- ಉತ್ತಮ ವೇಗದ ಬ್ರಾಡ್‌ಬ್ಯಾಂಡ್ ಸಂಪರ್ಕ ವ್ಯವಸ್ಥೆ ಹೊಂದಿರುವುದು
- ನಾಡ ಕಛೇರಿ ಇಲ್ಲದೇ ಇರುವುದು
- ಜನಸಂಖ್ಯೆ 5000 ಕ್ಕೂ ಹೆಚ್ಚಿರುವುದು

ಮೊದಲ ಹಂತದಲ್ಲಿ ಆಯ್ಕೆಯಾದ 2000 ಗ್ರಾಮ ಪಂಚಾಯತಿಗಳಲ್ಲಿ ಬಾಪೂಜಿ ಸೇವಾ ಕೇಂದ್ರಗಳು ಜುಲೈ 1 2016ರಿಂದ ಪ್ರಾರಂಭಗೊಂಡಿದೆ. ಹಾವೇರಿಯ ರಾಣೇಬೆನ್ನೂರು ತಾಲೂಕಿನ ಕಾಕೋಳ ಗ್ರಾಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು' ಪಂಚಾಯತ್ 100 – ಬಾಪೂಜಿ ಸೇವಾ ಕೇಂದ್ರಗಳಿಗೆ' ವಿದ್ಯುಕ್ತವಾಗಿ ಚಾಲನೆ ನೀಡಿದ್ದಾರೆ. ಎರಡನೇ ಹಂತದಲ್ಲಿ 2023 ಗ್ರಾಮ ಪಂಚಾಯತಿಗಳಲ್ಲಿ ಸೇವಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

## ಬಾಪೂಜಿ ಸೇವಾ ಕೇಂದ್ರಗಳಿಗೆ ಚಾಲನೆ ನೀಡಿದ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ:

ರೈತರು ಮತ್ತು ಜನರ ಅನುಕೂಲಕ್ಕಾಗಿ ನೂರು ಸೇವೆಗಳನ್ನು ಜನರ ಮನೆಬಾಗಿಲಿಗೆ ತಲುಪಿಸುವ ವಿನೂತನ ಯೋಜನೆ ಇದಾಗಿದ್ದು ದೇಶದಲ್ಲೇ ಪ್ರಪ್ರಥಮವಾಗಿದೆ. ತಮ್ಮ ಸ್ಥಳೀಯ ಗ್ರಾಮ ಪಂಚಾತಿಯಲ್ಲಿ ಇನ್ನು ಮುಂದೆ ಪಹಣಿಪತ್ರ ಸೇರಿದಂತೆ ಇತರೇ ಅಗತ್ಯ ಸವಲತ್ತುಗಳು ಸಿಗಲಿವೆ. ಗ್ರಾಮೀಣ ಜನರ ಸಬಲೀಕರಣಕ್ಕೆ ತಂತ್ರಜ್ಞಾನದ ಸದುಪಯೋಗಕ್ಕೆ ಈ ಯೋಜನೆ ಅತ್ಯುತ್ತಮ ಉದಾಹರಣೆಯಾಗಿದೆ.

– ಶ್ರೀ ಸಿದ್ದರಾಮಯ್ಯ,
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಹೇಳಿಕೆ:**

ರಾಜ್ಯದ ನಾಲ್ಕು ಸಾವಿರ ಗ್ರಾಮ ಪಂಚಾಯತಿಗಳಲ್ಲಿ 'ಪಂಚಾಯತಿ 100 – ಬಾಪೂಜಿ ಸೇವಾ ಕೇಂದ್ರಗಳನ್ನು ಆ.15ರಿಂದ ಆರಂಭಿಸಲಾಗಿದೆ. ರಾಜ್ಯದ ಎಲ್ಲ ಗ್ರಾಪಂಗಳಲ್ಲಿ ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸೇವಾ ಕೇಂದ್ರಗಳಲ್ಲಿ ಕಂದಾಯ ಇಲಾಖೆಯ 40, ಆರ್‌ಡಿಪಿಆರ್‌ನ 43 ಹಾಗೂ ಸರಕಾರದ ಅಂಗಸಂಸ್ಥೆಯ ವಿವಿಧ ಇಲಾಖೆಗಳ 17 ಸೇವೆ ಸೇರಿದಂತೆ ಒಟ್ಟು 100 ಸೇವೆಗಳು ಸಾರ್ವಜನಿಕರಿಗೆ ಲಭ್ಯವಾಗಲಿವೆ.

**– ಎಚ್.ಕೆ.ಪಾಟೀಲ್**

**ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಕರ್ನಾಟಕ ಸರ್ಕಾರ**


## ಯಾವ್ಯಾವ ಸೇವೆಗಳು ಲಭ್ಯ ?

ಪಹಣಿ, ಜನಸಂಖ್ಯೆ ದೃಢೀಕರಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಹಿಂದುಳಿದ ವರ್ಗಗಳ ಪ್ರಮಾಣಪತ್ರ, ವಾಸಸ್ಥಳ, ಆದಾಯ ದೃಢೀಕರಣ, ಜೀವಂತ ದೃಢೀಕರಣ, ಜಮೀನು ಇಲ್ಲದಿರುವ ಪತ್ರ, ಕೃಷಿ ಕಾರ್ಮಿಕ ದೃಢೀಕರಣ ಪತ್ರ, ಭೂ ಹಿಡುವಳಿ ಪ್ರಮಾಣಪತ್ರ, ಅಂಗವಿಕಲರ ವೇತನ, ಸಂಧ್ಯಾ ಸುರಕ್ಷಾ, ಮೈತ್ರಿ, ಮನಸ್ವಿನಿ, ವೃದ್ಧಾಪ್ಯ ವೇತನ, ಬೆಳೆ ದೃಢೀಕರಣ ಪತ್ರ, ವಸತಿ ಮತ್ತು ವಾಣಿಜ್ಯ ಕಟ್ಟಡ ಅನುಮತಿ ವಿತರಣೆ, ತೆರಿಗೆ ನಿರ್ಧರಣಾ ಪಟ್ಟಿ ವಿತರಣೆ, ನೀರಿನ ಸಂಪರ್ಕ ಕಡಿತ, ಕೊಳವೆ ಬಾವಿ ನಿರ್ಮಾಣದ ವಿವರ ತಿಳಿಸುವುದು, ಸ್ವಚ್ಛ ಭಾರತ ಮಿಶನ್ ಅರ್ಜಿ, ಜೈವಿಕ ಅನಿಲ ಅರ್ಜಿ, ಖಾತ್ರಿ ಜಾಬ್‌ಕಾರ್ಡ್ ವಿತರಣೆ, ನೀರಿನ ಶುಲ್ಕ ಪಾವತಿ, ಕುಡಿಯುವ ನೀರಿನ ನಿರ್ವಹಣೆ ಸೇರಿದಂತೆ ಕಂದಾಯ ಇಲಾಖೆಯ 40 ಗ್ರಾಮೀಣಾಭಿವೃದ್ಧಿ ಇಲಾಖೆಯ 43 ಸೇವೆಗಳು ಹಾಗೂ ಇತರೆ 17 ಸೇವೆಗಳು, ಒಟ್ಟು 100 ಸೇವೆಗಳು ಲಭ್ಯವಿರುತ್ತವೆ.

## ಕೇಂದ್ರದ ಕಾರ್ಯನಿರ್ವಹಣೆ ಹೇಗೆ?

ಅರ್ಜಿದಾರರು ಕೋರಿದ ಸೇವೆಗಳನ್ನು ಒದಗಿಸಲು ಗ್ರಾಮ ಪಂಚಾಯತಿಯು ಮುಂಚೂಣಿ ಕೇಂದ್ರವಾಗಿ ಕಾರ್ಯನಿರ್ವಹಿಸುವುದು. ಭೂ ದಾಖಲೆಗಳಿಗೆ ಸಂಬಂಧಿಸಿದ ಸೇವೆಗಳನ್ನು ಪಡೆಯುವ ಕೋರಿಕೆಗಳನ್ನು ಅಂತರ್ಜಾಲದ ಮೂಲಕ ನಾಡ ಕಛೇರಿಗೆ ಸಂಪರ್ಕಿಸಲಾಗುವುದು. ಈ ಕೋರಿಕೆಗಳ ಬಗ್ಗೆ ಕಂದಾಯ ಇಲಾಖೆಯ ಪರಿಶೀಲನೆ ಮತ್ತು ಅನುಮೋದನೆ ಪಡೆದ ನಂತರ ಗ್ರಾಮ ಪಂಚಾಯತಿಯ ಪಂಚತಂತ್ರ ತಂತ್ರಾಂಶದ ಮೂಲಕ ದಾಖಲೆಗಳನ್ನು ವಿತರಿಸಲಾಗುವುದು.

## ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 43 ಸೇವೆಗಳಿಗೆ ಕಾರ್ಯ ನಿರ್ವಹಣಾ ಹಂತಗಳು :




ಬಾಪೂಜಿ ಸೇವಾ ಕೇಂದ್ರದಲ್ಲಿ ದೊರೆಯುವ ಎಲ್ಲಾ ಪ್ರಮಾಣ ಪತ್ರಗಳೂ ಅಧಿಕೃತ ದಾಖಲೆಯಾಗಿರುತ್ತದೆ. ದಾಖಲೆ ಪತ್ರದಲ್ಲಿನ ಯಾವುದಾದರೂ ಮಾಹಿತಿಯ ಬಗ್ಗೆ ಅನುಮಾನವಿದ್ದಲ್ಲಿ ಪತ್ರದ ಸಂಖ್ಯೆಯನ್ನು ಕಂದಾಯ ಇಲಾಖೆಯ ಸಂಖ್ಯೆ 51969 ಕ್ಕೆ ಎಸ್‌ಎಮ್‌ಎಸ್ ಮಾಡುವ ಮೂಲಕ ಸಂಪೂರ್ಣ ಮಾಹಿತಿಯನ್ನು ತಕ್ಷಣವೇ ಮೊಬೈಲ್ ಮೂಲಕ ಪಡೆದು ಕೊಳ್ಳಬಹುದು.

### ಬಾಪೂಜಿ ಸೇವಾ ಕೇಂದ್ರದ ಇಲ್ಲಿಯವರೆಗಿನ ಸಾಧನೆ:

1 ಜುಲೈ 2016 ರಲ್ಲಿ ಪ್ರಾರಂಭಗೊಂಡ 4023 ಗ್ರಾಮ ಪಂಚಾಯತಿಗಳಲ್ಲಿ ನೀಡಿರುವ ಪಹಣಿ ಪತ್ರಗಳ ಸಂಖ್ಯೆ – 890804. 4023 ಬಾಪೂಜಿ ಸೇವಾ ಕೇಂದ್ರಗಳ ಪೈಕಿ ಕಂದಾಯ ಇಲಾಖೆಯ 39 ಸೇವೆಗಳಿಗೆ 1,33,380 ಅರ್ಜಿಗಳು ಸ್ವೀಕೃತವಾಗಿವೆ. ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೇವೆಗಳಿಗೆ 1629 ಅರ್ಜಿಗಳು ಸ್ವೀಕೃತವಾಗಿವೆ. ಈ ಸಾಧನೆಯು ಬಾಪೂಜಿ ಸೇವಾ ಕೇಂದ್ರಗಳ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಈ ಕೇಂದ್ರಗಳನ್ನು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ವಿಸ್ತರಿಸಿದಲ್ಲಿ ಸಾರ್ವಜನಿಕರಿಗೆ ಏಕಗವಾಕ್ಷಿ, ಜನ-ಸ್ನೇಹಿ ಕೇಂದ್ರಗಳಾಗುವುದು ನಿಸ್ಸಂಶಯ.

### ಬಳಕೆದಾರರ ಪ್ರತಿಕ್ರಿಯೆ

"ನಮ್ಮೂರಿಂದ ಬಳ್ಳಾರಿಗೆ ಹೋಗಿ ತಾಲೂಕು ಕಚೇರಿ ಮುಂದೆ ಪಾಳಿಯಲ್ಲಿ ನಿಂತು ಪಹಣಿ ಪಡೆಯಬೇಕಾಗುತ್ತಿತ್ತು. ಒಂದೊಂದು ಬಾರಿ ಸರ್ವರ್‌ಡೌನ್ ಸಮಸ್ಯೆಯಿಂದಾಗಿ ಹಾಗೇ ಮರಳಿ ಬರಬೇಕಾಗುತ್ತಿತ್ತು. ಈಗ ಸರಕಾರ ನಮ್ಮೂರಲ್ಲಿಯೇ ಪಹಣಿ ಸೇರಿದಂತೆ ನಾನಾ ಪ್ರಮಾಣಪತ್ರ ವಿತರಿಸುತ್ತಿರುವುದು ಖುಷಿ ತಂದಿದೆ."

**– ದಂಡ ಬಸವರೆಡ್ಡಿ, ಘಾಲಾಕ್ಷಪ್ಪ, ಕೊಳಗಲ್ಲು, ಬಳ್ಳಾರಿ**

### ಕೇಂದ್ರದಲ್ಲಿ ಒದಗಿಸಲಾಗುವ ಸೇವೆಗಳು

#### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೇವೆಗಳು

1. ಕಟ್ಟಡ ಅನುಮತಿ ವಿತರಣೆ-ವಸತಿ (ಹೊಸ/ಹೆಚ್ಚುವರಿ/ಬದಲಾವಣೆ)
2. ಕಟ್ಟಡ ಅನುಮತಿ ವಿತರಣೆ-ವಾಣಿಜ್ಯ (ಹೊಸ/ಹೆಚ್ಚುವರಿ/ಬದಲಾವಣೆ)
3. ತೆರಿಗೆ ನಿರ್ಧರಣಾ ಪಟ್ಟಿ ವಿತರಣೆ
4. ಬೇಡಿಕೆ/ಕಂದಾಯ ನಕಲು ಪಟ್ಟಿ
5. ಆಸ್ತಿ ತೆರಿಗೆ ಮನ್ನಾ ಅರ್ಜಿ
6. ಕಟ್ಟಡ ಕಾಮಗಾರಿಯ ಮುಕ್ತಾಯ ಪ್ರಮಾಣ ಪತ್ರ ವಿತರಣೆ
7. ಹೊಸ ನೀರಿನ ಸಂಪರ್ಕಕ್ಕಾಗಿ ಅರ್ಜಿ
8. ನೀರಿನ ಸಂಪರ್ಕ ಕಡಿತ
9. ಕೊಳವೆ ಬಾವಿ ನಿರ್ಮಾಣದ ವಿವರ ತಿಳಿಸುವುದು
10. ಕೊಳವೆ ಬಾವಿ ನಿರ್ಮಾಣ ಮುಕ್ತಾಯ
11. ESCOMS ಆಕ್ಷೇಪಣೆ ರಹಿತ ಪತ್ರ ವಿತರಣೆ
12. ಹೊಲಿಗೆ ಯಂತ್ರಗಳು ಇತ್ಯಾದಿ ರೀತಿಯ ಕೌಶಲ್ಯ ಆಧಾರಿತ ಉಪಕರಣಗಳಿಗೆ ಮನವಿ
13. ಎಸ್.ಸಿ.ಪಿ ಯೋಜನೆಗಳ ಅರ್ಜಿ (ಜಾನುವಾರು ಆಹಾರ ಸಬ್ಸಿಡಿ, ಜಾನುವಾರು)
14. ವಸತಿ ಯೋಜನೆ ಪಡೆಯಲು ಅರ್ಜಿ
15. ಉಚಿತ ನಿವೇಶನ ಪಡೆಯಲು ಅರ್ಜಿ
16. ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮ ಅರ್ಜಿ
17. ಜೈವಿಕ ಅನಿಲ ಅರ್ಜಿ
18. ಗ್ರಾಮ ಪಂಚಾಯತಿಗಳಿಂದ NDC
19. ರಾಜೀವ್ ಗಾಂಧಿ ಉದ್ಯೋಗ ಯೋಜನೆ ಅರ್ಜಿ
20. ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೌಶಲ್ಯ ರಹಿತ ಕೆಲಸಗಾರರಿಗೆ ಉದ್ಯೋಗ ಒದಗಿಸುವುದು.
21. ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೌಶಲ್ಯ ರಹಿತ ಕೆಲಸಗಾರರಿಗೆ ಜಾಬ್ ಕಾರ್ಡ್ ವಿತರಣೆ
22. ವಸತಿ ಆಸ್ತಿ ತೆರಿಗೆ ಪಾವತಿ
23. ವಾಣಿಜ್ಯ ಆಸ್ತಿ ತೆರಿಗೆ ಪಾವತಿ
24. ನೀರಿನ ಶುಲ್ಕ ಪಾವತಿ
25. ಅಸ್ತಿತ್ವದಲ್ಲಿರುವ ಮಾರ್ಗಗಳಲ್ಲಿ ಹೊಸ ಬೀದಿ ದೀಪಗಳಿಗೆ ಅರ್ಜಿ
26. ಭೂ ಪರಿವರ್ತನೆಗೆ ನಿರಾಪೇಕ್ಷಣ ಪತ್ರ ವಿತರಣೆ
27. ಗ್ರಾಮ ಪಂಚಾಯತಿ ಆಸ್ತಿಗಳ ಬಾಡಿಗೆ ಪಾವತಿ
28. ಇತರೆ ಇಲಾಖೆಗಳಿಗೆ ನಿರಾಪೇಕ್ಷಣ ಪ್ರಮಾಣಪತ್ರ ವಿತರಣೆ
29. ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಕಾರ್ಯಗತಗೊಳಿಸಿದ ಕೆಲಸಕ್ಕೆ ಇ-ಪಾವತಿ
30. ವ್ಯಾಪಾರ ಪರವಾನಗಿ ವಿತರಣೆ (ಹೊಟೇಲ್ ಮತ್ತು ಅಂಗಡಿ)
31. ಕಾರ್ಖಾನೆಗಳಿಗೆ ನಿರಾಪೇಕ್ಷಣಾ ಪತ್ರ ವಿತರಣೆ
32. ಜಾಹೀರಾತು ಪರವಾನಗಿ ವಿತರಣೆ
33. ಮನರಂಜನಾ ಕಾರ್ಯಕ್ರಮಗಳಿಗೆ ನಿರಾಪೇಕ್ಷಣಾ ಪತ್ರ
34. ವ್ಯಾಪಾರ ಪರವಾನಗಿ ನವೀಕರಣ (ಹೊಟೇಲ್ ಮತ್ತು ಅಂಗಡಿ)
35. 25% ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ ಕಲ್ಯಾಣ ನಿಧಿ ಅಡಿಯಲ್ಲಿ ಸೇವೆಗಳ ಅರ್ಜಿ
36. ಜಾಹೀರಾತು ಪರವಾನಗಿ ನವೀಕರಣ

37. 3% ಅಂಗವಿಕಲರ ಕಲ್ಯಾಣ ನಿಧಿ ಅಡಿಯಲ್ಲಿ ಸೇವೆಗಳ ಅರ್ಜಿ
38. ಕುಡಿಯುವ ನೀರಿನ ನಿರ್ವಹಣೆ
39. ಬೀದಿ ದೀಪಗಳ ನಿರ್ವಹಣೆ (ಸಣ್ಣ ರಿಪೇರಿ)
40. ಗ್ರಾಮ ನೈರ್ಮಲ್ಯ ನಿರ್ವಹಣೆ
41. ದಾಖಲೆಗಳ ವಿತರಣೆ (ಜನಸಂಖ್ಯೆ, ಬೆಳೆ, ಜಾನುವಾರು ಗಣತಿ, ಬಿಪಿಎಲ್ ಪಟ್ಟಿ)
42. 2% ಕ್ರೀಡೆ ಕಲ್ಯಾಣ ನಿಧಿ ಅಡಿಯಲ್ಲಿ ಸೇವೆಗಳ ಅರ್ಜಿ
43. ವಿದ್ಯಾರ್ಥಿ/ಇತರರಿಗೆ ದೂರ ಪ್ರಮಾಣ ಪತ್ರ ವಿತರಣೆ

**ಕಂದಾಯ ಇಲಾಖೆಯ ಸೇವೆಗಳು**

1. ಜನಸಂಖ್ಯೆ ದೃಢೀಕರಣ ಪತ್ರ
2. ಜಾತಿ ಮತ್ತು ಆದಾಯ ದೃಢೀಕರಣ ಪತ್ರ
3. ಹಿಂದುಳಿದ ವರ್ಗಗಳ ಪ್ರಮಾಣ ಪತ್ರ (ಪ್ರವರ್ಗ–1)
4. ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳ ಪ್ರಮಾಣ ಪತ್ರ (ಪ.ಜಾ/ಪ.ಪಂ)
5. ಇತರೆ ಹಿಂದುಳಿದ ವರ್ಗಗಳ ದೃಢೀಕರಣ ಪತ್ರ (ಕೇಂದ್ರ)
6. ವಾಸಸ್ಥಳ ದೃಢೀಕರಣ ಪತ್ರ
7. ಆದಾಯ ದೃಢೀಕರಣ ಪತ್ರ
8. ಗೇಣಿ ರಹಿತ ದೃಢೀಕರಣ ಪತ್ರ
9. ವಿಧವಾ ದೃಢೀಕರಣ ಪತ್ರ
10. ಜೀವಂತ ದೃಢೀಕರಣ ಪತ್ರ
11. ವ್ಯವಸಾಯಗಾರರ ಕುಟುಂಬದ ಸದಸ್ಯ ದೃಢೀಕರಣ ಪತ್ರ
12. ಮರು ವಿವಾಹವಾಗದಿರುವ ದೃಢೀಕರಣ ಪತ್ರ
13. ಜಮೀನು ಇಲ್ಲದಿರುವ ದೃಢೀಕರಣ ಪತ್ರ
14. ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ
15. ನಿರುದ್ಯೋಗಿ ದೃಢೀಕರಣ ಪತ್ರ
16. ಸರ್ಕಾರಿ ನೌಕರಿಯಲ್ಲಿ ಇಲ್ಲದಿರುವ ದೃಢೀಕರಣ ಪತ್ರ
17. ವ್ಯವಸಾಯಗಾರರ ದೃಢೀಕರಣ ಪತ್ರ
18. ಸಣ್ಣ/ಅತಿ ಸಣ್ಣ ಹಿಡುವಳಿದಾರರ ದೃಢೀಕರಣ ಪತ್ರ
19. ಕೃಷಿ ಕಾರ್ಮಿಕ ದೃಢೀಕರಣ ಪತ್ರ
20. ಮೇಲುಸ್ತರಕ್ಕೆ ಸೇರಿಲ್ಲವೆಂಬ ದೃಢೀಕರಣ ಪತ್ರ
21. ಭೂ ಹಿಡುವಳಿ ಪ್ರಮಾಣ ಪತ್ರ
22. ಬೋನಫೈಡ್ ದೃಢೀಕರಣ ಪತ್ರ
23. ಸಾಲ ತೀರಿಸುವ ಶಕ್ತಿ ದೃಢೀಕರಣ ಪತ್ರ
24. ವಸತಿ ದೃಢೀಕರಣ ಪತ್ರ
25. ಉದ್ಯೋಗದ ಉದ್ದೇಶಕ್ಕೆ ಆದಾಯ ದೃಢೀಕರಣ ಪತ್ರ
26. ಅನುಕಂಪದ ಆಧಾರದದ ನೇಮಕಾತಿಗೆ ಆದಾಯ ದೃಢೀಕರಣ ಪತ್ರ
27. ವಂಶವೃಕ್ಷದ ದೃಢೀಕರಣ ಪತ್ರ
28. ಹೈದ್ರಾಬಾದ್ ಕರ್ನಾಟಕ ಪ್ರದೇಶದ ವಸತಿ & ಅರ್ಹತಾ ದೃಢೀಕರಣ ಪತ್ರ
29. ಬೆಳೆ ದೃಢೀಕರಣ ಪತ್ರ
30. ಅಂಗವಿಕಲರ ವೇತನ
31. ವಿಧವಾ ವೇತನ
32. ಸಂಧ್ಯಾ ಸುರಕ್ಷಾ
33. ರಾಷ್ಟ್ರೀಯ ಸಾಮಾಜಿಕ ಭದ್ರತಾ ಯೋಜನೆ
34. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ
35. ಮೈತ್ರಿ
36. ಮನಸ್ವಿನಿ
37. ಅಂತ್ಯ ಸಂಸ್ಕಾರ ಯೋಜನೆ
38. ಆಸಿಡ್ ದಾಳಿಗೊಳಗಾದವರಿಗೆ ಪಿಂಚಣಿ
39. ರೈತರ ವಿಧವೆಯರ ಪಿಂಚಣಿ
40. ಪಹಣಿ ಪ್ರತಿ

**ಇತರೆ ವಾಣಿಜ್ಯ ಸೇವೆಗಳು**

1. ವಿದ್ಯುತ್ ಬಿಲ್
2. ದೂರವಾಣಿ ಬಿಲ್
3. ಜೀವ ವಿಮೆ
4. ವಾಹನ ವಿಮೆ
5. ಮೊಬೈಲ್ ರೀಚಾರ್ಜ್
6. ಡಿಟಿಎಚ್ ರೀಚಾರ್ಜ್
7. ಡೇಟಾ ಕಾರ್ಡ್ ರೀಚಾರ್ಜ್
8. ಬಸ್ ಟಿಕೆಟ್ ಬುಕಿಂಗ್
9. ರೈಲ್ವೆ ಟಿಕೆಟ್ ಬುಕಿಂಗ್
10. ಏರ್ ಟಿಕೆಟ್ ಬುಕಿಂಗ್
11. ಆಧಾರ್ (ವೀಕ್ಷಣೆ / ಮಾರ್ಪಾಡು)
12. ಮತದಾರರ ಗುರುತಿನ ಚೀಟಿ (ವೀಕ್ಷಣೆ /ಮಾರ್ಪಾಡು)
13. ಪಡಿತರ ಚೀಟಿ (ಅಪ್ಲಿಕೇಶನ್)
14. ಜಾಬ್ ಮಾಹಿತಿ (ಅಪ್ಲಿಕೇಶನ್)
15. ಹಣ ವರ್ಗಾವಣೆ
16. ವಿದ್ಯಾರ್ಥಿವೇತನ
17. ಪರವಾನಗಿಯ ಶುಲ್ಕ

ಸಾಧಕರ ಸಂದರ್ಶನ

# ಗಾಂಧೀಜಿ ಕನಸು ಗ್ರಾಮ ಸ್ವರಾಜ್ ಮತ್ತು ರಡ್ಡೇರ ನಾಗನೂರು



ಡಾ॥ ರೇವಯ್ಯ ಒಡೆಯರ್
(ಸಂದರ್ಶನ ಮತ್ತು ನಿರೂಪಣೆ)

ರಡ್ಡೇರ ನಾಗನೂರು ಗ್ರಾಮ ಪಂಚಾಯಿತಿಯ ಪ್ರಗತಿಯ ಹರಿಕಾರರಾದ ಗ್ರಾ. ಪಂ. ಅಧ್ಯಕ್ಷೆ ಶ್ರೀಮತಿ ಪ್ರೇಮಾ ತಿಮ್ಮನಗೌಡರ್ ರವರೊಂದಿಗೆ ನಡೆಸಿದ ಸಂದರ್ಶನ.



ಶ್ರೀಮತಿ ಪ್ರೇಮಾ ತಿಮ್ಮನಗೌಡರ್
ರಡ್ಡೇರ ನಾಗನೂರು ಗ್ರಾಮ ಪಂಚಾಯತಿ

ಕರ್ನಾಟಕದಲ್ಲಿ ಮಾದರಿ ಪಂಚಾಯಿತಿಗಳನ್ನು ನೋಡಬೇಕಿದ್ದರೆ ಒಂದು ಬೆಳಗಾವಿ ಜಿಲ್ಲೆಯ ಶಿರಗುಪ್ಪಿ ಮತ್ತು ಇನ್ನೊಂದು ಗದಗ ಜಿಲ್ಲೆಯ ಹುಲಕೋಟಿ ಪಂಚಾಯಿತಿಗಳನ್ನು ನೋಡಿ ಬಂದು ನಿಮ್ಮ ಕೆಲಸಗಳನ್ನು ಮಾಡಿ ಎಂದು ನಾನು ಯಾವಾಗಲೂ ಹೇಳುತ್ತೇನೆ. ಏಕೆಂದರೆ ಕಾರ್ಯ ಮತ್ತು ಆಡಳಿತದಲ್ಲಿ ಶಿರಗುಪ್ಪಿ 2013ರಿಂದ ಉತ್ತಮವಾದ ಸಾಧನೆಯನ್ನು ಮಾಡಿದೆ. ಅದೇ ರೀತಿ ಗದಗ ಜಿಲ್ಲೆಯ ಹುಲಕೋಟಿಯ ಗ್ರಾಮ ಪಂಚಾಯಿತಿಯು ಮಾಡಿರುವ ಕುಡಿಯುವ ನೀರಿನ ವ್ಯವಸ್ಥೆ, ಒಕ್ಕಣೆ ಕಣ, ಶೌಚಾಲಯ, ಸ್ಮಶಾನ, ಇಂಗುಗುಂಡಿ ಮತ್ತು ಚುನಾವಣಾ ಆಯ್ಕೆ ಪದ್ಧತಿಗಳು ಇಡೀ ನಾಡಿಗೆ ಆದರ್ಶ.



ಇದೇ ಸಾಲಿಗೆ ಸೇರುವಂತಹದ್ದು ಗದಗ ಜಿಲ್ಲೆಯ ನರಗುಂದ ತಾಲೂಕಿನ ರಡ್ಡೇರ ನಾಗನೂರು ಗ್ರಾಮ ಪಂಚಾಯಿತಿ. ಈ ಸಾಧನೆಯನ್ನು ಮಾಡಿರುವ ಅಲ್ಲಿನ ಗ್ರಾಮ ಪಂಚಾಯಿತಿಯ ಅಧ್ಯಕ್ಷರೊಂದಿಗೆ ನಡೆಸಿದ ಸಂದರ್ಶನವನ್ನಿಲ್ಲಿ ನೀಡುತ್ತಿದ್ದೇನೆ. ಇವರು ನಮ್ಮೆಲ್ಲರಿಗೂ ಆದರ್ಶ. ಇವರ ಹೆಸರು ಶ್ರೀಮತಿ ಪ್ರೇಮಾ ತಿಮ್ಮನಗೌಡರ್. ತವರೂರು ಹುಲಕೋಟಿ. ಗಂಡನ ಮನೆ ನರಗುಂದದ ರಡ್ಡೇರ ನಾಗನೂರು. ವೃತ್ತಿ ಸಮಾಜ ಸೇವೆ. ಪ್ರಸ್ತುತ ಗ್ರಾಮ ಪಂಚಾಯಿತಿಯ ಅಧ್ಯಕ್ಷೆ. ಇವರು ತಮ್ಮ ಪಂಚಾಯಿತಿಯು ಬಯಲು ಬಹಿರ್ದೆಶೆ ಮುಕ್ತ ಗ್ರಾಮ ಪಂಚಾಯಿತಿ ಎಂಬ ಪ್ರಶಸ್ತಿ ಪಡೆದಿದ್ದಾರೆ. ಈ ಸಂದರ್ಭದಲ್ಲಿ ಅವರೊಂದಿಗೆ ಮಾತನಾಡಿದ ಮಾತುಗಳ ಸಂದರ್ಶನದ ರೂಪ.

---

ಸಂಶೋಧನಾ ಮುಖ್ಯಸ್ಥ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ
11ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು -560001

2016ರ ಅಕ್ಟೋಬರ್ 2, ಗಾಂಧಿ ಜಯಂತಿಯಂದು ಕರ್ನಾಟಕ ರಾಜ್ಯದಲ್ಲಿ 5 ಜಿಲ್ಲೆಗಳು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳೆಂದು ಘೋಷಣೆಯಾದವು. ಇನ್ನುಳಿದ ಜಿಲ್ಲೆಗಳಲ್ಲಿನ ಒಟ್ಟು 728 ಗ್ರಾಮ ಪಂಚಾಯಿತಿಗಳು ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳೆಂದು ಘೋಷಣೆಯಾಗಿ ಪ್ರಶಸ್ತಿ ಪತ್ರ ಪಡೆದವು. ಅವುಗಳಲ್ಲಿ ಗದಗ ಜಿಲ್ಲೆಯ ನರಗುಂದ ತಾಲೂಕಿನ ರೆಡ್ಡೇರ ನಾಗನೂರು ಗ್ರಾಮ ಪಂಚಾಯಿತಿಯೂ ಒಂದು. ಈ ಪಂಚಾಯಿತಿಯು ಗಾಂಧಿ ಗ್ರಾಮ ಪುರಸ್ಕಾರವನ್ನೂ ಪಡೆದದ್ದು ಇನ್ನೊಂದು ವಿಶೇಷ. ಈ ಪ್ರಶಸ್ತಿಯನ್ನು ಸ್ವೀಕರಿಸಿದ ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಶ್ರೀಮತಿ ಪ್ರೇಮ ಅವರನ್ನು ಕುತೂಹಲದಿಂದ **ಗದಗ ಜಿಲ್ಲೆಯಲ್ಲಿ ಬೇರೆಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸಾಧ್ಯವಾಗದ**



**'ಬಯಲು ಬಹಿರ್ದೆಶೆ' ನಿಯಂತ್ರಣ ಮತ್ತು ವೈಯಕ್ತಿಕ ಶೌಚಾಲಯ ನಿರ್ಮಾಣ ಕಾರ್ಯ ನಿಮಗೆ ಹೇಗೆ ಸಾಧ್ಯವಾಯಿತು** ಎಂದು ಸರಳ ಪ್ರಶ್ನೆಯ ಮೂಲಕ ಮಾತನಾಡಿಸಿದೆ. ಅವರು "ಸರ್, ಮನಸಿದ್ದರೆ ಮಾರ್ಗ, ನಾವು ನಮ್ಮ ಗ್ರಾಮವನ್ನು ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿ ಮಾಡಿಯೇ ಮಾಡುತ್ತೇವೆ ಎಂದು ಛಲ ತೊಟ್ಟು ಕೆಲಸ ಮಾಡಿದೆವು. ಮೇಲಾಗಿ ನಮ್ಮ ಪಂಚಾಯಿತಿಯ ಎಲ್ಲಾ ಸದಸ್ಯರೂ ಸಹಕರಿಸಿದರು. ಪಿಡಿಓ ಅವರ ಪಾತ್ರ ಬಹಳ ಇದೆ. ಹೀಗಾಗಿ ನಾವು ಈ ಕೆಲಸ ಮಾಡಲಿಕ್ಕೆ ಸಾಧ್ಯ ಆಯಿತು."

**ಸರಿ, ಮೇಡಂ ಬೇರೆಲ್ಲಾ ಪಂಚಾಯಿತಿಯವರು ಈಗಾಗಲೇ ನಿರ್ಮಾಣ ಮಾಡಿದ ಶೌಚಾಲಯಗಳಿಗೇ ಸರ್ಕಾರದಿಂದ ಹಣಕಾಸು ಬಿಡುಗಡೆಯಾಗಿಲ್ಲ, ಹೊಸ ಶೌಚಾಲಯಗಳ ನಿರ್ಮಾಣ ಕಷ್ಟವಾಗಿದೆ. ಪಾವತಿ ಮಾಡಲಾಗುತ್ತಿಲ್ಲ ಎಂದು ಜನರು ದೂರುತ್ತಾರೆ. ನೀವು ಹೇಗೆ ಹಣಕಾಸು ಹೊಂದಿಸಿದಿರಿ?**

ಸರ್, ನಾವು ಈ ಕಾರ್ಯಕ್ಕಾಗಿ ಸ್ವಯಂ ಆರ್ಥಿಕತೆ ಎನ್ನುವ ಒಂದು ಹೊಸ ಯೋಜನೆಯನ್ನು ರೂಪಿಸಿದ್ದೇವೆ. ಅಂದರೆ 'ವಿವೇಚನಾ ನಿಧಿ'ಯೊಂದನ್ನು ಸ್ಥಾಪಿಸಿದೆವು. ಈ ಮೂಲಕ ಸ್ವಂತ ಹಣವನ್ನು ಬಳಸಿ ಸಾಮಗ್ರಿಗಳನ್ನು ತರಿಸಿ ಶೌಚಾಲಯಗಳನ್ನು ನಿರ್ಮಿಸಿ, ತದನಂತರ ಸರ್ಕಾರದಿಂದ ಬಂದ ಹಣವನ್ನು ವಿವೇಚನಾ ನಿಧಿಗೆ ಭರ್ತಿ ಮಾಡುವ ಕ್ರಮ ವಹಿಸಲಾಯಿತು. ಖಾನಾಪುರ ಗ್ರಾಮದಲ್ಲಿ ಕೇವಲ 45 ದಿನಗಳಲ್ಲಿ 202 ಶೌಚಾಲಯಗಳನ್ನು ನಿರ್ಮಿಸಿ ಬಳಕೆಗೆ ಅನುವು ಮಾಡಿಕೊಟ್ಟಿದ್ದೇವೆ. ಇದಕ್ಕೆ ಗ್ರಾಮದ ಹಿರಿಯರ ಸಹಕಾರ, ಯುವ ಸಮೂಹದ ಉತ್ಸಾಹ ಮತ್ತು ಸಿಬ್ಬಂದಿಯವರ ಪ್ರೋತ್ಸಾಹ ಸಂಪೂರ್ಣ ಇತ್ತು. ಈ ರೀತಿ ಮಾಡಿದ್ದರಿಂದ ಖಾನಾಪುರ ಗ್ರಾಮವನ್ನು 2015ರ ಆಗಸ್ಟ್ 15ರಂದು ಬಯಲು ಬಹಿರ್ದೆಸೆ ಗ್ರಾಮ ಎಂದು ಘೋಷಣೆ ಮಾಡಲು ಸಾಧ್ಯವಾಯಿತು. ಈ ಕಾರ್ಯಕ್ಕೆ ಸನ್ಮಾನ್ಯ ಸಚಿವರಾದ ಎಚ್. ಕೆ. ಪಾಟೀಲ್ ಮತ್ತು ಶಾಸಕರಾದ ಶ್ರೀ ಬಿ.ಆರ್ ಯಾವಗಲ್ ಅವರು ಮುತುವರ್ಜಿ ವಹಿಸಿ ವಿಶೇಷ ಅನುದಾನ ನೀಡಿದ್ದೂ ನಮಗೆ ಸಹಕಾರಿಯಾಯಿತು. ಇದೇ ಮಾದರಿಯಲ್ಲಿ 2016ರ ಜೂನ್ ತಿಂಗಳಲ್ಲಿಯೇ ರೆಡ್ಡೇರ ನಾಗನೂರು ಮತ್ತು ಗಂಗಾಪುರ ಗ್ರಾಮಗಳನ್ನು ಬಯಲು ಬಹಿರ್ದೆಶೆ ಮುಕ್ತ ಗ್ರಾಮಗಳನ್ನಾಗಿ ಮಾಡಲು ಸಾಧ್ಯವಾಗಿದೆ. ದಿನದ 24 ಗಂಟೆಯೂ ನಾವು, ನಮ್ಮ ಪಂಚಾಯಿತಿಯ ಸದಸ್ಯರು ಮತ್ತು ನೌಕರರೆಲ್ಲ ಶ್ರಮ ವಹಿಸಿ ಕೆಲಸ ಮಾಡಿದ್ದರಿಂದ ಈ ದಿನ ಈ ಪ್ರಶಸ್ತಿ ಪಡೆದಿದ್ದೇವೆ. ಈ ಪ್ರಶಸ್ತಿ ನನೊಬ್ಬಳದಲ್ಲ ನಮ್ಮ ಎಲ್ಲಾ ಪಂಚಾಯಿತಿಯದು.

**ತಮ್ಮ ಈ ಕಾರ್ಯಕ್ಕೆ ಪ್ರೇರಣೆ ಬಗ್ಗೆ ನಾವು ತಿಳಿಯಬಹುದಾ?**

ಖಂಡಿತ. ನಾನು ಬಲವಾಗಿ ನಂಬಿರುವ ಒಂದು ಮಾತಿದೆ. ಅದೆಂದರೆ "Spirituality begins where religion ends". 1999ರ ಜನವರಿ 27ರಂದು ನಮ್ಮ ಮನೆಯ ಗೃಹ ಪ್ರವೇಶದ ಸಂದರ್ಭದಲ್ಲಿ 8 ಜೋಡಿಗಳ ಸಾಮೂಹಿಕ ಮದುವೆ ಮಾಡಲಾಯಿತು. ಆ ಸಂದರ್ಭದಲ್ಲಿ ಈಗಿನ ಸಚಿವರಾದ ಎಚ್. ಕೆ. ಪಾಟೀಲ್, ಮಾಜಿ ಸಚಿವಾದ ಎಸ್. ಆರ್. ಪಾಟೀಲ್, ಮಾಜಿ ಶಾಸಕರಾದ ಡಿ. ಆರ್. ಪಾಟೀಲ್ ನಮ್ಮ ಕ್ಷೇತ್ರದ ಶಾಸಕರಾದ ಬಿ. ಆರ್. ಯಾವಗಲ್ ಮತ್ತು ನ್ಯಾಯಮೂರ್ತಿ ಬಿ.ಕೆ.ಸಂಗಲಾದ್ ಅವರುಗಳೆಲ್ಲ

ಭಾಗವಹಿಸಿದ್ದರು. ಅದಕ್ಕೂ ಮಿಗಿಲಾಗಿ ಅವರಾದಿ ಸ್ವಾಮೀಜಿ, ತೋಂಟದಾರ್ಯ ಸ್ವಾಮೀಜಿ, ಚಿದಾನಂದ ಸ್ವಾಮೀಜಿ ಮತ್ತು ಶಿವಾನಂದ ಸ್ವಾಮೀಜಿ ಮೊದಲಾದವರೆಲ್ಲಾ ಭಾಗವಹಿಸಿ ನವದಂಪತಿಗಳಿಗೆ ಆಶೀರ್ವದಿಸಿದ್ದರು. ಆ ಸಂದರ್ಭದಲ್ಲಿ ನಾನು ಮಾಡಿದ ಸಾಮೂಹಿಕ ವಿವಾಹದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಸಾಮಾಜಿಕ ಕಾರ್ಯದಲ್ಲಿ ತೊಡಗಿಕೊಂಡು ಇನ್ನೂ ಹೆಚ್ಚಿನ ಕೆಲಸ ಮಾಡಲು ಆಶೀರ್ವದಿಸಿದರು. ಆ ಆಶೀರ್ವಾದದ ಫಲವೇ ಇದಾಗಿದೆ.

**ಈ ರೀತಿ ಸಮಾಜ ಸೇವೆಯ ಮಾತುಗಳನ್ನು ಕೇಳಿದಾಗ ನಿಮ್ಮ ಪರಿಚಯ ಸ್ವಲ್ಪ ತಿಳಿದುಕೊಳ್ಳಬೇಕೆನಿಸುತ್ತದೆ. ಅಂದರೆ ನಿಮ್ಮ ಕುಟುಂಬದಲ್ಲಿ ಅಥವಾ ನಿಮ್ಮ ಯಜಮಾನರ ಕುಟುಂಬದಲ್ಲಿ ಯಾರಾದರೂ ರಾಜಕಾರಣಿ ಅಥವಾ ಸಮಾಜ ಸೇವೆ ಮಾಡಿದವರು ಇದ್ದರೇ?**

ನನಗೆ, ನಿಮ್ಮ ಮಾತಿನ ಅರ್ಥವಾಯಿತು. ನಾನು ಮೂಲತಃ ಹುಲಕೋಟಿಯವಳು. ಕೃಷಿ ಕುಟುಂಬದಿಂದ ಬಂದವಳು. 30 ವರ್ಷಗಳಿಂದ ಕೃಷಿ ಕೆಲಸ ಮತ್ತು ಓದು ನನ್ನ ಹವ್ಯಾಸ. ಖಾನಾಪುರದ ಮಲ್ಲನಗೌಡ ತಿಮ್ಮನಗೌಡರ್ ನನ್ನ ಮನೆಯವರು. ನನ್ನ ವಿದ್ಯಾಭ್ಯಾಸ ಬಿ.ಎಎಸ್‌ಸಿ., ಮಲ್ಲನಗೌಡರ್ ಕುಟುಂಬದ ಮೂರು ತಲೆಮಾರುಗಳು ಸಮಾಜ ಸೇವೆಯಲ್ಲಿ ತೊಡಗಿಕೊಂಡಿತ್ತು. ನಾನು ಈ ಕೆಲಸದಲ್ಲಿ ತೊಡಗಿಕೊಳ್ಳಲು ಸಹಾಯವಾಯಿತು. ನನಗೆ ಬಹುಮುಖ್ಯವಾಗಿ ನನ್ನಜ್ಜ ದಿ.ರಾಮನಗೌಡ ಓದುಗೌಡರ್ ಹಾಗೂ ಮಾಜಿ ಪ್ರಧಾನ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರೀ ಅವರುಗಳ ಸಮಾಜ ಸೇವೆಯ ಕಾರ್ಯಗಳೇ ಸ್ಫೂರ್ತಿ. ನನ್ನಜ್ಜ ರಾಮನಗೌಡರು ಹೊಂದಿದ್ದ ಸಾಮಾಜಿಕ ಮೌಲ್ಯ ಮತ್ತು ನೈತಿಕ ಕಾರ್ಯಗಳು ಬಾಲ್ಯದಿಂದಲೇ ನನಗೆ ಗೊತ್ತಿಲ್ಲದಂತೆ ಪ್ರೇರಣೆ ನೀಡಿವೆ. ರಾಜಕೀಯ ಪ್ರವೇಶಿಸುವುದಕ್ಕಿಂತಲೂ ಮೊದಲೇ ನಾನು ಪ್ರಗತಿಪರ ಚಟುವಟಿಕೆಗಳಲ್ಲಿ, ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದೆ.

ಸಹಕಾರಿ ರಂಗದ ಭೀಷ್ಮರೆಂದು ಖ್ಯಾತಿವೆತ್ತ ದಿ: ಶ್ರೀ॥ ಕೆ.ಎಚ್ ಪಾಟೀಲರು ನನ್ನ ತಂದೆಯವರ (B Y Odugoudar) ಕಿರಿಯ ತಮ್ಮನಂತಿದ್ದರು. ಸಹಕಾರ ರಂಗದ, ಸಮಾಜ ಸುಧಾರಣೆಯ ಹಾಗೂ ಅನೇಕ ವಿಷಯಗಳನ್ನು ಅವರಿಬ್ಬರೂ ಚರ್ಚಿಸುವಾಗ ಚಿಕ್ಕ ಹುಡುಗಿಯಾದ ನಾನು ಯಾವಾಗಲೂ ಅವರ ಪಕ್ಕದಲ್ಲಿರುವದು ನನಗೆ ರೂಢಿಯಾಗಿತ್ತು. ಹೀಗಾಗಿ ಬಾಲ್ಯದಿಂದ ನನ್ನದೊಂದು ಧೈರ್ಯಶಾಲಿ ವ್ಯಕ್ತಿತ್ವವಾಗಿ ಬೆಳೆಯಿತು. ಲಾಲ್ ಬಹದ್ದೂರ ಶಾಸ್ತ್ರೀಯವರ ತೀರಾ ಸರಳವಾದ ಜೀವನ ಪದ್ಧತಿ ನನಗೆ ಅನುಕರಣೀಯವಾಗಿದೆ. ತಾರತಮ್ಯ (Discrimination) ನಾನು ಅತ್ಯಂತ ವಿರೋಧಿಸುವ ಸಂಗತಿ.

ಈ ಗ್ರಾಮಪಂಚಾಯಿತಿ ಅಧ್ಯಕ್ಷರಾದ ಮೇಲೆ ನನಗೆ ಮಹಿಳಾ ಸಬಲೀಕರಣ, ಮಕ್ಕಳ ಕಲ್ಯಾಣ, ಸಮಾಜ ಸೇವೆ ಮತ್ತು ಶೌಚಾಲಯ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಳ್ಳಲು ಹೆಚ್ಚಿನ ಬಲ ಬಂದಿತು.



ಇದಲ್ಲಕ್ಕಿಂತಲೂ ಮಿಗಿಲಾಗಿ ನನಗೆ ಶಕ್ತಿ ನೀಡಿದ್ದೇನೆಂದರೆ ನನ್ನನ್ನು ಅವಿರೋಧವಾಗಿ ಗ್ರಾಮ ಪಂಚಾಯಿತಿಯ ಸದಸ್ಯಳನ್ನಾಗಿ ಆಯ್ಕೆ ಮಾಡಿದ್ದಲ್ಲದೆ ಅಧ್ಯಕ್ಷರನ್ನಾಗಿ ಮಾಡಿದ್ದು. ಇದು ನನಗೆ ಎಲ್ಲಿಲ್ಲದ ಶಕ್ತಿಯನ್ನು ತಂದುಕೊಟ್ಟಿತು. ಈ ಶಕ್ತಿಯೇ ನನ್ನನ್ನು ಯಾವುದೇ ಜಾತಿ ಮತ್ತು ವರ್ಣಾತೀತವಾಗಿ ಸಮಾಜ ಸೇವೆಗೆ ತೊಡಗಿಸಿದೆ. ಶೋಷಿತ ಸಮುದಾಯದ ಹಾಗೂ ಮಹಿಳೆಯರ ಪರವಾಗಿ ದಿನದ 24 ಗಂಟೆಯೂ ನಾನು ಸೇವೆ ಮಾಡಲು ಸಿದ್ಧಳಿದ್ದೇನೆ. ಇದುವೇ ನಾನು ದೇಶಕ್ಕೆ ಸಮಾಜಕ್ಕೆ ಸಲ್ಲಿಸುವ ಗೌರವ ಮತ್ತು ದೇಶ ಸೇವೆ. ಇಲ್ಲಿ ಒಂದು ಮಾತು ನೆನಪಾಗುತ್ತಿದೆ. "ಸಮಾಜ ನಿನಗೆ ಎಲ್ಲಾ ಕೊಟ್ಟಿದೆ, ಸಮಾಜಕ್ಕೆ ನೀನು ಏನು ಕೊಟ್ಟಿರುವೆ? ಕೊಡಬೇಕಾದದ್ದು ಇನ್ನೂ ಬಹಳ ಇದೆ" ಎನ್ನುವ ಮಾತಿನಂತೆ ನಾನು ಸಮಾಜದ ಸೇವೆ ಮಾಡುವುದು ಬಹಳ ಇದೆ ಎಂದು ಕೆಲಸದಲ್ಲಿ ತೊಡಗಿದ್ದೇನೆ.



**ಸದ್ಯದ ಮಟ್ಟಿಗೆ ನಿಮ್ಮ ಮುಂದಿನ ಗುರಿ ಏನು? ಶೌಚಾಲಯ ನಿರ್ಮಾಣ ಆಯಿತು ತದನಂತರ ಯಾವ ಕಾರ್ಯ ಹಾಕಿಕೊಂಡಿದ್ದೀರಿ?**

ಮೊದಲು ಟ್ಯಾಕ್ಸ್ ಕಲೆಕ್ಷನ್ ಆಗಬೇಕಾಗಿದೆ. ನಮ್ಮ ಗ್ರಾಮ ಪಂಚಾಯಿತಿಯು ಶೇ.100ರಷ್ಟು ತೆರಿಗೆ ಸಂಗ್ರಹ ಮಾಡಬೇಕು ಎಂದು ಗುರಿ ಹೊಂದಿದ್ದೇವೆ. ಈ ನಿಟ್ಟಿನಲ್ಲಿ ನಾವು ಮನೆ ಮನೆಗೆ ಹೋಗಿ ಸಂಗ್ರಹಿಸುತ್ತೇವೆ. ತೆರಿಗೆ ಹಣವನ್ನು ಅಭಿವೃದ್ಧಿ ಕಾರ್ಯಕ್ಕೆ ಬಳಸುತ್ತೇವೆ. ನಮ್ಮಲ್ಲಿ ಶ್ರಮಾದಾನ ಸಂಘ ಎನ್ನುವ ಸ್ವಯಂ ಸೇವಕರ ತಂಡವಿದೆ. ಈ ಸಂಘದವರು ವಾರದಲ್ಲಿ ಎರಡು ಸಲ ಸಭೆ ಸೇರಿ ತೆರಿಗೆ ಬಗ್ಗೆ ಜನರಿಗೆ ತಿಳಿಸಿ, ಮನವರಿಕೆ ಮಾಡಿಕೊಟ್ಟು ಹಣ ಪಡೆದು ರಶೀದಿ ನೀಡುವಂತಹ ವ್ಯವಸ್ಥೆ ಮಾಡಿದ್ದೇವೆ. ಇದು ನೂರಕ್ಕೆ ನೂರು ಆಗಬೇಕೆಂಬುದು ನಮ್ಮ ಸಧ್ಯದ ಗುರಿ.

**ನೀವು ಗ್ರಾಮ ಸಭೆಯನ್ನು ಎಷ್ಟು ಬಾರಿ ಮಾಡಿದ್ದೀರಿ. ಈ ಸಭೆಗಳಲ್ಲಿ ಏನಾದರೂ ಹೊಸತನ ಕಂಡು ಕೊಂಡಿದ್ದೀರಾ?**

ವರ್ಷದಲ್ಲಿ 3 ಬಾರಿ ಮಾಡಿದ್ದೇವೆ. ಅಗತ್ಯ ಬಿದ್ದರೆ ಹೆಚ್ಚಿನ ಗ್ರಾಮ ಸಭೆ ಮಾಡುತ್ತೇವೆ. ಅದಕ್ಕಿಂತಲೂ ಮುಖ್ಯವಾಗಿ ನಾವು ವಿಶೇಷ ಮಹಿಳಾ ಗ್ರಾಮ ಸಭೆ ಮಾಡಿದ್ದೇವೆ. ಇದರಲ್ಲಿ ಮಹತ್ವದ ವಿಚಾರಗಳನ್ನು ಚರ್ಚಿಸಿ ಕ್ರಮ ಕೈಗೊಂಡಿದ್ದೇವೆ. ಇದರ ಫಲವೇ ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯಿತಿ. ಮಹಿಳೆಯರ ವ್ಯಕ್ತಿತ್ವ ವಿಕಸನದ ಬಗ್ಗೆಯೂ ಈ ಮಹಿಳಾ ಗ್ರಾಮ ಸಭೆಯಲ್ಲಿ ಚರ್ಚಿಸಿದ್ದೇವೆ. ಧಾರ್ಮಿಕ ಹಬ್ಬಗಳ ಸಂದರ್ಭದಲ್ಲಿ ದೇವಸ್ಥಾನದ ಬಳಿ ಎಲ್ಲರೂ ಸೇರಿ ಮಾತನಾಡುತ್ತೇವೆ.

ಪರಿಸರ ಸ್ನೇಹಿಯಾಗಿ ಮಾಡಬೇಕಾದ ಕೆಲಸ ಕಾರ್ಯಗಳ ಬಗ್ಗೆ ಮಾತನಾಡಿ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತೇವೆ. ಈ ಬಾರಿ ಗಣೇಶ ಹಬ್ಬದ ಸಂದರ್ಭದಲ್ಲಿ ನಾವುಗಳೆಲ್ಲಾ ಮಣ್ಣಿನ ಗಣಪತಿಯನ್ನು ಕೂಡಿಸಿದ್ದೆವು. ಗದಗ ಜಿಲ್ಲೆಯಲ್ಲಿ ಇದೊಂದು ವಿಶೇಷ ಆಕರ್ಷಣೆಯಾಗಿತ್ತು. ರೈತರೆಲ್ಲರೂ ಕಾಂಪೋಸ್ಟ್ ಗುಂಡಿಗಳನ್ನು ನಿರ್ಮಿಸಿಕೊಂಡು ಬಳಸುವಲ್ಲಿ ಯಶಸ್ವಿಯಾಗುವಂತೆ ತಿಳುವಳಿಕೆ ನೀಡಿದ್ದೇನೆ. ಎಲ್ಲರೂ ಈ ಕಾಂಪೋಸ್ಟ್ ಗುಂಡಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಸ್ವಚ್ಛ ಭಾರತ್ ಪರಿಣಾಮವಾಗಿ ನಾವು ಪ್ರತಿದಿನ ಗ್ರಾಮದ ಬೇರೆ ಬೇರೆ ಸ್ಥಳಗಳಲ್ಲಿ ಶ್ರಮದಾನ ಕಾರ್ಯವನ್ನು ಮಾಡಿ ತಿಳುವಳಿಕೆ ನೀಡುತ್ತಿದ್ದೇವೆ ಮತ್ತು ಅದರಲ್ಲಿ ಪುರುಷ, ಮಹಿಳೆ ಮತ್ತು ಮಕ್ಕಳಾದಿಯಾಗಿ ಎಲ್ಲರನ್ನು ತೊಡಗಿಸಿಕೊಂಡಿದ್ದೇವೆ. ನಾವೆಲ್ಲಾ ಒಂದು ತಂಡವಾಗಿ, ಒಂದು ಕುಟುಂಬದವರಾಗಿ, ಭಾವೈಕ್ಯದಿಂದ ಕೆಲಸ ಮಾಡುತ್ತಿದ್ದೇವೆ. ಎಲ್ಲಾ ಕೆಲಸವನ್ನು ಉತ್ತಮವಾಗಿ ಮತ್ತು ಎಚ್ಚರಿಕೆಯಿಂದ ಮಾಡುತ್ತಿದ್ದೇವೆ. ಹೀಗಾಗಿ ನಮಗೆ 2016ರ ಈ ಗಾಂಧಿ ಜಯಂತಿಯಂದು 'ಗಾಂಧಿ ಗ್ರಾಮ ಪುರಸ್ಕಾರ' ಲಭಿಸಿದೆ. ಈ ಪುರಸ್ಕಾರವನ್ನು ನನ್ನ ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರಿಗೆ, ಸಿಬ್ಬಂದಿಯವರಿಗೆ ಮತ್ತು ಗ್ರಾಮದ ಜನತೆಗೆ ಅರ್ಪಿಸುತ್ತೇನೆ. ಈ ಸಂದರ್ಭದಲ್ಲಿ ತಾಲೂಕು ಮತ್ತು ಜಿಲ್ಲೆಯ ಆಡಳಿತವು ನೀಡಿದ ಸಹಕಾರಕ್ಕೆ ಧನ್ಯವಾದಗಳನ್ನು ಹೇಳಬಯಸುತ್ತೇನೆ.

**ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ನಿಮ್ಮ ಗ್ರಾಮ ಪಂಚಾಯಿತಿಗೆ ಇನ್ನೂ ಏನೇನು ಮಾಡಬೇಕೆಂದು ಕೊಂಡಿದ್ದೀರಿ?**

ನಮ್ಮ ಗ್ರಾಮ ಪಂಚಾಯಿತಗೆ ಸೋಲಾರ್ ಬೀದಿ ದೀಪಗಳನ್ನು ಮತ್ತು ನೀರೆತ್ತುವುದಕ್ಕೆ ಸೋಲಾರ್ ವಿದ್ಯುತ್ ಶಕ್ತಿಯನ್ನು ಬಳಸಲು ವ್ಯವಸ್ಥೆ ಮಾಡುವ ಗುರಿ ಇದೆ. ನಮ್ಮ ಪಂಚಾಯಿತಿಯಲ್ಲಿ ಮೂರು ಗ್ರಾಮಗಳಿವೆ. ಈ ಗ್ರಾಮಗಳಿಗೆ ಸಿ.ಸಿ. ರಸ್ತೆ, ಚರಂಡಿ, ಮಕ್ಕಳಿಗೆ ಆಟದ ಮೈದಾನ ಮತ್ತು ಆಧುನಿಕ ಸಮುದಾಯ ಕೇಂದ್ರಗಳನ್ನು ಯುವಕರಿಗೆ ರೂಪಿಸುವ ಯೋಜನೆ ಇದೆ. 5 ವರ್ಷಗಳ ಅವಧಿಯಲ್ಲಿ ಗ್ರಾಮ ಪಂಚಾಯಿತಿಯನ್ನು ಆಧುನಿಕಗೊಳಿಸಿ ಅಲ್ಲಿ ಸರ್ಕಾರದ ಎಲ್ಲಾ ಕಛೇರಿಗಳ ಮಾಹಿತಿ ದೊರೆಯುವಂತೆ ಮಾಡುವ ಆಸಕ್ತಿ ಇದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯ. ಸರಕಾರದ ಯೋಜನೆಗಳ ಬಗ್ಗೆ ಧನ್ಯತಾ ಭಾವವನ್ನು ಹೊಂದುವಂತೆ ಜನಸಾಮಾನ್ಯರ ಮಾನಸಿಕ ಪರಿವರ್ತನೆ ಆದಾಗ

ಮಾತ್ರ ಯೋಜನೆಗಳು ಸಫಲವಾಗಲು ಸಾಧ್ಯ. ಸರಕಾರ ನಮಗೆ ಇಷ್ಟೆಲ್ಲ ಮಾಡಿದಾಗ ನಾವು ಸರಕಾರಕ್ಕೆ ಋಣ ಸಂದಾಯ ಮಾಡಲೇಬೇಕು ಎನ್ನುವ ಭಾವನೆ ಬರಬೇಕು. **ನಮ್ಮ ಮನೆದೇವರನ್ನು ಪೂಜಿಸುವಂತೆ ನಮ್ಮ ಗ್ರಾಮಗಳ ಮೇಲೂ ನಮಗೆ ಪೂಜ್ಯ ಭಾವನೆ ಬರಬೇಕು**. ಇದರ ಒಂದು ಭಾಗವಾಗಿ ನಾವು 100 ಕ್ಕೆ ನೂರು ಕರ ವಸೂಲಾತಿ, ಸ್ವಯಂ ಪ್ರೇರಿತ ಶ್ರಮದಾನ, ಸ್ವಯಂ ಪ್ರೇರಿತ ವಿವೇಚನಾ ನಿಧಿ ಇಂತಹ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ನೂರಾರು ಹಳ್ಳಿಗಳ ಬಗ್ಗೆ ನಾನು ಓದಿದ್ದೇನೆ, ಕೇಳಿದ್ದೇನೆ, ಕಣ್ಣಾರೆ ಕಂಡಿದ್ದೇನೆ, ಬೇರೆಲ್ಲಾ ಹಳ್ಳಿಗಳ ಬಗ್ಗೆ ಹೋಲಿಸಿದಾಗ ನಮ್ಮ ಹಳ್ಳಿಗಳ ಜನ ಅತ್ಯಂತ ಸಭ್ಯ ನಡವಳಿಕೆಯುಳ್ಳವರು, ವಿಚಾರವಂತರು ಅವರು ತಮ್ಮ ಗ್ರಾಮಗಳ ಮೇಲೆ ಪಕ್ಷಾತೀತ, ಜಾತ್ಯಾತೀತ, ಲಿಂಗಾತೀತ, ವರ್ಗಾತೀತ ಭಾವನೆಗಳನ್ನು ಹೊಂದುವಲ್ಲಿ ಸಮರ್ಥರಾದಾಗ ಎಲ್ಲ ಯೋಜನೆಗಳೂ 100ಕ್ಕೆ ನೂರು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

**ಶೌಚಾಲಯ ನಿರ್ಮಿಸಿಕೊಳ್ಳಬೇಕಾದ ಜನರಿಗೆ ನಿಮ್ಮ ಕಿವಿಮಾತು ಏನು?**

ಬಂಧುಗಳೇ, ಅದರಲ್ಲೂ ಸಹೋದರಿಯರೇ, ನಾವು ಅಡುಗೆ ಕೋಣೆಗೆ ಕೊಟ್ಟಷ್ಟೇ ಮಹತ್ವವನ್ನು ಶೌಚಾಲಯ ಕೋಣೆಗೂ ಕೊಡಬೇಕು. ನಮ್ಮ ಶೌಚಾಲಯ ನಮ್ಮ ಘನತೆಯನ್ನು ಸಾರುತ್ತದೆ. ಬಯಲು ಬಹಿರ್ದೆಶೆಯು ನಮ್ಮ ನಾರಿಯರ ಘನತೆಯನ್ನು ಕಡಿಮೆ ಮಾಡುತ್ತದೆ. ಅಲ್ಲದೆ ಅನೇಕ ರೋಗ ರುಜಿನಗಳಿಗೆ ಕಾರಣವಾಗುತ್ತದೆ. ಮೇಲಾಗಿ ಎಷ್ಟೋ ಗ್ರಾಮೀಣ ಮಹಿಳೆಯರು ಶೌಚ ಕ್ರಿಯೆಗಾಗಿ ರಾತ್ರಿಯನ್ನ ಅವಲಂಬಿಸಿದ್ದಾರೆ. ಇದು ದೈಹಿಕ ಸ್ವಾಸ್ಥ್ಯವನ್ನು ಹಾಳು ಮಾಡುತ್ತದೆ. ನಮ್ಮ ದೇಶದಲ್ಲಿ 100ಕ್ಕೆ 30ರಷ್ಟು ಮಹಿಳೆಯರು ಶೌಚ ಸಂಬಂಧೀ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ನಮ್ಮ ನಾಡಿನ ಮಹಿಳೆಯರು ಈ ಕಾಯಿಲೆಗಳಿಗೆ ತುತ್ತಾಗಬಾರದೆಂದರೆ ಎಲ್ಲರೂ ಶೌಚಾಲಯಗಳನ್ನು ನಿರ್ಮಿಸಿಕೊಂಡು, ಅವುಗಳನ್ನು ಬಳಸುವುದು ಮತ್ತು ಸ್ವಚ್ಛವಾಗಿಟ್ಟುಕೊಳ್ಳುವುದರತ್ತ ಗಮನಹರಿಸಿ ಬಯಲು ಬಹಿರ್ದೆಸೆಯನ್ನು ತ್ಯಜಿಸಬೇಕೆಂಬುದು ನನ್ನ ಒತ್ತಾಯದ ಕಿವಿಮಾತು.

ಇಷ್ಟು ಮಾತುಗಳನ್ನಾಡಿ ತಮ್ಮ ಸಾಧನೆಯ ಬಗ್ಗೆ ಮಾಹಿತಿ ನೀಡಿದ ಗದಗ ಜಿಲ್ಲೆಯ ನರಗುಂದ ತಾಲೂಕಿನ ರೆಡ್ಡೇರ ನಾಗನೂರ ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಶ್ರೀಮತಿ ಪ್ರೇಮ ತಿಮ್ಮನಗೌಡರ್ ಅವರು ಗ್ರಾಮ ಪಂಚಾಯಿತಿಯ ಸದಸ್ಯರಿಗೆ ಮತ್ತು ಅಧ್ಯಕ್ಷರ ಕರ್ತವ್ಯಕ್ಕೆ ಕೀರ್ತಿ ತರುವಂತಹ ಕೆಲಸ ಮಾಡಿ ತೋರಿಸಿದ್ದಾರೆ. ಕೇವಲ 45 ದಿನಗಳಲ್ಲಿ 202 ಶೌಚಾಲಯಗಳನ್ನು, ಒಂದೇ ದಿನದಲ್ಲಿ 50 ಶೌಚಾಲಯಗಳನ್ನು ನಿರ್ಮಿಸಿ ಬಳಕೆಗೆ ಒದಗಿಸುವಂತಹ ಕೆಲಸವನ್ನು ಮಾಡಿದ್ದಾರೆ. ಒಬ್ಬ ಹೆಣ್ಣು ಮಗಳು ಮಾತ್ರ ಹೆಣ್ಣು ಮಕ್ಕಳ ಸಮಸ್ಯೆಯನ್ನು ಅರ್ಥಮಾಡಿಕೊಂಡು ಅವರ ಕಷ್ಟವನ್ನು ತಪ್ಪಿಸಿದಂತಹ ಉತ್ತಮ ಉದಾಹರಣೆ ಇವರಿಗಿಂತಲೂ ಬೇರೆ ಯಾರೂ ಇರಲಿಕ್ಕಿಲ್ಲ. ಇವರ ಕಾರ್ಯ ಸ್ತುತ್ಯಾರ್ಹ. ಪುರಂದರ ದಾಸರು ಅಂದು "ಹೆಂಡತಿ ಸಂತತಿ ಸಾಸಿರವಾಗಲಿ" ಎಂದು ಹೇಳಿದ್ದರು. ಇದನ್ನೇ ಪ್ರೇಮ ಅವರನ್ನು ನೋಡಿ "ಇಂತಹ ಅಧ್ಯಕ್ಷರ ಸಂತತಿ ಸಾಸಿರವಾಗಲಿ" ಎಂದು ಹಾರೈಸಿದರೆ ಕರ್ನಾಟಕ ಒಂದೇ ವರ್ಷದಲ್ಲಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯವಾಗುವುದರಲ್ಲಿ ಅನುಮಾನವೇ ಇಲ್ಲ. "ಯಾವುದೇ ಕೆಲಸವನ್ನು ಮಾಡಲು ಕೊಟ್ಟರೆ, ಸಾಮಾನ್ಯ ವ್ಯಕ್ತಿ ಆ ಕೆಲಸ ಮಾಡದಿದ್ದುದಕ್ಕೆ ನೆಪ ಹುಡುಕುತ್ತಾನೆ. ಆದರೆ ಅಸಾಮಾನ್ಯನು ಆ ಕೆಲಸ ಮಾಡುವುದಕ್ಕೆ ಸಾಧ್ಯತೆ ಹುಡುಕಿ ಮಾಡಿ ತೋರಿಸುತ್ತಾನೆ". ಗ್ರಾಮ ಪಂಚಾಯಿತಿಗಳ ಸದಸ್ಯರು ಅಧ್ಯಕ್ಷರನ್ನು ನಿಮ್ಮ ಪಂಚಾಯಿತಿಯು ಇನ್ನೂ ಬಯಲು ಬಹಿರ್ದೆಸೆ ಮುಕ್ತ ಆಗಿಲ್ಲವಲ್ಲ ಎಂದು ಕೇಳಿದರೆ, ಅದಕ್ಕೆ ಏನಾದರೂ ಕಾರಣ ಹುಡುಕಿ ಮಾಡಲಾಗಿಲ್ಲ ಎನ್ನುತ್ತಾರೆ. ಅದೇ ಕಾರಣಗಳಿಗೆ ಶ್ರೀಮತಿ ಪ್ರೇಮಾ ಅವರು ಸಾಧ್ಯತೆ ಹುಡುಕಿ ಮಾಡಿತೋರಿಸಿದ್ದಾರೆ. ಇದಕ್ಕಾಗಿಯೇ ಅವರೊಬ್ಬ ಅಸಾಮಾನ್ಯರು. ಅವರಿಗೆ ಈ ಮೂಲಕ ಅಭಿನಂದನೆಗಳು. ಅವರು ಮಾಡುವ ಸಾಧನೆಯಿಂದ ಗಾಂಧೀಜಿ ಕಂಡ ಕನಸು ನನಸಾಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಗಾಂಧೀಜಿ ಕನಸು ಕರ್ನಾಟಕದಲ್ಲಿ ನನಸು ಮಾಡುವ ಮತ್ತು ಚೆಲುವ ಕನ್ನಡ ನಾಡು ನಿರ್ಮಿಸುವ ಕನಸು ಹೊತ್ತ ಎಚ್.ಕೆ.ಪಾಟೀಲ ಅವರಿಗೆ ಈ ಕಾರ್ಯ ಹೆಮ್ಮೆ ತಂದಿದೆ. ಒಬ್ಬ ಮಹಿಳೆ ಮಾಡಿರುವ ಸಾಧನೆಯನ್ನು ನಮ್ಮ ಎಲ್ಲಾ ಅಧ್ಯಕ್ಷರು ಮಾಡಲಿ, ಅವರ ಕೆಲಸ ಕಾರ್ಯಗಳು ಇತರಿಗೆ ಪ್ರೇರಣೆ ನೀಡಲಿ ಎನ್ನುವ ಉದ್ದೇಶದಿಂದ ಅವರ ಸಂದರ್ಶನವನ್ನು ಮಾಡಲಾಗಿದೆ.

ಯಶೋಗಾಥೆ

# ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಒಗ್ಗೂಡಿಸುವಿಕೆ ಅನುಷ್ಠಾನ

– ಚನ್ನವೀರಸ್ವಾಮಿ ಎಸ್ ಹಿರೇಮಠ

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಮುಖ್ಯ ಉದ್ದೇಶ ಕೂಲಿಕಾರರಿಗೆ ಕೂಲಿ ಒದಗಿಸುವುದು ಮತ್ತು ಬಡತನವನ್ನು ನಿರ್ಮೂಲನೆ ಮಾಡುವುದು. ಕೂಲಿ ಬಯಸುವ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬಗಳಿಗೆ ಒಂದು ಆರ್ಥಿಕ ವರ್ಷದಲ್ಲಿ 100 ಮಾನವ ದಿನಗಳ ಕೂಲಿಯನ್ನು ಒದಗಿಸುವ ಮೂಲಕ ದುರ್ಬಲ ವರ್ಗದ ಕುಟುಂಬಗಳ ಜೀವನಾಧಾರವನ್ನು ಸುಧಾರಿಸುವುದಾಗಿರುತ್ತದೆ.



ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನಯಡಿ ಒಗ್ಗೂಡಿಸುವಿಕೆಯಡಿ ಕಾಮಗಾರಿಗಳ ಅನುಷ್ಠಾನದ ಬಗ್ಗೆ ಮಾಹಿತಿ.

## ಯೋಜನೆಯ ಮುಖ್ಯ ಉದ್ದೇಶಗಳು :

i) ಗ್ರಾಮೀಣ ಪ್ರದೇಶದಲ್ಲಿ ದೀರ್ಘ ಬಾಳಿಕೆ ಬರುವ ಮತ್ತು ನೈಸರ್ಗಿಕ ಸಂಪನ್ಮೂಲ ಆಸ್ತಿಗಳನ್ನು ಸೃಜಿಸಿ ಅಂತರ್ಜಲವನ್ನು ಹೆಚ್ಚಿಸುವುದು ಮತ್ತು ಮಣ್ಣಿನಲ್ಲಿ ತೇವಾಂಶವನ್ನು ಹೆಚ್ಚಿಸುವುದು.

ii) ರಾಜ್ಯದ 139 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸಿ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸಿ ವಲಸೆ ತಗ್ಗಿಸುವುದು.

iii) ಅನುಷ್ಠಾನ ಇಲಾಖೆಯ ಕಾರ್ಯಕ್ರಮಗಳನ್ನು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಒಗ್ಗೂಡಿಸುವುದು.

## ಒಗ್ಗೂಡಿಸುವಿಕೆ ಎಂದರೇನು?

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮುಖ್ಯ ಉದ್ದೇಶ ದೀರ್ಘಕಾಲೀನವಾಗಿ ಬಾಳಿಕೆ ಬರುವಂತಹ

ಜಿಲ್ಲಾ ಐಇಸಿ ಸಂಯೋಜಕರು, ಹಾವೇರಿ ಜಿಲ್ಲಾ ಪಂಚಾಯತಿ



ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಭಾಗದ ಜನರ ಜೀವನೋಪಾಯ ಮಾರ್ಗಗಳನ್ನು ಬಲ ಪಡಿಸಲು ಗ್ರಾಮ ಪಂಚಾಯತಿ ಮತ್ತು ಸಂಬಂಧಿಸಿದ ಇಲಾಖೆಗಳಲ್ಲಿ ಲಭ್ಯವಿರುವ ಯೋಜನೆಗಳ ಸಂಪನ್ಮೂಲಗಳನ್ನು ಎಂಜಿಎನ್ ಆರ್ಇಜಿಎ ಯೊಂದಿಗೆ ಒಗ್ಗೂಡಿಸುವುದರ ಮೂಲಕ ಅನುಷ್ಠಾನ ಮಾಡುವುದು. ಈ ರೀತಿಯ ಸಂಪನ್ಮೂಲವು ಕೇವಲ ಹಣಕಾಸಿನ ಲಭ್ಯತೆ ಸೀಮಿತ ಗೊಳಿಸಿಕೊಳ್ಳದೆ ಸಂಬಂಧಿಸಿದ ಇಲಾಖೆಯಲ್ಲಿರುವ ಅಧಿಕಾರಿಗಳ ತಾಂತ್ರಿಕ ಪರಿಣತಿ ಮತ್ತು ಜ್ಞಾನವನ್ನು ಬಳಸಿಕೊಳ್ಳುವುದನ್ನು ಒಳಗೊಂಡಿದೆ.

### ಒಗ್ಗೂಡಿಸುವಿಕೆಯ ವಿಧಾನಗಳು:

ಎಲ್ಲಾ ಒಗ್ಗೂಡಿಸುವಿಕೆಯ ಪ್ರಕ್ರಿಯೆಗಳು ಕಾಯ್ದೆ ಮತ್ತು ಸಂಬಂಧಿಸಿದ ಕಾರ್ಯಕ್ರಮಗಳ ಮಾರ್ಗಸೂಚಿಗಳಲ್ಲಿ ರೂಪಿಸಿರುವ ಉದ್ದೇಶಗಳು ಮತ್ತು ನಿಬಂಧನೆಗೆ ಒಳಪಟ್ಟಿರಬೇಕು. ಒಗ್ಗೂಡಿಸುವಿಕೆಯ ಅನುಷ್ಠಾನ ಇಲಾಖೆಗಳು ಕೆಲವೊಂದು ಅಂಶಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ.

1) ಸದರಿ ಯೋಜನಯಡಿ ಕೇವಲ ಉದ್ಯೋಗ ಚೀಟಿದಾರರು ಕೆಲಸ ನಿರ್ವಹಿಸಬೇಕು.
2) ಕಾಮಗಾರಿ ಸ್ಥಳದಲ್ಲಿ ಹಾಜರಾತಿ ಪಟ್ಟಿಯನ್ನು ಇಡಬೇಕು ಹಾಗೂ ಅದರ ಪ್ರತಿಯನ್ನು ಗ್ರಾಮ ಪಂಚಾಯತಿಯಲ್ಲಿ ಮತ್ತು ಸಂಬಂಧಿಸಿದ ಮಾಹಿತಿಗಳು ಎಂಐಎಸ್‌ನಲ್ಲಿ ಅಪ್‌ಲೋಡ್ ಮಾಡಬೇಕು.
3) ಗ್ರಾಮ ಸಭೆಗಳ ಮೂಲಕ ಸಾಮಜಿಕ ಲೆಕ್ಕ ಪರಿಶೋಧನೆಯನ್ನು ನಿಯಮಿತವಾಗಿ ನಡೆಸಬೇಕು.
4) ಕೂಲಿ ಪಾವತಿಯನ್ನು ಬ್ಯಾಂಕ್ ಖಾತೆ ಹಾಗೂ ಆಧಾರ ಜೋಡಣೆ ಮೂಲಕವೇ ಮಾಡಬೇಕು.
5) ಸಾಮಗ್ರಿ ವೆಚ್ಚವು ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಕುಶಲ ಮತ್ತು ಅರೆಕುಶಲ ಕಾರ್ಮಿಕರ ವೇತನವನ್ನು ಒಳಗೊಂಡಂತೆ ಯೋಜನಾ ವೆಚ್ಚದ ಶೇ.40ರಷ್ಟು ಮೀರಬಾರದು.
6) ಕಾಮಗಾರಿಗಳಿಗೆ ಯಂತ್ರಗಳನ್ನು ಬಳಸುವಂತಿಲ್ಲ.

### ಒಗ್ಗೂಡಿಸುವಿಕೆ ಯೋಜನಾ ತಯಾರಿಕೆ ಕ್ರಮಗಳು

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನಯಡಿ ಒಗ್ಗೂಡಿಸುವಿಕೆಯಡಿ ಗುರುತಿಸಲಾದ ಕಾಮಗಾರಿಗಳ ಅನುಷ್ಠಾನಿಸಲು ಮತ್ತು ವೈಯಕ್ತಿಕ ಫಲಾನುಭವಿಗಳಿಂದ ಬೇಡಿಕೆ ಪಡೆಯಲು ಗ್ರಾಮ ಪಂಚಾಯತಿಯ ಗ್ರಾಮ ಸಭೆಗಳಲ್ಲಿ ಚರ್ಚಿಸಿ ಆದ್ಯತಾ ಕಾಮಗಾರಿಗಳ ಗುಚ್ಛವನ್ನು ತಯಾರಿಸಿ ಅನುಮೋದನೆ ಪಡೆಯಬೇಕು. ಒಂದು ವೇಳೆ ಹಣಕಾಸಿನ ಮೂಲವು ಎಂಜಿಎನ್ಆರ್ಇಜಿಎ ಹೊರತುಪಡಿಸಿ ಒಂದಕ್ಕಿಂತ ಹೆಚ್ಚಿದ್ದರೆ, ಅಂತಹ ಸಂದರ್ಭದಲ್ಲಿ ವಿವಿಧ ಇಲಾಖೆಗಳು ತಮ್ಮ ಚಟುವಟಿಕೆಗಳು ಮತ್ತು ಹಣಕಾಸಿನ ಮೂಲದ ಕುರಿತು ಸ್ಪಷ್ಟವಾಗಿ ವಿವರಿಸಿ ಸಮ್ಮಿಶ್ರ ಯೋಜನೆಯನ್ನು ತಯಾರಿಸಬೇಕು. ಎಂಜಿಎನ್ಆರ್ಇಜಿಎ ನೀಡಿರುವ ಅವಕಾಶದಂತೆ ಗ್ರಾಮ ಪಂಚಾಯತಿಗಳು ಕಾಮಗಾರಿಗಳನ್ನು ಅನುಷ್ಠಾನವನ್ನು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ 60:40ರ ಕೂಲಿ ಮತ್ತು ಸಾಮಗ್ರಿ ಅನುಪಾತವನ್ನು ಪಾಲಿಸಬೇಕು.

### ಒಗ್ಗೂಡಿಸುವಿಕೆಯ ಕಾಮಗಾರಿಗಳ ಅನುಷ್ಠಾನ :

ಎಂ.ಜಿ. ನರೇಗಾ ಯೋಜನೆಯ ಒಗ್ಗೂಡಿಸುವಿಕೆ ಯಡಿ ಕಾಮಗಾರಿಗಳ ಅನುಷ್ಠಾನವನ್ನು 2 ಭಾಗಗಳನ್ನಾಗಿಸಿದೆ. ಅದರಲ್ಲಿ ಪೂರ್ಣ ಗೊಂಡಿರುವುದು ಅಥವಾ ಚಾಲ್ತಿಯಲ್ಲಿರುವುದು ಹಾಗೂ ಕಾಮಗಾರಿಗಳ ಸ್ವರೂಪದಲ್ಲಿ ಯೋಜನೆ ಯನ್ನು ರೂಪಿಸಬೇಕಾಗಿರುತ್ತದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಒಗ್ಗೂಡಿಸುವಿಕೆ ಯೋಜನೆಗಳ ಮುಖ್ಯಸ್ಥರಾಗಿರುತ್ತಾರೆ. ಇಂತಹ

ಕಾರ್ಯಕ್ರಮಗಳ ಯೋಜನೆ ತಯಾರಿ ಮತ್ತು ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುತ್ತಾರೆ. ಅನುಷ್ಠಾನ ಇಲಾಖೆಗಳು ತಮ್ಮ ಲಾಗಿನ್‌ನಿಂದ ಕೂಡ ಎಎನ್‌ಎಮ್‌ಆರ್ ಜನರೇಟ್ ಮಾಡಿ ಕಾಮಗಾರಿ ಅನುಷ್ಠಾನ ಗೊಳಿಸಬಹುದು ಅಥವಾ ಗ್ರಾಮ ಪಂಚಾಯಿತಿ ಲಾಗಿನಿಂದ ಕಾಮಗಾರಿ ಅನುಷ್ಠಾನಗೊಳಿಸಲು ಅವಕಾಶ ಮಾಡಿಕೊಡಲಾಗಿದೆ.



## ಒಗ್ಗೂಡಿಸುವಿಕೆಯಡಿ ಅರಣ್ಯ ಕಾಮಗಾರಿ ಅನುಷ್ಠಾನ:

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹಾವೇರಿ ಜಿಲ್ಲೆಯಲ್ಲಿ ರಸ್ತೆ ಬದಿ ಸಸಿ ನೆಟ್ಟು ಹಸಿರನ್ನು ಹೆಚ್ಚಿಸಲು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅರಣ್ಯ ಇಲಾಖೆಯೊಂದಿಗೆ ಚರ್ಚಿಸಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಒಗ್ಗೂಡಿಸುವಿಕೆಯಡಿ ಅರಣ್ಯ ಇಲಾಖೆಯ ಲಾಗಿನ್ ಮೂಲಕ ಕಾಮಗಾರಿಗಳ ಅನುಷ್ಠಾನಿಸಲಾಯಿತು.

## ಕಾಮಗಾರಿಗಳ ವಿವರ:

ಅರಣ್ಯ ಇಲಾಖೆಯಿಂದ ಹಾವೇರಿ ಜಿಲ್ಲೆಯಲ್ಲಿ ಮುಜಾಫರ್ ಪುರ್ ಮಾದರಿ ರಸ್ತೆ ಬದಿ ನೆಡುತೋಪು ನಿರ್ವಹಣೆ 5 ವರ್ಷಗಳವರೆಗೆ ಕೈಗೊಳ್ಳುವ ಕಾಮಗಾರಿಗಳು, ರೈತರ ಜಮೀನಿನಲ್ಲಿ ಸಸಿಗಳನ್ನು ನೆಟ್ಟು ನಿರ್ವಹಣೆ ಮಾಡುವುದು. ಸಸಿ ಬೆಳೆಸಿವುದು. ಸಸಿ ಬೆಳೆಸುವುದು ಮತ್ತು ಮುಗಂಡ ಕೆಲಸ. ಮಳೆಗಾಲದಲ್ಲಿ ಸಸಿಗಳನ್ನು ನಿರ್ವಹಣೆ ಮಾಡಿ, ಶೌಚಾಲಯ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಹಾಗೂ ಗ್ರಾಮ ಪಂಚಾಯತ್ ನಿಂದ ಆಯ್ಕೆಯಾದ ಎಸ್.ಸಿ./ಎಸ್.ಟಿ. ಮತ್ತು ಇತರೆ ರೈತ ಫಲಾನುಭವಿಗಳಿಗೆ ವಿತರಿಸುವುದು. ಕಳೆದ ಮೂರು ವರ್ಷದಲ್ಲಿ ಹಾವೇರಿ ಜಿಲ್ಲೆಯಲ್ಲಿ ರಸ್ತೆ ಬದಿ ನೆಡುತೋಪಿನ ಪ್ರಗತಿ ವಿವರ.

## 2015–16ನೇ ಸಾಲಿನ ಕಾಮಗಾರಿಗಳ ಮತ್ತು ಖರ್ಚಾದ ಅನುದಾನದ ವಿವರ.

| ಕ್ರ. ಸಂ. | ತಾಲ್ಲೂಕು | ಕೈಗೊಂಡ ಕಾಮಗಾರಿಗಳ ಸಂಖ್ಯೆ | ಖರ್ಚಾದ ಮೊತ್ತ |
|---|---|---|---|
| 1 | ಬ್ಯಾಡಗಿ | 13 | 8.14 |
| 2 | ಹಾನಗಲ್ಲ | 40 | 15.52 |
| 3 | ಹಾವೇರಿ | 37 | 10.48 |
| 4 | ಹಿರೇಕೆರೂರು | 29 | 13.8 |
| 5 | ರಾಣೆಬೆನ್ನೂರ | 25 | 25.08 |
| 6 | ಸವಣೂರ | 43 | 21.84 |
| 7 | ಶಿಗ್ಗಾಂವ | 35 | 18.39 |
| | ಒಟ್ಟು | 222 | 113.25 |

## 2016-17

| ಕ್ರ. ಸಂ. | ತಾಲೂಕಿನ ಹೆಸರು | ಕೈಗೊಂಡ ಕಾಮಗಾರಿಯ ಉದ್ದ | ಖರ್ಚಾದ ಮೊತ್ತ (ಲಕ್ಷಗಳು) |
|---|---|---|---|
| 1 | ಹಾವೇರಿ | 91 Km (62.60RA) | 37.60 |
| | ಒಟ್ಟು | | 37.60 |

## ಫಲಶೃತಿ:

ಒಗ್ಗೂಡಿಸುವಿಕೆಯಡಿ ನೆಡಲಾದ ಕೃಷಿ ಅರಣ್ಯ ಮತ್ತು ರಸ್ತೆ ಬದಿ ನೆಡು ತೋಪು ಅಭಿವೃದ್ಧಿಯಿಂದ ಹಾವೇರಿ ಜಿಲ್ಲೆಯಲ್ಲಿ ಹಸಿರು ಹೆಚ್ಚಿಸಲು ಗಣನೀಯ ಕೊಡುಗೆ ನೀಡಿದೆ.

1. ರಸ್ತೆ ಬದಿ ನೆಡಲಾದ ಸಸಿಗಳ ನಿರ್ವಹಣೆ ಮಾಡುತ್ತಿದ್ದು ನಾಲ್ಕೈದು ವರ್ಷದಲ್ಲಿ ಮರಗಳಾಗಿ ಬೆಳೆದು ರಸ್ತೆಯಲ್ಲಿ ಸಂಚಿಸಿರುವ ಪ್ರಯಾಣಿಕರಿಗೆ ನೆರಳು ನೀಡಲಿದೆ. ಮರಗಳಿಂದ ಮಳೆ ನೀರು ಭೂಮಿಯಲ್ಲಿ ಇಂಗಿಸಲು ಸಹಕಾರಿಯಾಗಿದೆ. ಸಸಿಗಳ ಬೇರಿನಿಂದ ಮಣ್ಣಿನಲ್ಲಿ ತೇವಾಂಶ ಹೆಚ್ಚಾಗಿರುವುದಲ್ಲದೆ ಬರಡು ಭೂಮಿಯಲ್ಲಿ ಹಸಿರುಕ್ಕಿಸಲು ಸಹಕಾರಿ ಯಾಗಿದೆ.

ಯಶೋಗಾಥೆ



ಎನ್. ಕೃಷ್ಣಪ್ಪ ಕೋಡಿಪಾಳ್ಯ

2015–16ರ ಸಾಲಿಗೆ ದೊಡ್ಡಜಾಲ ಗ್ರಾಮ ಪಂಚಾಯತಿಯನ್ನು ಗಾಂಧಿ ಪುರಸ್ಕೃತ ಗ್ರಾಮವೆಂದು ಗುರುತಿಸಿ ಸರ್ಕಾರದಿಂದ ಗೌರವಿಸಲಾಗಿದೆ.

# ಬೆಂಗಳೂರು ನಗರ ಜಿಲ್ಲೆ ದೊಡ್ಡಜಾಲ: ಅತ್ಯುತ್ತಮ ಗ್ರಾಮ ಪಂಚಾಯತಿ

ಬೆಂಗಳೂರು ಜಿಲ್ಲೆಯ ಉತ್ತರ ತಾಲ್ಲೂಕಿನ ದೊಡ್ಡಜಾಲ ಗ್ರಾಮ ಪಂಚಾಯತಿ ಇಂದು ರಾಜ್ಯದ ಎಲ್ಲರ ಗಮನ ಸೆಳೆದಿರುವಂತಹ ಅತ್ಯುತ್ತಮ ಅಭಿವೃದ್ಧಿ ಕಂಡ ಮಾದರಿ ಗ್ರಾಮ ಪಂಚಾಯತಿ ಎನಿಸಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಈ ಕೆಳಕಂಡ ಗ್ರಾಮಗಳು ಬರುತ್ತವೆ. 1. ದೊಡ್ಡಜಾಲ 2. ಶೆಟ್ಟಿಗೆರೆ 3. ಮುತ್ತುಗದಹಳ್ಳಿ 4. ಬೇಗೂರು 5. ಚಿಕ್ಕನಹಳ್ಳಿ 6. ಮಾಸಗಾನಹಳ್ಳಿ 7. ನವರತ್ನ ಅಗ್ರಹಾರ 8. ಬೋವಿಪಾಳ್ಯ ಈ ಎಲ್ಲಾ ಗ್ರಾಮಗಳಲ್ಲಿಯೂ ಒಟ್ಟು 2000ಕ್ಕೂ ಹೆಚ್ಚು ಪ.ಜಾತಿ/ಪ.ವರ್ಗದ ಜನಸಂಖ್ಯೆ ಇದ್ದು ಶೇ.35ಕ್ಕೂ ಅತಿಹೆಚ್ಚು ಹಿಂ.ವರ್ಗದ ಜನಸಂಖ್ಯೆ ಇಲ್ಲಿದೆ. ಒಕ್ಕಲಿಗ ಸಮಾಜ ಪ್ರಥಮ ಸ್ಥಾನದಲ್ಲಿದ್ದು ಇಲ್ಲಿನ ರೈತರು ಪ್ರಗತಿಪರ ರೈತರೆನಿಸಿದ್ದಾರೆ.



2015–16ರ ಸಾಲಿಗೆ ಗಾಂಧಿ ಪುರಸ್ಕೃತ ಗ್ರಾಮವೆನಿಸಿದ ಈ ಗ್ರಾಮ ಪಂಚಾಯತಿ ಎನಿಸಿ ಕರ್ನಾಟಕ ಸರ್ಕಾರವು ದಿನಾಂಕ 2–12–2016 ರಂದು ಇಲ್ಲಿನ ಅಧ್ಯಕ್ಷರು, ಉಪಾಧ್ಯಕ್ಷರು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀ ಎಚ್.ಕೆ.ಪಾಟೀಲ್ ಗ್ರಾಮೀಣಾಬಿವೃದ್ಧಿ ಮತ್ತು ಪಂ.ರಾಜ್ ಸಚಿವರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ರವರು ರೂ. 5 ಲಕ್ಷ ಚೆಕ್ ಬಹುಮಾನ ನೀಡಿ ಗೌರವಿಸಿದರು.

ಈ ಗ್ರಾಮ ಪಂಚಾಯತಿಯು1. 2007–08ರ ಸಾಲಿಗೆ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರರಾಗಿ ರೂ 5 ಲಕ್ಷ ಬಹುಮಾನ ಸರ್ಕಾರದಿಂದ ಪಡೆದಿದೆ. 2.2008–09ರ ಸಾಲಿನಲ್ಲಿ ಜನವರಿ 26ರ 2009 ರಂದು ಕೇಂದ್ರ ಸರ್ಕಾರದಿಂದ ರೂ. 15 ಲಕ್ಷ ಮೊಬಲಗಿನ ನಗದು ಬಹುಮಾನ ಪಡೆದು ರಾಜ ತ್ಯುತ್ತಮ ಗ್ರಾಮ ಪಂಚಾಯತಿ ಎನಿಸಿದೆ.

ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಲಭ್ಯಗಳು -2, ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



ಎನ್. ಕೆ. ಮಹೇಶ್ ಕುಮಾರ್
ಅಧ್ಯಕ್ಷರು



ನಳಿನ
ಉಪಾಧ್ಯಕ್ಷೆ

### ಶುದ್ಧ ನೀರು ಕುಡಿಯುವ ಘಟಕ

ದೊಡ್ಡಜಾಲ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 1 ಲಕ್ಷ ಲೀಟರ್ ನೀರು ಸರಬರಾಜು ಮಾಡಲು 125ಥ62 ಅಳತೆ ಕಟ್ಟಡ ನಿರ್ಮಿಸಿ ಭೂಮಟ್ಟದ ಜಲಗಾರ ನಿರ್ಮಾಣ ಮಾಡಿ ಶುದ್ಧ ನೀರು ಘಟಕವನ್ನು ಸ್ಥಾಪಿಸಿ ಶುದ್ಧ ನೀರು ಪೂರೈಕೆ ಮಾಡಲಾಗುತ್ತಿದೆ.

ಈ ಗ್ರಾಮ ಪಂಚಾಯತಿ ಎಲ್ಲಾ ಹಳ್ಳಿಗಳಲ್ಲಿ ಶುದ್ಧ ನೀರು ಘಟಕ ಸ್ಥಾಪನೆ ಮಾಡಿ 24 ಗಂಟೆಯೂ ಶುದ್ಧ ನೀರು ದೊರೆಯುವ ವ್ಯವಸ್ಥೆಯಾಗಿರುವುದು ವಿಶೇಷ. ಇಲ್ಲಿ ನೀರಿಗೆ ಬರವಿಲ್ಲ.

### ಆದರ್ಶ ಯುವಕ ಸಂಘಗಳು

1. ಸರ್ವೋದಯ ಯುವಕ ಸಂಘ, 2. ಪುಲಿಕೇಶಿ ಯುವಕ ಸಂಘ3. ಗಜಾನನ ಯುವಕ ಸಂಘ4. ಅಂಬೇಡ್ಕರ್ ಯುವಕ ಸಂಘ 5. ಕೀರ್ತಿ ಸ್ರೀಶಕ್ತಿ ಸಂಘ6. ಮುತ್ಯಾಲಮ್ಮ ಸ್ರೀಶಕ್ತಿ ಸಂಘಗಳಿದ್ದು ನಾಡು ನುಡುಗಾಗಿ ಶ್ರಮಿಸುತ್ತಿವೆ. ಹಳ್ಳಿಗಳಲ್ಲಿ ಉತ್ತಮ ನೈರ್ಮಲ್ಯ ಸಾಧಿಸಿ ಕಸಮುಕ್ತ, ತ್ಯಾಜ್ಯಮುಕ್ತ, ವ್ಯಾಜ್ಯಮುಕ್ತ, ಋಣಮುಕ್ತ ಗ್ರಾಮಗಳಾಗಲು ಶ್ರಮಿಸುತ್ತಿದೆ.

### ಅಂತರ್ಜಲ ಸಂರಕ್ಷಣೆ ಇತರರಿಗೆ ಮಾದರಿ

ಈ ಗ್ರಾಮದಲ್ಲಿ ಬಹುತೇಕ ಪ.ವರ್ಗದ ವಾಲ್ಮೀಕಿ ಜನಸಂಖ್ಯೆ ಇರುವ ಗ್ರಾಮವಾಗಿದ್ದು, ಪ್ರತಿ ಮನೆಗಳಲ್ಲಿಯೂ ನೀರು ಸಂಗ್ರಹಣಾ ಗುಂಡಿ ನಿರ್ಮಿಸಿ ಮಳೆ ನೀರು ಶೇಖರಿಸಿ ಮನೆಯ ದನಕರುಗಳು, ಸ್ನಾನ ಶೌಚಾಲಯಕ್ಕೆ ಬಳಸುವುದಲ್ಲದೇ ಅಂತರ್ಜಲ ಭರ್ತಿ ಮಾಡಲು ಮಳೆ ನೀರು ಕೊಯ್ಲು ಮಾಡಿ ಮಾದರಿ ಎನಿಸಿದೆ.

### ತ್ಯಾಜ್ಯಮುಕ್ತ

ಕಸವನ್ನು ವಾಹನದಿಂದ ಪ್ರತಿದಿನ ಒಣಕಸ–ಹಸಿಕಸ ಸಂಗ್ರಹಿಸಿ ಎಲ್ಲಾ ಗ್ರಾಮಗಳಲ್ಲಿ ನೈರ್ಮಲ್ಯ ಸಾಧಿಸಲಾಗಿದೆ. ಬಯಲು ಮಲ ವಿಸರ್ಜನೆಗೆ ಒಬ್ಬರೂ ಹೋಗುವುದಿಲ್ಲ. ಪ್ರತಿಯೊಬ್ಬರು ಶೌಚಾಲಯ ಹೊಂದಿದ್ದಾರೆ. ಪ.ಜಾತಿ/ಪ.ವರ್ಗದ ಕಡುಬಡವ ಕುಟುಂಬಗಳಿಗೂ ಸ್ವಚ್ಛತಾ ಆಂದೋಲನದಲ್ಲಿ ವೈಯುಕ್ತಿಕ ಶೌಚಾಲಯ ನಿರ್ಮಿಸಿ ಕಸಮುಕ್ತ, ತ್ಯಾಜ್ಯಮುಕ್ತ ಸಂಪೂರ್ಣ ನೈರ್ಮಲ್ಯ ಗ್ರಾಮ ಪಂಚಾಯತಿ ಎನಿಸಿದೆ.

### ಹಾಲು ಉತ್ಪಾದನೆ ಸಹಕಾರ ಸಂಘ ಪುನಶ್ಚೇತನ

ಈ ಗ್ರಾಮ ಪಂಚಾಯಿತಿ ಎಲ್ಲಾ 6 ಗ್ರಾಮಗಳಲ್ಲಿಯೂ ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು ಸುಸಜ್ಜಿತ ಕಟ್ಟಡ ಹೊಂದಿದ್ದು ಪ್ರತಿ ಮನೆಗಳು ಕನಿಷ್ಟ ದಿನಕ್ಕೆ 100 ಲೀಟರ್ ಅಧಿಕ ಹಾಲು ಉತ್ಪಾದಿಸಿ 1000 ದಿಂದ 2000 ಗಳಿಕೆ ಸಂಪಾದಿಸುತ್ತಿದ್ದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 1000ಕ್ಕೂ ಹೆಚ್ಚು ತಾರಸಿ ಮನೆಗಳನ್ನು ಪ್ರತಿ ಊರಿನಲ್ಲಿಯೂ ಶುದ್ಧ ಅಂಗನವಾಡಿ ಕಟ್ಟಡ, ಹಿರಿಯ ಕಿರಿಯ ಪ್ರಾಥಮಿಕ ಕಟ್ಟಡಗಳನ್ನು ವ್ಯಾಜ್ಯಮುಕ್ತ ಆದರ್ಶ ಗ್ರಾಮ ಪಂಚಾಯಿತಿ ಎನಿಸಿದ್ದು, ರಾಜ್ಯದ ಅತ್ಯುತ್ತಮ ಅಭಿವೃದ್ಧಿ ಹೊಂದಿದ ಗ್ರಾಮ ಪಂಚಾಯಿತಿ ಎನ್ನಬಹುದು.

ದೊಡ್ಡಜಾಲ ಗ್ರಾಮ ಪಂಚಾಯಿತಿಗೆ 4 ಅವಧಿ ಅಧ್ಯಕ್ಷರಾಗಿದ್ದ ಶ್ರೀನಿವಾಸ್‌ರವರು ಅತ್ಯಂತ ಪ್ರಾಮಾಣಿಕವಾಗಿ ಶ್ರಮಿಸಿ ಜನಮನ್ನಣೆ ಗಳಿಸಿದಂತ ದಕ್ಷ ಅಧ್ಯಕ್ಷರೆನಿಸಿ ಗ್ರಾಮ ಪಂಚಾಯಿತಿ ಅಭ್ಯುದಯಕ್ಕೆ ಅಡಿಪಾಯ ಹಾಕಿದ್ದಾರೆ. ಹಾಗಾಗಿ ಇವರ ಮಾರ್ಗದರ್ಶನದಲ್ಲಿ ಪ್ರಸಕ್ತ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಉತ್ಸಾಹಿ ಯುವಕ ಮಹೇಶ್‌ಕುಮಾರ್ ಮತ್ತು ಸೇವಾ ಮನೋಭಾವವುಳ್ಳ ಶ್ರೀಮತಿ ನಳಿನಾ ಶ್ರಮಿಸುತ್ತಿದ್ದಾರೆ. ಅಂತೆಯೇ ಶ್ರೀ ಗಂಗಾರಾಂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜನಪ್ರತಿನಿಧಿಗಳ ಆಶೋತ್ತರಕ್ಕೆ ಸ್ಪಂದಿಸುತ್ತಾ ಜನಪರ, ಪ್ರಗತಿಪರ ಚಿಂತನೆಯ ಕ್ರಿಯಾಶೀಲ ಅಧಿಕಾರಿಯಾಗಿದ್ದು ಇಲ್ಲಿನ ಸಿಬ್ಬಂದಿ ಕೂಡ ಸ್ಪಂದಿಸುತ್ತಾ ಈ ಗ್ರಾಮ ಪಂಚಾಯಿತಿಗೆ ಕೀರ್ತಿ ತಂದಿದ್ದಾರೆ.

ಈ ಕ್ಷೇತ್ರದ ವ್ಯಾಪ್ತಿಗೆ ಶ್ರೀ ಕೃಷ್ಣಭೈರೇಗೌಡ ಶಾಸಕರು ಹಾಗೂ ಮಂತ್ರಿಗಳಾಗಿದ್ದು ಕೇಂದ್ರ ಯೋಜನಾ ಸಚಿವರಾದ ಶ್ರೀ ಸದಾನಂದಗೌಡರು ಅಭಿವೃದ್ಧಿಗೆ ಪೂರಕವಾದ ಕರ್ತವ್ಯ ನಿರ್ವಹಿಸಿದ್ದಾರೆ.

ಕವಿಯ(ಕ್ಷ)?ಪ್ರಶ್ನೆ?

# ಕನ್ನಡದ ಉತ್ಸವ–ಕನ್ನಡ ರಾಜ್ಯೋತ್ಸವ

ವಿಜಯನಗರ ಸಾಮ್ರಾಜ್ಯವು ಕರ್ನಾಟಕ ಎಂದು ನಾಮಕರಣವಾಗಿ ಇಲ್ಲಿಗೆ 60 ವರ್ಷಗಳಾಗಿವೆ. ಪ್ರತಿ ವರ್ಷ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಾ ಬರುತ್ತಿದ್ದೇವೆ. ಕನ್ನಡ ಭಾಷೆ, ನಾಡು–ನುಡಿಗಾಗಿ ಹಲವಾರು ಗಣ್ಯ ವ್ಯಕ್ತಿಗಳು ತಮ್ಮ ಜೀವನವನ್ನು ಸವೆದಿದ್ದಾರೆ. ಕನ್ನಡ ಕೃತಿಗಳಿಗೆ ಇದುವರೆಗೆ 8 ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ. ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡಿಗರು ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ.

ಆದರೆ, ಎಷ್ಟೋ ಮಂದಿ ಕನ್ನಡ ಮಾತನಾಡುವುದೇ ಅವಮಾನವೆಂಬಂತೆ ಆಂಗ್ಲ ಬಾಷೆಯ ದಾಸರಾಗಿರುವುದು ಶ್ಲಾಘನೀಯ. ಕರ್ನಾಟಕದಲ್ಲಿ ಹುಟ್ಟಿ ಬೆಳೆದ ಹಲವಾರು ವ್ಯಕ್ತಿಗಳು ಇತರೆ ದೇಶ/ರಾಜ್ಯಗಳಲ್ಲಿ ಉನ್ನತ ಸ್ಥಾನದಲ್ಲಿರುವುದು ಒಮ್ಮೆ ಸಂತೋಷವಾದರೂ, ತಮ್ಮ ತಾಯಿ ನೆಲವನ್ನು ಮರೆತಿರುವುದು ದುಃಖವೆನಿಸುತ್ತದೆ.



## ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.

1. ಮಕ್ಕಳಿಗೆ ಶಾಲಾ ದಿನದಿಂದಲೇ ಕನ್ನಡದ ಬಗ್ಗೆ ಅರಿವು ಮೂಡಿಸಿದಲ್ಲಿ, ಕನ್ನಡದ ಅಳಿವು ಹೇಗೆ ಆದೀತು?
2. ನಮ್ಮ ಮಾತೃ ಭಾಷೆಯೇ ನಮಗೆ ಹೊರೆಯಾದರೆ, ನಮ್ಮ ಹೆತ್ತವರಿಗೆ ಅವಮಾನ ಮಾಡಿದಂತಲ್ಲವೇ?
3. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿರುವ ನಮ್ಮ ಕನ್ನಡಿಗರು, ಕನ್ನಡ ನಾಡಿನ ಬಗ್ಗೆ ತಮ್ಮೊಂದಿನವರಿಗೆ ಹೇಳಿಕೊಳ್ಳುವುದರಲ್ಲಿ ಎಂತಹ ಅವಮಾನ?
4. ಎಲ್ಲಾ ಶಾಲೆಗಳಲ್ಲಿ ಕನ್ನಡವನ್ನು ಒಂದು ಅಧ್ಯಾಯವಾಗಿ ಮಾಡಿದಲ್ಲಿ, ಮಕ್ಕಳಲ್ಲಿ ಭಾಷಾ ಜ್ಞಾನ ಬೆಳೆಯುವುದು ಹೇಗೆ ಕಷ್ಟವಾಗುತ್ತದೆ?
5. ನಮ್ಮ ನೆರೆಹೊರೆಯವರೊಂದಿಗೆ ಅವರ ಭಾಷೆಗೆ ಹೊಂದಿಕೊಳ್ಳಲು ಕಷ್ಟಪಡುವ ನಾವು, ನಮ್ಮ ಭಾಷೆಯನ್ನು ಅವರಿಗೆ ಕಲಿಸಲು ಏಕೆ ಕಷ್ಟಪಡುವುದಿಲ್ಲ?

ಎಂ.ಗೀತಾ
ಮನೆ ನಂ. 413, ಪಿಡಬ್ಲೂಡಿ ಕ್ವಾಟ್ರಸ್,14ನೇ ಬಿ ಅಡ್ಡರಸ್ತೆ,
ಯಲಹಂಕ ನ್ಯೂಟೌನ್, ಬೆಂಗಳೂರು 560006.

# ಹಿತಬಯಸುವ ತಾಯಿ

ಕಾವ್ಯ ವಿಕಾಸ



ಜಿಯಾವುಲ್ಲಾ ಯಳನಾಡು

ಕಲ್ಲು ಕಲೆ ಚೆಲುವು ಗುಡಿಕಂಬ ನಾದ
ಬೆಲ್ಲ ಸವಿನುಡಿಯು ಗಡಿಯಾಚೆ ಸ್ವಾದ
ಮಲೆನಾಡ ಹಸಿರುಸಿರು ಬೆಳವಲದ ಮುತ್ತು
ನದಿ ನದಿಗಳ ಪ್ರಪಾತ ಕನ್ನಡಮ್ಮನ ಸ್ವತ್ತು ॥

ಕವಿ ಕಲಿಗಳ ನಾಡು ಸಿರಿ ನುಡಿಯ ಕಂಪು
ಮೆರೆದರಸುಗಳ ಗತವೈಭವದ ಪೆಂಪು ॥

ಸೊಲ್ಲು ಸೊಲ್ಲಿಗು ತೂಕ ಬಲ್ಲಿದವರ ನುಡಿಪಾಕ
ನಳನಳಿಸೊ ತೋಟ ಚೆಲುವು ಚೆಲ್ಲಿದ ನೋಟ
ಆದರಾತಿಥ್ಯವೀವ ಸಾಮರಸ್ಯದ ಭಾವ
ಔನ್ಯತ್ಯದೌದಾರ್ಯ ಕರಿನೆಲದ ಸ್ವಭಾವ ॥

ಬಾಳುವೆವಿ ಸಾಹಸದಿ ಬೆಳೆಯುವೆವು ಮೇಳೈಸಿ
ಏಳುತೇಳುತ ಹಿಗ್ಗುವೆವು ಸಗ್ಗ ಇಳೆಗಿಳಿಸಿ ॥



ನಿಸರ್ಗ ರಕ್ಷೆಯ ಭೂಮಿ ಸಹೃದಯ ಬೀಡು
ಬಿರುಗಾಳಿ ಭೂಕಂಪವೆರಗದ ಸಮೃದ್ಧ ನೆಲೆವೀಡು
ಕೃಷ್ಣೆ ತುಂಗೆ ಕಾವೇರಿ ಗೋದೆಯರ ಪಾವನೆಯ ನಲುನಾಡು
ಅರಸಿ ಬಂದವಗೆ ಹಾರೈಸುವ ಸ್ಫೂರ್ತಿಯ ಸೂಡು ॥

ಮಂಗಳದಂಗಳ ಹಿತ ಬಯಸುವ ತಾಯಿ
ನೆನೆ ನೆನೆಯುತ ಸದಾ ಮುಕ್ಕಾಗದೆ ಕಾಯಿ ॥

ಮಲ್ಲಿಕ್ ರೆಹಾನ್ ದರ್ಗಾ ಎದುರು, ಎನ್.ಹೆಚ್.-೪ ಸಿರಾ-೫೭೨೧೩೭, ತುಮಕೂರು ಜಿಲ್ಲೆ

ಸುತ್ತೋಲೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 13.10.2016

ಸಂಖ್ಯೆ: ಗ್ರಾಅಪ:37:ಕವಿ:2016

## ಸುತ್ತೋಲೆ

**ವಿಷಯ** : ಕರ್ನಾಟಕ ವಿಕಾಸ ಮಾಸ ಪತ್ರಿಕೆಯನ್ನು ಉತ್ತಮ ಗುಣಮಟ್ಟದೊಂದಿಗೆ ಮುದ್ರಿಸುವ ಕುರಿತು.

**ಉಲ್ಲೇಖ** : ದಿನಾಂಕ:23.09.2016 ರಂದು ನಡೆದ ಸಭಾ ನಡವಳಿ.

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವತಿಯಿಂದ ಕರ್ನಾಟಕ ವಿಕಾಸ ಮಾಸ ಪತ್ರಿಕೆಯನ್ನು ಮುದ್ರಿಸಿ ರಾಜ್ಯದ ಮೂರೂ ಹಂತದ ಪಂಚಾಯತಿಗಳು, ಜಿಲ್ಲಾಧಿಕಾರಿಗಳು, ರಾಜ್ಯದ ಎಲ್ಲಾ ಗ್ರಂಥಾಲಯಗಳಿಗೆ, ರಾಜ್ಯ/ಲೋಕ ಸಭಾ ಸದಸ್ಯರುಗಳಿಗೆ ಹಾಗೂ ಇತರೆ ಇಲಾಖಾ ಮುಖ್ಯಸ್ಥರುಗಳಿಗೆ ಉಚಿತವಾಗಿ ಸರಬರಾಜು ಮಾಡುತ್ತಿರುವುದು ಸರಿಯಷ್ಟೆ.

ಕರ್ನಾಟಕ ವಿಕಾಸ ಮಾಸ ಪತ್ರಿಕೆಯನ್ನು ಇನ್ನೂ ಉತ್ತಮ ಗುಣಮಟ್ಟದೊಂದಿಗೆ ಹೊರತರುವ ಉದ್ದೇಶದಿಂದ ದಿನಾಂಕ:23.09.2016ರ ಸಭೆಯಲ್ಲಿ ಪ್ರತಿ ಮಾಹೆ ಪತ್ರಿಕೆಯಲ್ಲಿ ಪ್ರಕಟಿಸಲು ವಿಷಯಗಳ ಆಯ್ಕೆ ಸಂಬಂಧ ಸಂಪಾದಕೀಯ ಮಂಡಳಿಯನ್ನು ರಚಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ ಹಲವಾರು ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳು ಅನುಷ್ಠಾನವಾಗುತ್ತಿದ್ದು ಎಲ್ಲಾ ಯೋಜನೆಗಳ ಅನುಷ್ಠಾನ ಅದರ ಪ್ರಯೋಜನಗಳು ಜನತೆಗೆ ತಲುಪಲು ಈ ಪತ್ರಿಕೆ ಇಲಾಖೆಯ ಮುಖವಾಣಿಯಂತೆ ಕಾರ್ಯನಿರ್ವಹಿಸಬೇಕೆಂಬುದು ಇದರ ಉದ್ದೇಶವಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಪ್ರತೀ ಶಾಖೆಯ ಮುಖ್ಯಸ್ಥರು ಪ್ರತಿ ಮಾಹೆ ಶಾಖೆಗೆ ಸಂಬಂಧಿಸಿದ ಪ್ರಮುಖ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕನಿಷ್ಟ 2 ಪುಟಗಳ ಲೇಖನ/ಯಶೋಗಾಥೆಗಳನ್ನು ಛಾಯಾಚಿತ್ರದೊಂದಿಗೆ ಸಿದ್ದಪಡಿಸಿ ಕರ್ನಾಟಕ ವಿಕಾಸ ಶಾಖೆಗೆ ಸಾಫ್ಟ್ ಕಾಪಿಯನ್ನು kvrdpr@gmail.com ಗೆ ಹಾಗೂ ಹಾರ್ಡ್ ಕಾಪಿಯನ್ನು ಸಂಪಾದಕರು, ಕರ್ನಾಟಕ ವಿಕಾಸ ಇವರಿಗೆ ಕಳುಹಿಸಲು ಕ್ರಮ ಕೈಗೊಳ್ಳುವುದು. ಇದಕ್ಕಾಗಿ ಆಯಾ ಶಾಖೆಯ ಮುಖ್ಯಸ್ಥರುಗಳು ಒಬ್ಬ ಜವಾಬ್ಧಾರಿಯುತ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಅವರ ವಿವರಗಳನ್ನು ದೂರವಾಣಿ ಸಂಖ್ಯೆಯೊಂದಿಗೆ ಕರ್ನಾಟಕ ವಿಕಾಸ ಶಾಖೆಗೆ ತಿಳಿಸುವುದು.

ಅಲ್ಲದೆ ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ "ಸಚಿವಾಲಯ ಸಂದೇಶ" ಅಂಕಣಕ್ಕಾಗಿ ಸಂಪಾದಕೀಯ ಮಂಡಳಿ ಸಭೆಯಲ್ಲಿ ಆಯ್ಕೆಯಾದ ವಿಷಯದ ಬಗ್ಗೆ ಆಯಾ ಶಾಖೆಯ ನೋಡಲ್ ಅಧಿಕಾರಿಗಳು ಸಿದ್ದಪಡಿಸಿ ಕರ್ನಾಟಕ ವಿಕಾಸ ಶಾಖೆಗೆ ಕಳುಹಿಸಲು ಕ್ರಮವಹಿಸುವುದು.

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್-1) ಹಾಗೂ
ಪ್ರಕಾಶಕರು, ಕರ್ನಾಟಕ ವಿಕಾಸ,
ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ.
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ "ಗ್ರಾಮೀಣ ಗೌರವ ಯೋಜನೆ"ಯಡಿ ಶೌಚಾಲಯ ಜೊತೆಗೆ ಸ್ನಾನದ ಗೃಹ ನಿರ್ಮಾಣ ಮಾಡುವ ಕುರಿತು.

**ಓದಲಾಗಿದೆ** : 1. 2015-16ನೇ ಸಾಲಿನ ಆಯವ್ಯಯ ಘೋಷಣೆ.

2. ಸ ಆ ಸಂಖ್ಯೆ: ಗ್ರಾಅಪ/ರಾನೀನೈಮಿ/ನಿಭಾಅ/ಆರ್ಥಿಕ/115/2013-14 ದಿನಾಂಕ 31.01.2015

**********

**ಪ್ರಸ್ತಾವನೆ:**

ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬಯಲು ಬಹಿರ್ದೆಸೆ ಅಭ್ಯಾಸಗಳನ್ನು ನಿರ್ಮೂಲನೆ ಮಾಡಲು ಅಕ್ಟೂಬರ್ 2, 2014ರಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿರುತ್ತದೆ. ಈ ಯೋಜನೆಯಡಿ ನಿರ್ಮಿಸಿ ಬಳಸುವ ಅರ್ಹ ಫಲಾನುಭವಿಗಳಿಗೆ ರೂ.12,000/-ಗಳ(ಕೇಂದ್ರದ ಪಾಲು ರೂ.7200/- ರಾಜ್ಯದ ಪಾಲು ರೂ.4800/-) ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ ಹಾಗೂ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಕುಟುಂಬಗಳಿಗೆ ರಾಜ್ಯ ಸರ್ಕಾರವು ಎಸ್‌ಸಿಪಿ ಮತ್ತು ಟಿಎಸ್‌ಪಿ ವತಿಯಿಂದ ಹೆಚ್ಚುವರಿಯಾಗಿ ರೂ.3,000/-ಗಳನ್ನು ನೀಡುವ ಮೂಲಕ ಒಟ್ಟು ರೂ.15,000/-ಗಳನ್ನು ಪ್ರೋತ್ಸಾಹಧನವನ್ನಾಗಿ ನೀಡಲಾಗುತ್ತಿದೆ.

ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಕುಟುಂಬಗಳಲ್ಲಿ ದಿನನಿತ್ಯ ಸ್ನಾನಕ್ಕಾಗಿ ಸೂಕ್ತ ವ್ಯವಸ್ಥೆಯಿಲ್ಲದೇ ಬಯಲಿನಲ್ಲಿ ಸ್ನಾನ ಮಾಡುವುದರಿಂದ ಮಹಿಳೆಯರು ತೊಂದರೆ ಅನುಭವಿಸುತ್ತಿರುವುದಲ್ಲದೇ ಅವರ ಸ್ವಾಭಿಮಾನಕ್ಕೆ ಧಕ್ಕೆಯುಂಟಾಗುವ ಪ್ರಸಂಗಗಳು ಎದುರಾಗುವ ಸಾಧ್ಯತೆಗಳು ಇರುತ್ತವೆ. ಗ್ರಾಮೀಣ ಪ್ರದೇಶದಲ್ಲಿನ ಸ್ನಾನಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಿಕೊಡಲು ಸನ್ಮಾನ್ಯ ಮುಖ್ಯಮಂತ್ರಿಗಳು ಫೆಬ್ರವರಿ 2014ರ ಆಯವ್ಯಯ ಭಾಷಣದ ಕಂಡಿಕೆ 282ರಲ್ಲಿ "ಗ್ರಾಮೀಣ ಗೌರವ ಯೋಜನೆ" ಪ್ರಾರಂಭಿಸಿ ಅರ್ಹ ಕುಟುಂಬಗಳಿಗೆ ಶೌಚಾಲಯ ಸಹಿತ ಸ್ನಾನದ ಗೃಹಗಳ ನಿರ್ಮಾಣ ಮಾಡಿಕೊಡಲು ಘೋಷಿಸಿರುತ್ತದೆ.

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ರೂ.15000/-ಗಳು, ಮಾನ್ಯ ಶಾಸಕರ ಹಾಗೂ ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ರೂ.4000/-ಗಳನ್ನು ಮತ್ತು ಫಲಾನುಭವಿವಂತಿಗೆ ರೂ.1000/-ಗಳನ್ನು ಸೇರಿಸಿ ಒಟ್ಟು ರೂ.20,000/-ಗಳಲ್ಲಿ ಶೌಚಾಲಯಗಳ ಜೊತೆಗೆ ಸ್ನಾನದ ಗೃಹವನ್ನು ನಿರ್ಮಿಸಿ ಕೊಡುವ 'ಗ್ರಾಮೀಣ ಗೌರವ ಯೋಜನೆ'ಯನ್ನು 31.01.2015ರಿಂದ ಜಾರಿಗೊಳಿಸಿರುತ್ತದೆ.

ಈ ಯೋಜನೆಯ ಅನುಷ್ಠಾನಕ್ಕೆ ಮಾನ್ಯ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಅನುದಾನದ ಹೊಂದಾಣಿಕೆ ಸಮಸ್ಯೆಯಿಂದ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಶೌಚಾಲಯದ ಜೊತೆಗೆ ಸ್ನಾನದ ಗೃಹಗಳನ್ನು ನಿರ್ಮಾಣ ಮಾಡಲು ಎಸ್‌ಸಿಪಿ ಟಿಎಸ್‌ಪಿ ಅನುದಾನದಿಂದ ಭರಿಸಲು ತೀರ್ಮಾನಿಸಲಾಗಿರುತ್ತದೆ.

### ಸರ್ಕಾರಿ ಆದೇಶ RDP/95/RWS&SD/SBM/2016 ದಿನಾಂಕ: 20.10.2016

1. ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಶೌಚಾಲಯ ಸಹಿತ ಸ್ನಾನದಗೃಹಗಳ ನಿರ್ಮಾಣ ಮಾಡಲು ಈಗಾಗಲೇ ನೀಡುತ್ತಿರುವ ರೂ.15000/-ಗಳ ಜೊತೆಗೆ ಬಾಕಿ ಅನುದಾನ ರೂ.4000/-ಗಳನ್ನು ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನದಡಿ ಬಳಸಿಕೊಂಡು ಅನುಷ್ಠಾನ ಮಾಡಲು ತೀರ್ಮಾನಿಸಲಾಗಿರುತ್ತದೆ.

2. 2016-17ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗ್ರಾಮೀಣ ಕುಟುಂಬಗಳಿಗೆ ಶೌಚಾಲಯದ ಜೊತೆಗೆ ಸ್ನಾನದ ಗೃಹಗಳನ್ನು ನಿರ್ಮಾಣ ಮಾಡಲು ತೀರ್ಮಾನಿಸಿದೆ. ಅದರಂತೆ ಪ್ರತಿ ಘಟಕಕ್ಕೆ ರೂ.20,000/-ಗಳ ಪ್ರೋತ್ಸಾಹಧನ ನಿಗದಿಪಡಿಸಿದ್ದು, ಅನುದಾನದ ವಿವರವನ್ನು ಕೆಳಕಂಡಂತೆ ನೀಡಲಾಗಿದೆ.

ನುದಾನದ ವಿವರ.

| | | |
|---|---|---|
| ಸ್ವಚ್ಛ ಭಾರತ್ ಮಿಷನ್ (ಗ್ರಾ) | – | ರೂ.12000/– (ರಾಜ್ಯದ ಪಾಲು ರೂ.4800/–) |
| ಎಸ್.ಸಿ.ಪಿ ಮತ್ತು ಟಿ.ಎಸ್.ಪಿ.ಯಡಿ | – | ರೂ. 7000/– |
| ಫಲನುಭವಿವಂತಿಗೆ | – | ರೂ. 1000/– |
| **ಒಟ್ಟು** | – | **ರೂ.20,000/–** |

**ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯ ಜೊತೆಗೆ ಸ್ನಾನದ ಗೃಹ ನಿರ್ಮಾಣಕ್ಕೆ ಫಲಾನುಭವಿ ಆಯ್ಕೆಯ ಮಾನದಂಡಗಳು.**

1. 2016–17ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಯಡಿ ನಿಗಧಿಪಡಿಸಿರುವ ಗುರಿಗೆ ತಕ್ಕಂತೆ ಗ್ರಾಮ ಪಂಚಾಯಿತಿಗಳಿಗೆ ಗುರಿಗಳನ್ನು ನೀಡುವುದು.
2. 2012ರಲ್ಲಿ ನಡೆಸಿದ ಬೇಸ್‌ಲೈನ್ ಸಮೀಕ್ಷೆಯಲ್ಲಿ ಶೌಚಾಲಯ ರಹಿತವೆಂದು ಗುರುತಿಸಲ್ಪಟ್ಟ ಕುಟುಂಬಗಳನ್ನು ಈ ಯೋಜನೆಗೆ ಆಯ್ಕೆ ಮಾಡುವುದು.
3. ಫಲಾನುಭವಿಯು ಸ್ವಚ್ಛ ಭಾರತ್ ಮಿಷನ್ ಮಾರ್ಗಸೂಚಿಯ ಪ್ರಕಾರ ಅರ್ಹ ಫಲಾನುಭವಿಯಾಗಿರಬೇಕು.
4. ಶೌಚಾಲಯ ನಿರ್ಮಾಣಕ್ಕೆ ನಿರ್ಮಲ ಭಾರತ ಅಭಿಯಾನ/ಸಂಪೂರ್ಣ ಸ್ವಚ್ಚತಾ ಆಂದೋಲನದಡಿಯಲ್ಲಿ ಈ ಮೊದಲು ಪ್ರೋತ್ಸಾಹಧನ ಪಡೆದಿರಬಾರದು.
5. ಶೌಚಾಲಯದ ಜೊತೆಗೆ ಸ್ನಾನದ ಗೃಹ ನಿರ್ಮಾಣ ಮಾಡಲು ಫಲಾನುಭವಿಗೆ ಅಗತ್ಯ ಜಾಗ ಇರಬೇಕು.
6. ಏಖಖಆಐ ಹಾಗೂ ಖಘಖಖಆ ಇಲಾಖೆಗಳು ನೀಡಿರುವ ಪ್ಲಾನ್ ಹಾಗೂ ಎಸ್ಟಿಮೇಟ್‌ಗಳನ್ನು ಲಗತ್ತಿಸಿದ್ದು, ಈ ಮಾದರಿಯಂತೆ ಶೌಚಾಲಯದ ಜೊತೆಗೆ ಸ್ನಾನದ ಗೃಹಗಳನ್ನು ನಿರ್ಮಾಣ ಮಾಡುವುದು.
7. ಶೌಚಾಲಯ ನಿರ್ಮಾಣಕ್ಕೆ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿರಬೇಕು. ಫಲಾನುಭವಿವಂತಿಗೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಂಗ್ರಹಿಸಿ ಜಿಲ್ಲಾ ಜ–ಈಒಖ ಖಾತೆಗೆ ಜಮೆ ಮಾಡಬೇಕಾಗಿರುತ್ತದೆ. ನಂತರ ಫಲಾನುಭವಿಗೆ ಕಾರ್ಯಾದೇಶ ನೀಡಬೇಕು.
8. ನಿರ್ಮಾಣದ ಪೂರ್ವ ಉಕಖ ಛಾಯಚಿತ್ರ ತೆಗೆದು ಪಂಚತಂತ್ರದಲ್ಲಿ ಗಠಿಟಂಚಿಜ ಮಾಡಬೇಕು. ಫಲಾನುಭವಿಯು ಶೌಚಾಲಯದ ಜೊತೆಗೆ ಸ್ನಾನದ ಗೃಹ ಪೂರ್ಣವಾಗಿ ನಿರ್ಮಿಸಿಕೊಂಡು ಬಳಸುತ್ತಿದ್ದಲ್ಲಿ ಪ್ರೋತ್ಸಾಹಧನದ ಜೊತೆಗೆ ಫಲಾನುಭವಿ ನೀಡಿದ ವಂತಿಗೆಯನ್ನು ಸೇರಿಸಿ ರೂ.20,000/–ಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡುವುದು.
9. ಈ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳನ್ನು ಮತ್ತು ಸ್ಥಳವನ್ನು ನಿರ್ಮಾಣದ ಪೂರ್ವ ಮತ್ತು ನಿರ್ಮಾಣದ ನಂತರ ಛಾಯಚಿತ್ರ ತೆಗೆದು ಪಂಚತಂತ್ರ ತಂತ್ರಾಂಶದಲ್ಲಿ ಗುರುತಿಸುವುದು. ಹಾಗೂ ಪ್ರಗತಿಯನ್ನು ಒಆಘಖ ಖಒಖಖ ನಲ್ಲಿ ಕಾಲಕಾಲಕ್ಕೆ ನಮೂದಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ: ಆಇ/402/ವೆಚ್ಚ/6/2013 ದಿ: 30.12.2014 ಮತ್ತು ಯೋಜನಾ ಇಲಾಖೆಯ ಸಹಮತಿ ಸಂಖ್ಯೆ: ಯೋಇ/144/ಯೋವಿವಿ/2014 ದಿ: 17/12/2014 ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಮತಿ ಸಂಖ್ಯೆ: RDP/95/RDWSSD/SBM/2016 ದಿನಾಂಕ 16.08.2016 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಹೆಚ್.ಪಿ. ಪ್ರಕಾಶ್)**
ಆಯುಕ್ತರು ಹಾಗೂ
ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ ಆಯ್ದ ಗ್ರಾಮದಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಹಾಗೂ ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಇವುಗಳ ಸಂಯುಕ್ತ ಆಶ್ರಯದಲ್ಲಿ ಗ್ರಾಮೀಣ ಜನರಿಗೆ ಜನಪ್ರಿಯ ಯೋಜನೆಗಳನ್ನು ಬೀದಿನಾಟಕದ ಮೂಲಕ ತಲುಪಿಸಲಾಯಿತು.






ಗದಗ ಜಿಲ್ಲಾ ಪಂಚಾಯತಿಯಲ್ಲಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸೇರಿದಂತೆ ಎಲ್ಲಾ ಅಧಿಕಾರಿಗಳು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರು ವಾರದಲ್ಲಿ ಎರಡು ದಿನ (ಸೋಮವಾರ ಹಾಗೂ ಗುರುವಾರ) ಯೂನಿಫಾರ್ಮ ವಸ್ತ್ರ ತೊಡಲು ನಿರ್ಧರಿಸಿದ್ದು, ಖಾದಿ ವಸ್ತ್ರವನ್ನು ಬಳಸಲಾಗುತ್ತಿದೆ.

# KARNATAKA VIKAS : NOVEMBER 2016

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
Date of Publication : 8th of Every Month.
RNI No. : 28103 / 1974 Total No. Pages 52, Posted at Bengaluru PSO, Mysore Road, Bengaluru
on 9th, 10th, 11th of every month.

**This issue is Permitted to be posted on 24th November 2016.**



Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Mubarak Ahmed**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : 10.00